ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ನವೆಂಬರ್ 25 ಶುಕ್ರವಾರ 2022

₹4

ಸಂಪುಟ: 43 | ಸಂಚಿಕೆ: 218 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ನಾಳೆ ಜಾನಪದ, ಭಾವಗೀತೆ ಸ್ಪರ್ಧೆ

ಮೈಸೂರು,ನ.24–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥ ವಿದ್ಯಾರ್ಥಿಗಳಿಗಾಗಿ ಅಂತರ ಶಾಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಜಾನಪದ ಮತ್ತು ಭಾವಗೀತೆ ಸ್ಪರ್ಧೆಗಳು ನ.26ರ ಬೆಳಗ್ಗೆ 9ಕ್ಕೆ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಮಾಣಪತ್ರವನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುವುದು. ವಿಜೇತ ಶಾಲೆಗೆ ಪರ್ಯಾಯ ಪಾರಿತೋಷಕ ಹಾಗೂ ಸ್ಮರಣಿಕೆಯನ್ನು ನೀಡಲಾಗುವುದು. ಮಾಹಿತಿಗೆ ಇ.ವಿ.ಉಷಾ, ಮೊ. 9108896871 ಸಂಪರ್ಕಿಸಬಹುದು.

ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ

ಮೈಸೂರು,ನ.24–ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆಯಲ್ಲಿ ಡಾ.ನೀಲಕಂಠನ್ ಸ್ಮರಣಾರ್ಥ ನ.28ರಂದು ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವನ್ನು ಅಂದು ಬೆಳಗ್ಗೆ 9.30ಕ್ಕೆ ರಘುಲಾಲ್ ಅಂಡ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಎನ್.ರಾಘವನ್ ಉದ್ಘಾಟಿಸುವರು. ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವೈ.ಬಿ.ಗಣೇಶ್ ಅಧ್ಯಕ್ಷತೆ ವಹಿಸುವರು. ಹೆಚ್ಚಿನ ಮಾಹಿತಿಗೆ ದೂ.0821-2472102 ಸಂಪರ್ಕಿಸಬಹುದು.


ನ.28, ಪ್ರಶಸ್ತಿ ಪ್ರದಾನ

ಮೈಸೂರು,ನ.24–ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನ.28ರಂದು ಬೆಳಗ್ಗೆ 11 ಗಂಟೆಗೆ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಸಾಹಿತಿ ಒ.ಎಲ್.ನಾಗಭೂಷಣಸ್ವಾಮಿ ಮತ್ತು ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಸದಸ್ಯ ಮತ್ತು ಅಭಿಯಂತರು ಸಂಸ್ಥೆ ಅಧ್ಯಕ್ಷ ಹೆಚ್.ಎಂ.ಸುರೇಶ್ ಬಾಬು ಅವರಿಗೆ ಮಾಜಿ ಗೃಹ ಸಚಿವ ಪಿ.ಜಿ.ಆರ್. ಸಿಂಧ್ಯಾ ಒಡೆಯರ್ ಪ್ರಶಸ್ತಿ ಪ್ರದಾನ ಮಾಡುವರು.

ವಾರ್ಷಿಕ ಮಹಾಸಭೆ

ಮೈಸೂರು,ನ.24–ಮೈಸೂರಿನ ಶ್ರೀ ಶಂಕರ ಜಯಂತಿ ಸಭಾದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ನ.27ರಂದು ಬೆಳಗ್ಗೆ 11 ಗಂಟೆಗೆ ಸರಸ್ವತಿಪುರಂನ ತೆಂಗಿನತೋಪಿನಲ್ಲಿರುವ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.








ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು
ಹಾಗೂ ಮಾಜಿ ಸಚಿವರು ಕರ್ನಾಟಕ ಸರ್ಕಾರ
ಸನ್ಮಾನ್ಯ ಶ್ರೀ
ಜಿ.ಟಿ.ದೇವೇಗೌಡ
ರವರಿಗೆ
73 ನೇ ವರ್ಷದ
ಹುಟ್ಟುಹಬ್ಬದ
ಶುಭಾಶಯಗಳು
ಎಸ್.ಶ್ರೀಕಾಂತ್
ಮಾಲೀಕರು, ಎಸ್.ಆರ್.ವೈನ್ಸ್ ಜಯಪುರ ಮತ್ತು
ಎಸ್.ಡಿ.ವೈನ್ಸ್, ತಳೂರು ಸರ್ಕಲ್
ಶುಭಕೋರುವವರು: ಜಯಪುರ ಗ್ರಾ.ಪಂ ವ್ಯಾಪ್ತಿಯ
ಮುಖಂಡರು ಹಾಗೂ ಗ್ರಾಮಸ್ಥರು

ನಕ್ಕರೆ ಅದೇ ಸ್ವರ್ಗ

ಅವರು : (ಸ್ಯಾರಿ ಅಂಗಡಿಯ ಮುಂದೆ ನಿಂತಿದ್ದವರಿಗೆ) ಬೆಳಗ್ಗೆಯಿಂದ ಸಂಜೆಯಾದರೂ ನಿಂತಿದ್ದೀರಲ್ಲಾ ಏಕೆ?

ಇವರು : ಯಾಕೆ ಅಂತ ಕೇಳ್ತೀರಾ? ನನ್ನ ಹೆಂಡತಿ ಒಳಗೆ ಶಾಪಿಂಗ್ ಮಾಡ್ತಿದ್ದಾಳೆ.

ಮೈಸೂರು ಮಿತ್ರ

ಶುಕ್ರವಾರ, 25 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದೊಡ್ಡವರ ದುಃಖವನ್ನು ಪ್ರಪಂಚವು ಭೂತ ಕನ್ನಡಿಯಲ್ಲಿ ತೋರಿಸುತ್ತದೆ. ಬಡವರ ಕಷ್ಟ ನಷ್ಟಗಳನ್ನು ಯಾರೂ ಗಮನಿಸುವುದಿಲ್ಲ. –ಗೋಲ್ಡ್‌ಸ್ಮಿತ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ನವಿದ್ದರೆ ಸಾರಿಲ್ಲ, ಸಾರಿದ್ದರೆ ಅನ್ನವಿಲ್ಲ

ನಿಮ್ಮ ಪತ್ರಗಳು

ಸಾರ್ವಜನಿಕ ಸ್ಥಳದಲ್ಲಿ ಬ್ಯಾನರ್‌ಗಳನ್ನು ಬ್ಯಾನ್ ಮಾಡಲಿ

ಮಾನ್ಯರೆ,

ಮೈಸೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಬ್ಯಾನರ್ ಹಾವಳಿ ಹೆಚ್ಚಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಸದಸ್ಯರು, ಎಂಎಲ್‌ಎಗಳು, ಸಂಸದರು ಸೇರಿದಂತೆ ಅವರವರ ಹುಟ್ಟುಹಬ್ಬದ ಪ್ರಯುಕ್ತ ಎಲ್ಲೆಂದರಲ್ಲಿ ಬ್ಯಾನರ್‌ಗಳನ್ನು ಅಳವಡಿಸಲಾಗುತ್ತಿದೆ. ಇದನ್ನು ಕಂಡ ಯುವಜನರು ಕೂಡ ಅವರಿಗೇನು ಕಮ್ಮಿಯಿಲ್ಲ ಎಂಬಂತೆ ಬ್ಯಾನರ್‌ಗಳನ್ನು ಹೆಚ್ಚಾಗಿ ಹಾಕುತ್ತಿದ್ದಾರೆ. ಮರ–ಗಿಡಗಳು ವಿದ್ಯುತ್ ಕಂಬ ಹಾಗೂ ಟ್ರಾಫಿಕ್ ಸಿಗ್ನಲ್ ದೀಪಗಳನ್ನು ಸಹ ಲೆಕ್ಕಿಸದೆ ಬ್ಯಾನರ್ ಹಾಕುತ್ತಿದ್ದಾರೆ. ಇದರಿಂದ ವಾಹನ ಸವಾರರಿಗೆ ಸಿಗ್ನಲ್ ದೀಪ ಸರಿಯಾಗಿ ಕಾಣುವುದಿಲ್ಲ. ಬ್ಯಾನರ್ ನೋಡಿ ವಾಹನ ಚಲಾಯಿಸುವಾಗ ಅಪಘಾತವಾಗುವ ಸಾಧ್ಯತೆ ಹೆಚ್ಚಾಗಿದೆ. ಬೆಳೆಯುವ ಗಿಡ–ಮರಕ್ಕೆ ಅಳವಡಿಸಿ ಪರಿಸರ ನಾಶ ಮಾಡುವಂತಾಗಿದೆ. ನಾಯಕರ ಹುಟ್ಟುಹಬ್ಬದ ಆಚರಣೆ ಮುಗಿದು ಅದೆಷ್ಟೋ ದಿನ ಕಳೆದರೂ ಬ್ಯಾನರ್ ಹಾಗೇ ಇರುತ್ತವೆ. ಹೀಗಾಗಿ ಸಾರ್ವಜನಿಕರಿಗೆ ಉಪಯೋಗವಾಗುವ ಬ್ಯಾನರ್‌ಗಳನ್ನು ಬಿಟ್ಟು ಖಾಸಗಿ ಬ್ಯಾನರ್‌ಗಳನ್ನು ಸಾರ್ವಜನಿಕ ಪ್ರದೇಶಗಳಲ್ಲಿ ಅಳವಡಿಸಲು ಅವಕಾಶ ನೀಡಬಾರದು ಹಾಗೂ ಈಗಾಗಲೇ ಅಳವಡಿಸಿರುವ ಬ್ಯಾನರ್‌ಗಳನ್ನು ತೆಗೆಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸಿಕ್ಕ ಸಿಕ್ಕ ಕಡೆ ಬ್ಯಾನರ್ ಅಳವಡಿಸುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಸಾತಗಳ್ಳಿ ಕೆರೆಯನ್ನೂ ಅಭಿವೃದ್ಧಿಪಡಿಸಿ

ಮಾನ್ಯರೆ,

ಅವಸಾನದ ಅಂಚಿಗೆ ತಲುಪಿದ್ದ ದೇವನೂರು ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸಲು ಕಾರ್ಯಪ್ರವೃತ್ತರಾಗಿರುವುದು ಸಂತೋಷದಾಯಕ ಸಂಗತಿ. ಅದೇ ರೀತಿ ಸಾತಗಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸದೆ ಅದನ್ನು ಮುಚ್ಚಿ ಕ್ರಿಕೆಟ್ ಸ್ಟೇಡಿಯಂ ಮಾಡುತ್ತಿರುವುದು ಎಷ್ಟು ನ್ಯಾಯಸಮ್ಮತ. ಸಾತಗಳ್ಳಿ ಕೆರೆಗೆ ಬರುವ ನೀರಿನ ಸೆಲೆ ಬತ್ತಿದೆ ಎಂದು ಹೇಳಿ ಕೆರೆಯನ್ನು ಮುಚ್ಚುವ ಬದಲು ಮಳೆ ನೀರನ್ನು ಸಂಗ್ರಹ ಮಾಡುವ ಮೂಲಕ ಗಮನ ಹರಿಸಿ ಕೆರೆಯನ್ನು ಅಭಿವೃದ್ಧಿ ಪಡಿಸುವುದು ಉತ್ತಮ. ಕ್ರಿಕೆಟ್ ಪ್ರೇಮಿಗಳಿಗೆ ನಿರಾಸೆ ಮಾಡದೆ ಸರ್ಕಾರದವರು ಬೇರೆ ಕಡೆ ಭೂಮಿಯನ್ನು ಗುರುತಿಸಿಕೊಡುವುದು ಸೂಕ್ತವೆನಿಸುತ್ತದೆ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು

ಅನಾಥಾಶ್ರಮದ ಮಕ್ಕಳಿಗೂ ಮೀಸಲಾತಿ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ದತ್ತು ಮಕ್ಕಳು ಸಹ ಅನುಕಂಪದ ಆಧಾರದಲ್ಲಿ ಪೋಷಕರ ಉದ್ಯೋಗ ಪಡೆಯಲು ಅರ್ಹರು ಎಂಬ ಆದೇಶವು ಎಲ್ಲರೂ ಒಪ್ಪುವಂತಹದ್ದಾಗಿದೆ. ಯಾವುದೇ ಗಂಡು ಅಥವಾ ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಂಡರೆ ಎಲ್ಲಾ ಮಕ್ಕಳಂತೆ ಪ್ರೀತಿಯಿಂದ ಸಲಹುತ್ತಾರೆ. ಸಕಲ ಸೌಲಭ್ಯಗಳನ್ನು ಕೊಟ್ಟು ಪ್ರೀತಿಯಿಂದ ಬೆಳೆಸುತ್ತಾರೆ. ಆ ಮಕ್ಕಳಿಗೆ ಎಲ್ಲಾ ಮಕ್ಕಳಂತೆ ಹಕ್ಕುಗಳನ್ನು ಪಡೆಯುವ ಅಧಿಕಾರವಿರುತ್ತದೆ. ಆಕಸ್ಮಿಕವಾಗಿ ದುರ್ಘಟನೆ ನಡೆದರೆ ಕುಟುಂಬದ ಮುಂದಿನ ಭವಿಷ್ಯ ಮುಖ್ಯವಾಗಿರುತ್ತದೆ. ಆ ಕುಟುಂಬದ ಸದಸ್ಯನಾಗಿ ಅವನಿಗೂ ಅರ್ಹತೆಯ ಹಕ್ಕು ಮೀಸಲಿಡಬೇಕು. ಆ ದತ್ತು ಮಕ್ಕಳು ಕುಟುಂಬದ ಆಧಾರವಾಗಿರಬೇಕಲ್ಲವೇ? ಅನುಕಂಪದ ಆಧಾರದ ಮೇಲೆ ಉದ್ಯೋಗ ಪಡೆಯುವುದು ಒಪ್ಪುವಂತಹ ವಿಷಯವಾಗಿದೆ. ಮತ್ತೊಂದು ವಿಷಯವನ್ನು ಗಮನಕ್ಕೆ ತರಲು ಬಯಸುತ್ತೇನೆ. ಯಾವುದೇ ಅನಾಥಾಶ್ರಮದ ಮಕ್ಕಳು ಹಲವಾರು ಕಾರಣಗಳಿಂದ (ಲಿಂಗ ಭೇದ, ಅಂಗವಿಕಲತೆ, ಹಾಗೂ ಕಪ್ಪು ಬಣ್ಣವಿದ್ದರೆ, ಇತ್ಯಾದಿ) ಇಂತಹ ಮಕ್ಕಳನ್ನು ದತ್ತು ಪಡೆಯಲು ಯಾರೂ ಮುಂದೆ ಬರುವುದಿಲ್ಲ. ಇಂತಹವರು ಜೀವನ ಪೂರ್ತಿ ಅನಾಥಾಶ್ರಮದಲ್ಲಿ ಕಾಲ ಕಳೆಯಬೇಕಾಗುತ್ತದೆ. ಆದ್ದರಿಂದ ಇಂತಹ ಮಕ್ಕಳಿಗೆ ಸರ್ಕಾರದಿಂದ ವಿದ್ಯೆ, ಉದ್ಯೋಗಕ್ಕೆ ಮೀಸಲಾತಿ ನೀಡಿ ಅವಕಾಶ ನೀಡಬೇಕು. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ಇಂತಹ ಮಕ್ಕಳಿಗೆ ಸರ್ಕಾರದ ಮೀಸಲಾತಿಯಲ್ಲಿ ಉದ್ಯೋಗ ನೀಡಿದರೆ ಅವರ ಜೀವನವು ಸುಖವಾಗಿ ಕಳೆಯಬಹುದು. ಅನಾಥಾಶ್ರಮದಲ್ಲಿ ಉಳಿದುಕೊಂಡು ಇತರ ಮಕ್ಕಳಿಗೂ ಆಧಾರವಾಗಿರುತ್ತಾರೆ. ಸರ್ಕಾರ ಅನಾಥಾಶ್ರಮದ ಮಕ್ಕಳಿಗೆ ವಿದ್ಯೆ, ಉದ್ಯೋಗವನ್ನು ಮೀಸಲಿಟ್ಟು ಮುಂದಿನ ಜೀವನಕ್ಕೆ ಆಧಾರವಾಗಬೇಕು. ಸರ್ಕಾರ ಇದರ ಬಗ್ಗೆ ಚಿಂತಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ಮನವಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.


ಸ್ವಾಗತಾರ್ಹ ತೀರ್ಪು

ಮಾನ್ಯರೆ,

ಬಿಹಾರ ಮೂಲದ ಅಪರಾಧಿಯೋರ್ವನಿಗೆ ಅಪ್ರಾಪ್ತ ವಯಸ್ಸಿನ ಬಾಲಕಿಯೋರ್ವಳ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 43 ವರ್ಷಗಳ ಜೈಲು ಶಿಕ್ಷೆ ಹಾಗೂ ಐವತ್ತು ಸಾವಿರ ರೂಪಾಯಿಗಳ ದಂಡ ವಿಧಿಸಿರುವ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀಮತಿ ಶೈಮಾ ಖಮ್ರೋಜ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ದೇಶದಲ್ಲಿ ಮಕ್ಕಳು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿರುವ ಸಮಯದಲ್ಲೇ ಈ ತೀರ್ಪು ಹೊರಬಿದ್ದಿದೆ. ಸಾಮಾನ್ಯವಾಗಿ 43 ವರ್ಷಗಳಷ್ಟು ದೀರ್ಘಕಾಲದ ಸೆರೆಮನೆ ವಾಸದ ಶಿಕ್ಷೆ ಇತ್ತೀಚಿನ ವರ್ಷಗಳಲ್ಲಿ ವಿರಳವೆನ್ನಬಹುದಾದರೂ ಆರೋಪಿ ಎಸಗಿರುವ ಹೀನಕೃತ್ಯಕ್ಕೆ ಗಲ್ಲು ಶಿಕ್ಷೆ ಸೇರಿದಂತೆ ಯಾವ ಶಿಕ್ಷೆ ಬೇಕಾದರೂ ನೀಡಬಹುದು. ಆದರೆ ಪ್ರಕರಣದ ಸಮಯ, ಸಂದರ್ಭ, ಸಾಕ್ಷಿ, ಪುರಾವೆಗಳನ್ನು ಪರಿಗಣಿಸಿ, ಘನ ನ್ಯಾಯಾಲಯ ಇಂತಹ ಅಪರೂಪದ ಶಿಕ್ಷೆ ವಿಧಿಸಿದೆ. ಇತ್ತೀಚೆಗೆ ದೆಹಲಿ ಮೂಲದ ಅಫ್ತಾಬ್ ಎಂಬ ಯುವಕ ತನ್ನ ಪ್ರೇಯಸಿ ಶ್ರದ್ಧಾ ಎಂಬ ಯುವತಿಯನ್ನು ಬರ್ಬರ ರೀತಿಯಲ್ಲಿ ಕೊಂದು ಅವಳ ದೇಹವನ್ನು 35 ಭಾಗಗಳನ್ನಾಗಿ ಕತ್ತರಿಸಿ ದೆಹಲಿಯ ವಿವಿಧ ಸ್ಥಳದಲ್ಲಿ ಬಿಸಾಡಿ, ಕಡೆಗೆ ಪೊಲೀಸರಿಗೆ ಸಿಕ್ಕಿಬಿದ್ದಿರುವುದು ಇಡೀ ದೇಶವನ್ನೇ ತಲ್ಲಣಗೊಳಿಸಿದೆ. ಇಂತಹ ಘನಘೋರ ಪಾಶವಿ ಕೃತ್ಯವನ್ನು ಎಸಗಲು ಆತನಿಗೆ ಮನಸ್ಸಾದರೂ ಹೇಗೆ ಬಂತು?

ನಿಜವಾಗಿ ಆತ ಮನುಷ್ಯನೋ ಅಥವಾ ಮನುಷ್ಯ ರೂಪದ ಪಿಶಾಚಿಯೋ ಮುಂತಾದ ಪ್ರಶ್ನೆಗಳು ಮೂಡುತ್ತವೆ. ಅದೇನೇ ಇರಲಿ, ಇಂತಹ ಘೋರ ಪಾತಕಿಗಳಿಗೆ ನ್ಯಾಯಾಲಯಗಳು ಸರಿಯಾದ ಶಿಕ್ಷೆಯನ್ನೇ ವಿಧಿಸಬೇಕು. ಮೈಸೂರು ನ್ಯಾಯಾಲಯದ ಶಿಕ್ಷೆ ಅವುಗಳಿಗೆ ಮಾದರಿಯಾಗಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಆರ್.ಎನ್.ಕುಲಕರ್ಣಿಯವರು ಸಂಜೆ ನಡಿಗೆ ಮೂಲಕ ಅನಂತದೆಡೆಗೆ...

ಬದುಕು ನಿಗೂಢತೆಯಿಂದ ಕೂಡಿರುವ ಒಗಟಾಗಿದೆಯೆಂದು ತೋರುತ್ತದೆ

ಓ ಸಾವೇ,
ನೀನು ಹೆಮ್ಮೆ ಪಡಬೇಡ...
ನಿನ್ನ ಕಲೆಯು ವಿಧಿ,
ಅವಕಾಶ, ರಾಜರು ಮತ್ತು
ಹತಾಶೆಗೊಂಡ ಮನುಷ್ಯರ
ಗುಲಾಮಿತನಕ್ಕೆ ಒಳಪಟ್ಟಿದೆ

–ಜಾನ್ ಡೋನ್‌ರವರ "ಸಾವೇ ನೀನು ಹೆಮ್ಮೆ ಪಡಬೇಡ" ಎಂಬ ಪದ್ಯದಿಂದ

Death, be not proud...
Thou art slave to fate, chance, kings and desperate men...

- From the poem 'Death be not proud' by John Donne

ಒಬ್ಬ ಸಾಮಾನ್ಯ ನಾಗರಿಕ, ನ್ಯಾಯ ಕೋರಿ ಅರ್ಜಿ ಸಲ್ಲಿಸುವ ಸರ್ಕಾರಿ ಅಧಿಕಾರಿಯೇ ಪ್ರಥಮ ನ್ಯಾಯಾಲಯವಾಗಿರುತ್ತದೆ. ಮಾಜಿ ಪ್ರಧಾನಮಂತ್ರಿ ದಿವಂಗತ ವಿಶ್ವನಾಥ ಪ್ರತಾಪ್ ಸಿಂಗ್ (ವಿ.ಪಿ. ಸಿಂಗ್) ಅವರ ಕಾರ್ಯದರ್ಶಿಯೊಬ್ಬರು (ಅವರ ಹೆಸರನ್ನು ನಾನು ಮರೆತಿದ್ದೇನೆ) ಮೈಸೂರಿನ ಎನ್. ರಂಗರಾವ್ ಅಂಡ್ ಸನ್ಸ್ ಕಂಪನಿಯ ರಂಗ ಜ್ಞಾನ ವಿನಿಮಯ ಕೇಂದ್ರದಲ್ಲಿ ಉಪನ್ಯಾಸ ನೀಡಲು ಬಂದಿದ್ದಾಗ, ನ್ಯಾಯಾಲಯದ ಮೂಲ ಸ್ವರೂಪ ಹಾಗೂ ಅರ್ಥ ವಿವರಣೆಯನ್ನು ನೀಡಿದ್ದರು. ಇದಕ್ಕೆ ತದ್ವಿರುದ್ಧವಾಗಿ, ನಾವು ಸಾಂಪ್ರದಾಯಿಕ, ಸಾಂಸ್ಥಿಕ ನ್ಯಾಯಾಲಯಗಳು, ನ್ಯಾಯಪೀಠ, ನ್ಯಾಯಾಧೀಶರು ಹಾಗೂ ನ್ಯಾಯವಾದಿಗಳನ್ನು (ವಕೀಲರು) ಹೊಂದಿದ್ದೇವೆ.


ನಾನು ನವೆಂಬರ್ 11ರ 'ಮೈಸೂರು ಮಿತ್ರ' ಸಂಚಿಕೆಯ 7ನೇ ಪುಟದಲ್ಲಿ ಪ್ರಕಟವಾದ "ನ್ಯಾಯಕ್ಕಾಗಿ ಆರ್.ಎನ್. ಕುಲಕರ್ಣಿ ಅವರ ಸುದೀರ್ಘ ಕಾನೂನು ಹೋರಾಟ" ವರದಿಯನ್ನು ಓದುತ್ತಿದ್ದಾಗ ನ್ಯಾಯಾಲಯದ ಬಗ್ಗೆ ತುಂಬಾ ಮಾನವೀಯ ಕಳಕಳಿಯುಳ್ಳ ಈ ಅರ್ಥ ವಿವರಣೆಯನ್ನು ನೆನಪಿಸಿಕೊಂಡೆ. ಕುಲಕರ್ಣಿ ಅವರು ನಿವೃತ್ತ ಕೇಂದ್ರ ಗುಪ್ತಚರ ವಿಭಾಗದ (ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ–ಐಬಿ) ಅಧಿಕಾರಿಯಾಗಿದ್ದರು. ಪೊಲೀಸ್ ಮೂಲಗಳ ಪ್ರಕಾರ ಉದ್ದೇಶಪೂರ್ವಕವಾಗಿ ಮಾಡಿದಂತಹ ಕಾರು ಅಪಘಾತದಲ್ಲಿ ಇವರು ಇದೇ ತಿಂಗಳ 4ನೇ ತಾರೀಖಿನಂದು ಕೊಲ್ಲಲ್ಪಟ್ಟರು.

ಮೇಲೆ ಹೇಳಲಾದ ವರದಿಯ ಪ್ರಕಾರ, ಕುಲಕರ್ಣಿಯವರು ಪ್ರಥಮ ನ್ಯಾಯಸ್ಥಾನವನ್ನು ಸಂಪರ್ಕಿಸಿ, ಅವರ ನೆರೆಮನೆಯವರು ಅಕ್ರಮವಾಗಿ ಕಟ್ಟುತ್ತಿದ್ದ ಕಟ್ಟಡದ ಬಗ್ಗೆ ದಿನಾಂಕ 18.12.2021ರಂದು ಮೈಸೂರು ಮಹಾನಗರ ಪಾಲಿಕೆಯ ವಲಯ–3ರ ಸಹಾಯಕ ಆಯುಕ್ತರಿಗೆ ದೂರನ್ನು ಸಲ್ಲಿಸಿದ್ದರು. ದೂರು ನೀಡಿ ಎರಡು ತಿಂಗಳಾದರೂ, 'ಪ್ರಥಮ ನ್ಯಾಯಸ್ಥಾನ'ದಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬರಲಿಲ್ಲ. ಈ ನಡುವೆಯೂ ಅಕ್ರಮ ನಿರ್ಮಾಣದ ಕಾಮಗಾರಿ ಮುಂದುವರೆದಿದ್ದರಿಂದ, ಕುಲಕರ್ಣಿಯವರು ದಿನಾಂಕ 11.02.2022ರಂದು ಎರಡನೇ ನ್ಯಾಯಸ್ಥಾನ–ಮೈಸೂರು ನಗರಪಾಲಿಕೆಯ ಆಯುಕ್ತರ ಬಳಿ ತಮ್ಮ ದೂರನ್ನು ಕೊಂಡೊಯ್ದರು. ಈ ನ್ಯಾಯಸ್ಥಾನದಲ್ಲಿಯೂ ಯಾವುದೇ ನ್ಯಾಯ ದೊರೆಯಲಿಲ್ಲವಾದ್ದರಿಂದ, ಕುಲಕರ್ಣಿಯವರು ಅಂತಿಮವಾಗಿ ಸಂವಿಧಾನಿಕ ನ್ಯಾಯಾಲಯದ ಮೆಟ್ಟಿಲೇರಿದರು.

ಸ್ಪಷ್ಟವಾಗಿ, ತಿಂಗಳುಗಳೇ ಉರುಳಿದರೂ, ಈ ಯಾವ ನ್ಯಾಯಪೀಠಗಳಿಂದಲೂ ಕುಲಕರ್ಣಿಯವರಿಗೆ ಯಾವುದೇ ರೀತಿಯ ಪರಿಹಾರ ದೊರಕಲಿಲ್ಲ. ಸುಮಾರು ಒಂದೂವರೆ ವರ್ಷವಾದರೂ, ನ್ಯಾಯ ಸಿಗದೇ ಹೋಗಿದ್ದರಿಂದಾಗಿ ಕುಲಕರ್ಣಿಯವರು ಬೇರೆ ದಾರಿ ಕಾಣದೆ, ತಮ್ಮ ಪಿಂಚಣಿ ಹಣವನ್ನು ಖರ್ಚು ಮಾಡಿಕೊಂಡು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿ, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಕಾನೂನಿನ ಪ್ರಕಾರ ತಮ್ಮ ದೂರಿಗೆ ಸಂಬಂಧಿಸುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು **ಆದೇಶ ನೀಡುವಂತೆ** ನ್ಯಾಯಾಲಯವನ್ನು ಕೋರಿದರು. ಎಂತಹ ಕ್ರೂರ ವಿಧಿ ಅಲ್ಲವೇ. ಘನ ನ್ಯಾಯಾಲಯ ದಿನಾಂಕ 03.11.2022 ರಂದು ಪ್ರಕರಣದ ವಿಚಾರಣೆಯನ್ನು ನಿಗದಿಗೊಳಿಸಿತ್ತು. ಆದರೆ ದುರದೃಷ್ಟವಶಾತ್, ಕುಲಕರ್ಣಿಯವರು ದಿನಾಂಕ 04.11.2022ರ ಸಂಜೆ ಕೊಲ್ಲಲ್ಪಟ್ಟರು.

ವಿಪರ್ಯಾಸವೆಂದರೆ, ನಿಜ ಜೀವನದಲ್ಲಿ ಇಂತಹ ಘಟನೆಗಳು ನಮ್ಮ ಯೋಚನಾ ಶಕ್ತಿಯನ್ನು ಮೀರಿ ಸಂಭವಿಸುತ್ತವೆ. ಇದರಿಂದಾಗಿ, ಯಾವೊಬ್ಬನೂ ಅನ್ಯಾಯದ ಅವಮಾನವಲ್ಲದೇ ಸಾವನ್ನು ಕೂಡ ಎದುರಿಸಬೇಕಾಗುತ್ತದೆ. ಅದು ಹಾಗಿರಲಿ.

'ಮೈಸೂರು ಮಿತ್ರ'ನ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಫೆಬ್ರವರಿ 16, 1978ರಂದು ಪ್ರಾರಂಭವಾಯಿತು. ಆ ಸಂದರ್ಭದಲ್ಲಿ, ಇರಾನಿನಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿ, ಅಲ್ಲಿನ ಆಧ್ಯಾತ್ಮಿಕ ಮುಖ್ಯಸ್ಥ ಅಯತುಲ್ಲಾ ಖೋಮೇನಿ, ಪ್ಯಾರಿಸ್ ನಗರದಲ್ಲಿ ಅಜ್ಞಾತವಾಸಿಯಾಗಿದ್ದರು. 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯು ಇರಾನಿನಲ್ಲಿ ಉಂಟಾಗುತ್ತಿದ್ದ ರಾಜಕೀಯ ಬೆಳವಣಿಗೆಗಳಿಗೆ ಸಂಬಂಧಪಟ್ಟ ಸುದ್ದಿಗಳನ್ನು ಪ್ರಕಟಿಸುತ್ತಿತ್ತು. ಏಕೆಂದರೆ, ಮೈಸೂರಿನಲ್ಲಿ ಹಲವು ಇರಾನ್ ವಿದ್ಯಾರ್ಥಿಗಳು ನೆಲೆಸಿದ್ದರು. ಇಂತಹ ಒಂದು ವರದಿಯಲ್ಲಿ ಅಯತುಲ್ಲಾ ಖೋಮೇನಿಯವರ ಭಾವಚಿತ್ರವನ್ನು ನಾವು ಪ್ರಕಟಿಸಿದ್ದೆವು. ಮರುದಿನ ಬೆಳಿಗ್ಗೆ, ಮಫ್ತಿಯಲ್ಲಿದ್ದ ಪೊಲೀಸರೊಬ್ಬರು ತಾನು ಇಂಟೆಲಿಜೆನ್ಸ್ ಬ್ಯೂರೋದಿಂದ ಬಂದಿರುವುದಾಗಿ ತಿಳಿಸಿ, ಅವರ ಮೇಲಧಿಕಾರಿ ನನ್ನನ್ನು ಭೇಟಿಯಾಗಲು ಸಮಯ ಕೋರಿದರು. ಸರಿ, ನಾನು ಒಪ್ಪಿಕೊಂಡೆ.



ಆರ್.ಎನ್. ಕುಲಕರ್ಣಿ

ಮರುದಿನ ಇಂಟೆಲಿಜೆನ್ಸ್ ಬ್ಯೂರೋದ ಓರ್ವ ಯುವ ಅಧಿಕಾರಿ ನಿಗದಿತ ಸಮಯಕ್ಕೆ ನನ್ನ ಬಳಿ ಬಂದರು. ಅವರಿಗೆ ಕುಳಿತುಕೊಳ್ಳಲು ನಾನು ಕುರ್ಚಿ ತೋರಿಸುತ್ತಿದ್ದಂತೆ ಅವರೇ ಸ್ವಯಂ ಪ್ರೇರಿತರಾಗಿ ತಮ್ಮ ಗುರುತಿನ ಚೀಟಿ ತೆಗೆದು ನನ್ನ ಮುಂದಿಟ್ಟರು. ಅದರಿಂದಲೇ ಅವರು ಎಷ್ಟೊಂದು ಸೂಕ್ಷ್ಮ ಮನಸ್ಸಿನವರು ಹಾಗೂ ಶಿಷ್ಟಾಚಾರ ಮನೋಭಾವದವರು ಎಂಬುದನ್ನು ಕಂಡು ಅಚ್ಚರಿಗೊಂಡೆ. ಅಧಿಕಾರಿಯು, ನಾನು ಹೇಗೆ ಮತ್ತು ಎಲ್ಲಿಂದ ಅಯತುಲ್ಲಾ ಖೋಮೇನಿಯವರ ಭಾವಚಿತ್ರವನ್ನು ಪಡೆದುಕೊಂಡೆ ಎಂಬುದನ್ನು ತಿಳಿಯ ಬಯಸಿದರು. ಈ ಭೇಟಿ ಕೇವಲ ನೆಪ ಎಂದೆನಿಸಿತು ನನಗೆ. ನಗರದಲ್ಲಿ ಅಲೆಯನ್ನೇ ಎಬ್ಬಿಸುತ್ತಿರುವ ಸ್ಥಳೀಯ ದಿನಪತ್ರಿಕೆಯ ಸಂಪಾದಕರ ಬಗ್ಗೆ ತಿಳಿದುಕೊಳ್ಳಲು ಅವರು ಆಸಕ್ತರಾಗಿದ್ದಾರೆ ಎಂದು ನಾನು ಯೋಚಿಸಿದೆ. ಅದು ಹಾಗಿರಲಿ, ಆ ಒಂದು ಭೇಟಿಯ ನಂತರ ನಾವು ತುಂಬಾ ಆತ್ಮೀಯವಾದ ಕುಟುಂಬ ಸ್ನೇಹಿತರಾದೆವು.

ನನ್ನ 82 ವರ್ಷ ವಯಸ್ಸಿನ, ಈಗ ಸಾವಿಗೀಡಾಗಿರುವ ಸ್ನೇಹಿತನ ಬಗ್ಗೆ ನಾನೇನು ಹೇಳಲಿ? ಅವರು ಆರೋಗ್ಯವಾಗಿ, ಕ್ರಿಯಾಶೀಲರಾಗಿದ್ದರು. ಪುಸ್ತಕಗಳನ್ನು ಬರೆಯುವುದರಲ್ಲಿ ಮಗ್ನರಾಗಿದ್ದರು ಹಾಗೂ ಇಬ್ಬರು ಗುರುಗಳಾದ ಆರ್ಷಾ ವಿದ್ಯಾದ (ರಿಷಿಕೇಶ ಮತ್ತು ಕೊಯಮತ್ತೂರಿನಲ್ಲಿ ಅವರ ಗುರುಕುಲವಿದೆ) ಸ್ವಾಮಿ ದಯಾನಂದ ಸರಸ್ವತಿ ಮತ್ತು ಹುಬ್ಬಳ್ಳಿಯ ಚಿದ್ರೂಪಾನಂದ ಸ್ವಾಮಿಗಳ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಪಥದತ್ತ ಹೊರಳಿದ್ದರು.

ಕುಲಕರ್ಣಿಯವರು ಈಗಾಗಲೇ ಮೂರು ಕುತೂಹಲಭರಿತ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳೆಂದರೆ: 'Sin of National Conscience' ಓರ್ವ ಇಂಟೆಲಿಜೆನ್ಸ್ ಅಧಿಕಾರಿಯಾಗಿ ತಮ್ಮ 35 ವರ್ಷಗಳ ದೀರ್ಘಕಾಲದ ಅನುಭವವನ್ನು ಈ ಪುಸ್ತಕದಲ್ಲಿ ಸವಿಸ್ತಾರವಾಗಿ ಹಂಚಿಕೊಂಡಿದ್ದಾರೆ. ಅವರ ಎರಡನೇ ಪುಸ್ತಕವು ಐದು ತಲೆಮಾರಿನ ಒಂದು ಕುಟುಂಬ ಕುರಿತದ್ದಾಗಿದೆ. ಇದು ಭಾಗಶಃ ಆತ್ಮಚರಿತ್ರೆಯ ರೂಪದಲ್ಲಿದೆ ಹಾಗೂ ಈ ಪುಸ್ತಕದ ಶೀರ್ಷಿಕೆ '........ and yet God smiles'. ಇನ್ನು ಅವರ ಮೂರನೆಯ ಪುಸ್ತಕದ ಶೀರ್ಷಿಕೆ 'Facets of Terrorism in India' (ಭಾರತದಲ್ಲಿನ ಉಗ್ರವಾದದ ಮುಖಗಳು) ಆಡಳಿತ ವ್ಯವಸ್ಥೆಯ ಅಂತರ್ಮುಖಿಯಾಗಿದ್ದ ಅವರಿಗೆ ಭಯೋತ್ಪಾದನೆ ಮತ್ತು ಬಂಡಾಯ ಸವಾಲಾಗಿದ್ದವು. ಈ ಪುಸ್ತಕವು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರಿಂದ ಲೋಕಾರ್ಪಣೆಗೊಂಡಿತು. ಅದರ ಬಗ್ಗೆ ನಾನು 'ಸ್ಟಾರ್ ಆಫ್ ಮೈಸೂರ್'ನ ಅಬ್ರಕಡಬ್ರಾದಲ್ಲಿ ಬರೆದಿದ್ದೆ.

ಕುಲಕರ್ಣಿಯವರು ತಾವು ಕರ್ತವ್ಯ ನಿರತರಾಗಿದ್ದಾಗ, ತಮ್ಮ ಮೇಲೆ ಹೊಂಚು ಹಾಕಿ ನಡೆಸಿದಂತಹ ಎರಡು ದಾಳಿಯನ್ನು ಹಾಗೂ ಒಮ್ಮೆ ಕೊಲೆ ಯತ್ನದಿಂದ ತಾವು ಪವಾಡ ರೀತಿ ಪಾರಾಗಿ ಬಂದಿದ್ದರೂ ಸಹ, ಈಗ ಅವರು ಶಾಂತಿಯುತ ಸಮಾಜದಲ್ಲಿ ಇದ್ದರೂ ಹತ್ಯೆಗೆ ಒಳಗಾದದ್ದು ಅತ್ಯಂತ ದುರದೃಷ್ಟಕರ ಹಾಗೂ ಅತ್ಯಂತ ದುಃಖದ ಸಂಗತಿಯಾಗಿದೆ.

ಈಗ ಪ್ರಶ್ನೆ: ಶ್ರೀಮಂತರು, ಭ್ರಷ್ಟಾಚಾರಿಗಳು ಹಾಗೂ ಬಲಾಢ್ಯರು ನಿರ್ಭಯರಾಗಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಅನಾಗರಿಕ ಸಮಾಜದತ್ತ ನಾವು ಸಾಗುತ್ತಿದ್ದೇವೆಯೇ?

ನಾಗರಿಕ ಸಮಾಜದಲ್ಲಿ ನಾಗರಿಕರೊಬ್ಬರ ದೂರು, ಸ್ವತಃ ಅವರ ಕೊಲೆಯಲ್ಲಿ ಪರ್ಯಾವಸಾನಗೊಳ್ಳಬಹುದೇ? ಇಲ್ಲಿಯ ದೂರುದಾರರಾದ ಕುಲಕರ್ಣಿಯವರು ವೇದಾಂತವನ್ನು ಅಧ್ಯಯನ ಮಾಡಿದಂತಹವರು ಹಾಗೂ ಧಾರ್ಮಿಕ ಮನೋಭಾವನೆಯನ್ನು ಹೊಂದಿದ್ದವರು. ಅವರು ಸಂಸ್ಕೃತದ ಒಂದು ಪ್ರಸಿದ್ಧ ಉಕ್ತಿಯಾದ **"ಧರ್ಮೋ ರಕ್ಷತಿ ರಕ್ಷಿತಃ"** ಎಂಬುದನ್ನು ಬಲವಾಗಿ ನಂಬಿದ್ದರು. ಇದರ ಅರ್ಥವೆಂದರೆ, "ಯಾರು ಧರ್ಮವನ್ನು (ಸತ್ಯ ಅಥವಾ ಒಳ್ಳೆಯ ನಡವಳಿಕೆ) ರಕ್ಷಿಸುತ್ತಾರೋ ಅಂತಹವರನ್ನು ಧರ್ಮವೇ ರಕ್ಷಿಸುತ್ತದೆ. ದುರದೃಷ್ಟಕರ ಸಂಗತಿ ಎಂದರೆ, ಈ ಪ್ರಕರಣದಲ್ಲಿ, ಕುಲಕರ್ಣಿಯವರು, ನನಗೆ ಗೊತ್ತಿರುವ ಹಾಗೆ, ಧರ್ಮದ ಹಿಂಬಾಲಕರಾಗಿದ್ದರೂ ಸಹ, ಕಳೆದ ನವೆಂಬರ್ 4ರಂದು ಅವರನ್ನು ರಕ್ಷಿಸಲು ಆ ಧರ್ಮ ಮುಂದೆ ಬರಲಿಲ್ಲ.

ಜೀವನದ ಕಟು ಸತ್ಯಗಳಿಂದಾಗಿ, ನಮ್ಮ ನಂಬಿಕೆ ಮತ್ತು ಆದರ್ಶಗಳು ಬಹಳ ದೂರ ಸರಿದಿವೆ ಎಂದು ನಾನು ಊಹಿಸುತ್ತೇನೆ. ಆದ್ದರಿಂದಲೇ ಈ ಲೇಖನದ ಉಪ ಶೀರ್ಷಿಕೆಯಲ್ಲಿ ನಾನು "ಬದುಕು ನಿಗೂಢತೆಯಲ್ಲಿ ಸುತ್ತಿಕೊಂಡಿರುವ ಒಗಟಾಗಿ ತೋರುತ್ತದೆ" ಎಂದು ಬರೆದಿದ್ದೇನೆ.

ನವೆಂಬರ್ 9, 2022 ರಂದು ಗೃಹ ಸಚಿವ ಆರಗ ಜ್ಞಾನೇಂದ್ರರವರು ಕುಲಕರ್ಣಿಯವರ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಲು ಅವರ ಮನೆಗೆ ಭೇಟಿ ನೀಡಿದ್ದರು. ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ತಾವು ನವೆಂಬರ್ 2, 2022ರಂದು ಕುಲಕರ್ಣಿಯವರ ನೆರೆಮನೆಯವರಿಗೆ ನೋಟಿಸ್ ನೀಡಿ ಅಕ್ರಮ ಕಾಮಗಾರಿ ಇತ್ಯಾದಿಗಳನ್ನು ತೆರವುಗೊಳಿಸಬೇಕೆಂಬ ಸೂಚನೆ ನೀಡಿರುವುದಾಗಿ ಹೇಳಿದರು. ಈಗ ಮಹಾ ನಗರ ಪಾಲಿಕೆಯ ಸಿಬ್ಬಂದಿಗಳೇ ಅಕ್ರಮ ನಿರ್ಮಾಣವನ್ನು ತೆರವುಗೊಳಿಸುವುದಾಗಿ ಹೇಳಲಾಯಿತು. ಕುಲಕರ್ಣಿಯವರ ಹತ್ಯೆಯಾದ ನಂತರ, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಕೈಗೊಳ್ಳುವ ಕ್ರಮ ಕುದುರೆಗಳು ಓಡಿ ಹೋದ ನಂತರ ಲಾಯದ ಬಾಗಿಲನ್ನು ಮುಚ್ಚಿದಂತೆ.

ಕೆಲವು ವೇಳೆ ಕುಲಕರ್ಣಿಯವರು ಮೊಂಡುತನದ ಮನುಷ್ಯ ಎಂದು ಕಂಡು ಬರಬಹುದು. ಆದರೆ ಆ ಮೊಂಡುತನ ಒಂದು ಘನ ಉದ್ದೇಶ ಮತ್ತು ತತ್ವಕ್ಕಾಗಿ. ಅವರೊಬ್ಬ ಶ್ರಮಜೀವಿಯಾಗಿದ್ದರು. ಅವರು ಕಾರ್ಯನಿರ್ವಾಹಕ ಕೂಡ ಆಗಿದ್ದರು. ಈ ದಿನಗಳಲ್ಲಿ, ಪ್ರಾಮಾಣಿಕ ಮತ್ತು ಕಷ್ಟಪಟ್ಟು ಕೆಲಸ ಮಾಡುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರನ್ನು ಕಾಣುವುದು ಕೋಳಿಯ ಹಲ್ಲಿನಷ್ಟೆ ವಿರಳವಾದದ್ದು. ನಿಜವಾಗಿ, ಕೆಲವೊಂದು ಅಪವಾದಗಳಿವೆ. ಶುದ್ಧವಾದ ಗಂಭೀರತೆ, ಕರ್ತವ್ಯ ನಿಷ್ಠೆ ಹಾಗೂ ಬದ್ಧತೆಯಿಂದ ಭಾರತ ಸರ್ಕಾರದ ಸೇವೆಯನ್ನು ನಿರ್ವಹಿಸಲು ಹೊರಟ ಅವರು "ದೇಶಕ್ಕೆ ರಾಜನಿಗಿಂತ ಹೆಚ್ಚು ವಿಧೇಯ ವ್ಯಕ್ತಿ"ಯಾಗಿ ಕಂಡು ಬಂದರೆಂಬ ಮಾತಿಗೆ ಸಾಕ್ಷಿಯಾದರು.

ಇದು ಒಂದು ಕ್ರಿಮಿನಲ್ ಪ್ರಕರಣ ಆಗಿರುವುದರಿಂದ, ನ್ಯಾಯಾಲಯದಲ್ಲಿ ಅಧಿಕ ಕಾಲ ನಡೆಯುವ ವಿಚಾರಣೆ ಆಗಿದೆ. ಆದಾಗ್ಯೂ, ನನ್ನ ಸಹಪಾಠಿ ರೊಟೇರಿಯನ್ ಹಾಗೂ ಹಿರಿಯ ನಾಗರಿಕರಾದ ಎಂ.ಎಸ್. ವಿಜಯಶಂಕರ್ ಅವರ ಪತ್ರವನ್ನು ಒಪ್ಪುತ್ತೇನೆ. ಅವರ ಪತ್ರವು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ನವೆಂಬರ್ 9, 2022 ರಂದು ಪ್ರಕಟವಾಗಿದೆ. ಈ ಪತ್ರವನ್ನು "ಮೈಸೂರಿನ ಆತ್ಮೀಯ" ನಾಗರಿಕರನ್ನು ಸಂಬೋಧಿಸಿ ಬರೆದಿದ್ದಾರೆ. ಅವರು ಕೇಳುವ ಪ್ರಶ್ನೆಗಳು: ಸತ್ಯಕ್ಕೆ ಜಯವಾಗುವುದೇ? ಪಾಪಕ್ಕೆ ತಕ್ಕ ಶಾಸ್ತಿ ಆಗುವುದೇ?

ಕೊನೆಯ ಮಾತು: ಒಬ್ಬ ಗುಪ್ತಚರ ವಿಭಾಗದ (ಇಂಟೆಲಿಜೆನ್ಸ್ ಬ್ಯೂರೋ) ಅಧಿಕಾರಿಯಾಗಿ ಹಾಗೂ ಓರ್ವ ಲೇಖಕರಾಗಿ ನಮ್ಮ ದೇಶಕ್ಕೆ ಕುಲಕರ್ಣಿಯವರ ಸಮಗ್ರ ಕೊಡುಗೆಗಳನ್ನು ತುಲನೆ ಮಾಡಿದಾಗ, ಮಹಾಕವಿ ಶೇಕ್ಸ್‌ಪಿಯರ್‌ರವರ ಈ ಕೆಳಕಂಡ ಮಾತುಗಳು ನೆನಪಾಗುತ್ತವೆ.

"ಅವರ ಬದುಕು ಸಭ್ಯವಾಗಿತ್ತು. ಹಾಗೂ ಅವರ ಬದುಕಿನಲ್ಲಿ ಸಮ್ಮಿಳಿತಗೊಂಡ ಜೀವನ ಮೌಲ್ಯಗಳನ್ನು ಕಂಡು ಪ್ರಕೃತಿಯೇ ಮಾರುಹೋಗಬಹುದು. ಮತ್ತು ಇಡೀ ಪ್ರಪಂಚಕ್ಕೆ ಹೇಳಬಹುದು: 'ಇವರೊಬ್ಬ ಆದರ್ಶ ವ್ಯಕ್ತಿಯಾಗಿದ್ದರು'.

"His life was gentle,
and the elements
So mixed in him, that
Nature might stand up
And say to all the
world 'This was a man'!"

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

Email:
voice@starofmysore.com

***



ಆರ್.ಎನ್.ಕುಲಕರ್ಣಿಯವರು ತಮ್ಮ ಸ್ನೇಹಿತರೊಂದಿಗೆ 2013ರಲ್ಲಿ ನ್ಯೂಜಿಲ್ಯಾಂಡ್‌ನ ಕ್ವೀನ್ಸ್‌ಟೌನ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ. (ಎಡದಿಂದ) ಕೆ.ಬಿ.ಗಣಪತಿ, ಆರ್.ಎನ್.ಕುಲಕರ್ಣಿ ಮತ್ತು ಮಾಜಿ ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಎಂ.ಲಕ್ಷ್ಮೀನಾರಾಯಣ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ತನಿಖೆ NIAಗೆ ವರ್ಗಾವಣೆ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣವನ್ನು ಎನ್‌ಐಎಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ಗೃಹಸಚಿವ ಆರಗ ಜ್ಞಾನೇಂದ್ರ ಮಾಹಿತಿ ನೀಡಿದ್ದು, ಮಂಗಳೂರು, ಕಂಕನಾಡಿ ಸಮೀಪ ಇತ್ತೀಚೆಗೆ ನಡೆದ ಕುಕ್ಕರ್ ಸ್ಫೋಟದ ತನಿಖೆಯನ್ನು NIAಗೆ ವರ್ಗಾಯಿಸಲು ನಿರ್ಧರಿಸಿ ಆದೇಶ ಹೊರಡಿಸಿದೆ. ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆಯಲ್ಲಿ ಸಂಗ್ರಹಿಸಲಾದ, ಸಾಕ್ಷ್ಯ ಹಾಗೂ ಇತರ ಮಾಹಿತಿಗಳ ಆಧಾರದ ಮೇಲೆ ಈ ನಿರ್ಧಾರ ಕೈಗೊಂಡಿದೆ. UAPA ಕಾಯಿದೆ ಅನ್ವಯ ತನಿಖೆಯನ್ನು ನಡೆಸಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ನ.27, ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ನ.24– ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ನ.27ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಸ್ತ್ರೀ ರೋಗ ವೈದ್ಯರಿಂದ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.8277888525 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 25 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 218 | ಪುಟಗಳು: 12


ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ಆರ್.ಎನ್. ಕುಲಕರ್ಣಿಯವರು ಸಂಜೆ ನಡಿಗೆ ಮೂಲಕ ಅನಂತದೆಡೆಗೆ...

ಬದುಕು ನಿಗೂಢತೆಯಿಂದ ಕೂಡಿರುವ ಒಗಟಾಗಿದೆಯೆಂದು ತೋರುತ್ತದೆ ■ ಪುಟ–4

ಬೆಳ್ಳಿ ಬೆಳಕು

ಸ್ಥಳ ಅಭಾವದಿಂದ ಇಂದು ಪ್ರಕಟವಾಗಬೇಕಿದ್ದ ಬೆಳ್ಳಿ ಬೆಳಕು ಸಿನಿ ಪುರವಣಿ ನಾಳೆ (ಶನಿವಾರ) ಪ್ರಕಟಗೊಳ್ಳಲಿದೆ.
–ಸಂ

ಡಿಸೆಂಬರ್ 10ರಿಂದಲೇ ಬಿಜೆಪಿ ಚುನಾವಣಾ ಕಣ ಪ್ರವೇಶ

ಕೇಶವ ಕೃಪದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಸೇರಿದಂತೆ ಪ್ರಮುಖ ನಾಯಕರಿಗೆ ಆರ್‌ಎಸ್‌ಎಸ್ ಅಂತಿಮ ಬೋಧನೆ

ಬೆಂಗಳೂರು, ನ.24 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಗೆ ಡಿಸೆಂಬರ್ 10 ರಿಂದಲೇ ಕಣಕ್ಕಿಳಿಯಲು ರಾಜ್ಯ ಬಿಜೆಪಿ ನಿರ್ಧರಿಸಿದೆ.



ಆರ್‌ಎಸ್‌ಎಸ್ ಮತ್ತು ಅದರ ಉಪ ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಹಾಗೂ ಪಕ್ಷದ ಮುಖಂಡರುಗಳನ್ನು ಕೇಶವ ಕೃಪಕ್ಕೆ ಕರೆಸಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 150 ಕ್ಷೇತ್ರಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡು ಕಾರ್ಯತಂತ್ರ ರೂಪಿಸಲಾಗಿದೆ.

ರಾಜ್ಯದ 224 ಕ್ಷೇತ್ರಗಳಲ್ಲೂ ಪಕ್ಷದ ವರಿಷ್ಠರು ನಡೆಸಿರುವ ಸಮೀಕ್ಷೆಗಳ ಆಧಾರದ ಮೇಲೆ ಎ,ಬಿ ಮತ್ತು ಸಿ ದರ್ಜೆಯಲ್ಲಿ ವಿಭಜಿಸಲಾಗಿದೆ. ಗೆದ್ದೇ ಗೆಲ್ಲುವ ಕ್ಷೇತ್ರವನ್ನು ಎ ಎಂದು ಪರಿಗಣಿಸಲಾಗಿದೆ. ಬಿ ವಿಭಾಗದಲ್ಲಿ ಒಂದಷ್ಟು ಶ್ರಮ ವಹಿಸಿದರೆ ಆ ಕ್ಷೇತ್ರವನ್ನು ಗೆಲ್ಲಬಹುದು. ಸಿ ವಿಭಾಗದಲ್ಲಿ ಗೆಲುವು ಸಾಧ್ಯವೇ ಇಲ್ಲ. ಆದರೆ ಚುನಾ ವಣೆಯಲ್ಲಿ ಮತ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು. ಗುಜರಾತ್ ಚುನಾವಣೆ



150 ಕ್ಷೇತ್ರಗಳ ಗೆಲ್ಲುವ ಗುರಿ

ವ್ಯವಸ್ಥಿತ ಪ್ರಕ್ರಿಯೆಗಾಗಿ ಎಬಿಸಿ ದರ್ಜೆಯಾಗಿ ವಿಭಜನೆ

ಬಿಜೆಪಿ ನಾಯಕರಿಗೆ ಆರ್‌ಎಸ್‌ಎಸ್ ಟಿಪ್ಸ್....

- ಇತ್ತೀಚಿನ ದಿನಗಳಲ್ಲಿ ವಿಪಕ್ಷಗಳ ಆರೋಪ ಗಳಿಂದ ಸರ್ಕಾರದ ಪ್ರತಿಷ್ಠೆಗೆ ಧಕ್ಕೆ ಬಂದಿದೆ. ಚುನಾವಣೆಗೆ ಮುನ್ನ ಸರ್ಕಾರದ ವರ್ಚಸ್ಸನ್ನು ಹೆಚ್ಚಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಿ.
- ಪಕ್ಷದಲ್ಲಿ ಒಗ್ಗಟ್ಟಿಲ್ಲ ಎಂಬ ಮಾತುಗಳು ವ್ಯಾಪಕ ವಾಗಿ ಕೇಳಿಬರುತ್ತಿವೆ. ಮೊದಲು ಒಗ್ಗಟ್ಟು ಕಾಯ್ದು ಕೊಳ್ಳಿ, ನಿಮ್ಮ ನಿಮ್ಮ ನಡುವೆ ಇರುವಂತಹ ವೈಮನಸ್ಸಿಗೆ ತಕ್ಷಣ ತೆರೆಬೀಳಲಿ.
- ಹಳೇ ಮೈಸೂರು ಭಾಗದಲ್ಲಿ ಕನಿಷ್ಠ 40 ಸ್ಥಾನಗಳನ್ನು ಗೆಲ್ಲಲೇಬೇಕು. ಅದಕ್ಕೆ ಅನ್ಯ ಪಕ್ಷಗಳ ವರ್ಚಸ್ವಿ ನಾಯಕರನ್ನು ಸೆಳೆಯಿರಿ. ಈ ನಿಟ್ಟಿನಲ್ಲಿ ಯಾವುದೇ ಕ್ರಮ ಅನಿವಾರ್ಯ.
- ದಕ್ಷಿಣ ಭಾಗದಲ್ಲಿ ಪಕ್ಷ ಅಧಿಕ ಸ್ಥಾನ ಗಳಿಸುವ ಜವಾಬ್ದಾರಿಯನ್ನು ಸಚಿವರಾದ ಅಶೋಕ್, ಡಾ. ಅಶ್ವಥ್‌ನಾರಾಯಣ್, ಡಾ. ಸುಧಾಕರ್, ಮುನಿರತ್ನ ಅವರಿಗೆ ನೀಡಲಾಗಿದೆ.

ಐವರು ಸಚಿವರಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದಲೇ ಚುನಾವಣಾ ಉಸ್ತುವಾರಿ ನಿಯೋಜನೆ

ಮುಗಿಯುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಅವರು, ಐವರು ಸಚಿವರನ್ನು ರಾಜ್ಯ ಚುನಾವಣಾ ಉಸ್ತುವಾರಿಗೆ ನೇಮಿಸಲಿದ್ದಾರೆ. ಡಿಸೆಂಬರ್ 10ರಿಂದಲೇ ಈ ಸಚಿವರು ವಾರ್‌ರೂಂನಲ್ಲಿ ಕುಳಿತು ಕೆಲಸ ಮಾಡಲಿದ್ದಾರೆ. ರಾಜ್ಯ ವನ್ನು ಐದು ಭಾಗವಾಗಿ ವಿಂಗಡಿಸಿ, ಪ್ರತಿ ಸಚಿವರಿಗೆ ಸಂಪೂರ್ಣ ಹೊಣೆಗಾರಿಕೆಯನ್ನು ವರಿಷ್ಠರು ನೀಡಲಿದ್ದಾರೆ.

ಈ ಸಚಿವರು ನೀಡುವ ಮಾರ್ಗದರ್ಶನದಂತೆ ನೀವು ನಡೆದುಕೊಳ್ಳಬೇಕು ಹಾಗೂ ಅವರ ಎಲ್ಲಾ ಕೋರಿಕೆಗಳನ್ನು ಈಡೇರಿಸುವ ಕೆಲಸ ನಿಮ್ಮದಾಗಿದೆ ಎಂದು ಮುಖ್ಯಮಂತ್ರಿ ಯವರಿಗೆ ಸಂಘ ಪರಿವಾರದ ಮುಖಂಡರು ಸೂಚಿಸಿದ್ದಾರೆ.

ವಾರ್ ರೂಂನಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ಅವರು ಏನು ಹೇಳುತ್ತಾರೋ ಅದೇ ಅಂತಿಮ. ಕೇಂದ್ರ ವರಿಷ್ಠರ ಮಾರ್ಗದರ್ಶನದಲ್ಲಿ ವಾರ್ ರೂಂ ಕೆಲಸ ಮಾಡುತ್ತದೆ. ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್ ಚುನಾವಣಾ ಕಣಕ್ಕಿಳಿದಿವೆ. ನೀವೂ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುತ್ತಿದ್ದೀರಿ. ಆದರೆ ಪ್ರತಿಪಕ್ಷ ಕಾಂಗ್ರೆಸ್ ಎಸೆಯು ತ್ತಿರುವ ಬಾಣಗಳಿಗೆ ನಿಮ್ಮಿಂದ ಸಮರ್ಪಕ ಉತ್ತರವಿಲ್ಲ. ಅದಕ್ಕೆ ಪ್ರತಿತಂತ್ರ ರೂಪಿಸುತ್ತಿಲ್ಲ ಎಂದು ಪರಿವಾರದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪರಿವಾರದ ಪ್ರತಿಯೊಬ್ಬ ಕಾರ್ಯಕರ್ತನು ತನಗೆ ವಹಿಸಿದ ▶ 10ನೇ ಪುಟಕ್ಕೆ

ಮೀಸಲಾತಿ ಹೆಚ್ಚಳಕ್ಕೆ ಒಕ್ಕಲಿಗರ ಪಟ್ಟು

ಹೋರಾಟಕ್ಕಿಳಿಯುವ ಸಂಬಂಧ ನ.27ರಂದು ಸಮುದಾಯದ ಮುಖಂಡರ ಸಭೆ

ಬೆಂಗಳೂರು, ನ.24 (ಕೆಎಂಶಿ)– ಜನಸಂಖ್ಯೆಗೆ ಅನು ಗುಣವಾಗಿ ನಮಗೂ ಮೀಸಲಾತಿ ಹೆಚ್ಚಿಸಿ ಎಂದು ಒಕ್ಕಲಿಗರು ಬೀದಿಗಿಳಿಯಲು ಮುಂದಾಗಿದ್ದಾರೆ.


ಸಿ.ಎನ್.ಬಾಲಕೃಷ್ಣ

ಮೀಸಲಾತಿಗಾಗಿ ಯಾವ ರೀತಿಯ ಹೋರಾಟ ಹಮ್ಮಿಕೊಳ್ಳ ಬೇಕು ಎಂಬುದಕ್ಕೆ ಸಂಬಂಧಿಸಿದಂತೆ ರಾಜ್ಯ ಒಕ್ಕಲಿಗರ ಸಂಘ ಇದೇ ನ.27 ರಂದು ಮುಖಂಡರ ಸಭೆ ಕರೆದಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶಾಸಕ ಸಿ.ಎನ್. ಬಾಲಕೃಷ್ಣ, ಅಂದು ಬೆಳಿಗ್ಗೆ ಸಮಾಜದ ಮೀಸಲಾತಿ ಹೆಚ್ಚಿಸುವ ವಿಚಾರವಾಗಿ ಸಭೆ ಕರೆಯಲಾ ಗಿದೆ. ಈ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಮುಂದಿನ ಹೋರಾಟದ ಬಗ್ಗೆ ನಿರ್ಣಯ ಮಾಡಲಾಗುತ್ತದೆ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾ ನಂದನಾಥ ಮಹಾಸ್ವಾಮೀಜಿ ಅವರು, ಪಟ್ಟನಾಯಕನಹಳ್ಳಿ ಮಠದ ನಂಜಾವ ಧೂತ ಮಹಾಸ್ವಾಮೀಜಿರವರು ಮತ್ತು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಕುಮಾರ ಚಂದ್ರಶೇಖರನಾಥ ಮಹಾ ಸ್ವಾಮೀಜಿ ಅವರುಗಳು ದಿವ್ಯಸಾನ್ನಿಧ್ಯ ದಲ್ಲಿ ಈ ಸಭೆ ನಡೆಯಲಿದೆ ಎಂದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ ಡಿ.ವಿ. ಸದಾನಂದಗೌಡರು, ಹೆಚ್.ಡಿ ಕುಮಾರಸ್ವಾಮಿ, ರಾಜ್ಯ ಸರ್ಕಾ ರದ ಸಚಿವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸಭೆಗೆ ಆಹ್ವಾನಿ ಸಲಾಗಿದೆ. ಸಮುದಾಯದ ಎಲ್ಲಾ ಮಾಜಿ ಸಚಿವರು, ಸಂಸದರು, ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು, ಸಾಹಿತಿ ಗಳು, ಸಮಾಜದ ವಿವಿಧ ಸಂಘ–ಸಂಸ್ಥೆ ಗಳ ಪ್ರಮುಖರು, ರೈತ ಮುಖಂಡರು, ಕಾರ್ಮಿಕರ ಮುಖಂಡರು, ನೌಕರ ವರ್ಗದವರು, ವಕೀಲರು, ವೈದ್ಯರು, ವಿದ್ಯಾರ್ಥಿಗಳು, ಚಲನಚಿತ್ರ ರಂಗದ ವರು, ಕಲಾವಿದರು, ವಾಣಿಜ್ಯೋದ್ಯಮಿ ಗಳು, ಶಿಕ್ಷಣ ತಜ್ಞರು, ಸ್ಥಳೀಯ ಜನಪ್ರತಿ ನಿಧಿಗಳು, ಇನ್ನಿತರ ಗಣ್ಯರು ಸೇರಿದಂತೆ ರಾಜ್ಯವ್ಯಾಪ್ತಿಯಾಗಿರುವ ಸಮಾಜ ಬಂಧುಗಳು ಈ ಸಭೆಯಲ್ಲಿ ಭಾಗವಹಿಸಲಿ ದ್ದಾರೆ ಎಂದು ಅವರು ತಿಳಿಸಿದರು.

ಒಕ್ಕಲಿಗ ಸಮುದಾಯದ ಜನಸಂಖ್ಯೆ ಹೆಚ್ಚಿದ್ದರೂ ಜಾತಿವಾರು ಜನಗಣತಿ ಸರಿ ಯಾಗಿ ನಡೆದಿಲ್ಲ ಎಂಬ ಅಸಮಾಧಾನವು ಕೇಳಿಬರುತ್ತಿದೆ. ಹೀಗಾಗಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಶೇ.4ರ ಮೀಸಲಾತಿ ನೀಡುತ್ತಿರುವುದು ತುಂಬಾ ಕಡಿಮೆ ಯಾಗಿದ್ದು, ▶ 10ನೇ ಪುಟಕ್ಕೆ

ಅಗರಬತ್ತಿ ಉದ್ಯಮಕ್ಕೆ ಸರ್ಕಾರದ ಸಹಕಾರ

ಮುಖ್ಯಮಂತ್ರಿ ಭರವಸೆ

ಬೆಂಗಳೂರು, ನ.24 (ಕೆಎಂಶಿ): ಅಗರಬತ್ತಿ ಉದ್ಯಮಕ್ಕೆ ಎಲ್ಲಾ ಸಹಕಾರ ನೀಡಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ಅವರು ಇಂದು ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘದ ವತಿಯಿಂದ ಆಯೋಜಿಸಿದ್ದ ಐಮಾ ಎಕ್ಸ್ ಪೋ–2022 ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶ ದಲ್ಲಿ ಈ ಉದ್ಯಮ ಹೆಚ್ಚು ಜನರಿಗೆ ಉದ್ಯೋಗ ನೀಡಿದೆ. ರಾಜ್ಯ ಸರ್ಕಾ ರವು ಸಣ್ಣ ಪುಟ್ಟ ಸಮುದಾಯಗಳಾದ ಕುಂಬಾರ, ಕಮ್ಮಾರ, ಚಮ್ಮಾರ ಸೇರಿದಂತೆ ಇತರ ಸಮುದಾಯಗಳಿಗೆ ಸಾಲ ನೀಡುವ ಯೋಜನೆ ಜಾರಿಗೆ ▶ 10ನೇ ಪುಟಕ್ಕೆ


ಮೈಸೂರು ಜಿಲ್ಲೆಯ 85 ಸಾವಿರ ಯುವ ಮತದಾರರ ಪೈಕಿ ಕೇವಲ 17 ಸಾವಿರ ಮಂದಿ ನೋಂದಣಿ: ಅರ್ಹ ಯುವ ಮತದಾರರ ನೋಂದಣಿಗೆ

‘ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ’ ವಿಶೇಷ ಕಾರ್ಯಕ್ರಮ

- ಜಿಲ್ಲೆಯ ಎಲ್ಲಾ ಪಿಯು, ಪದವಿ ಕಾಲೇಜುಗಳಲ್ಲಿ ಆನ್‌ಲೈನ್ ಮೂಲಕ ಒಂದು ಗಂಟೆ ನೋಂದಣಿ ಪ್ರಕ್ರಿಯೆ
- ನ್ಯೂನತೆ ಸರಿಪಡಿಸಿಕೊಳ್ಳಲು ವೋಟರ್ಸ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್ ಸಾಧನ; ಜಿಲ್ಲಾಧಿಕಾರಿ ಡಾ.ರಾಜೇಂದ್ರ

ಮೈಸೂರು,ನ.24(ಪಿಎಂ)– ಜಿಲ್ಲೆಯ 85 ಸಾವಿರ ಯುವ ಮತದಾರರ ಪೈಕಿ ಕೇವಲ 17 ಸಾವಿರ ಮಂದಿ ಮಾತ್ರವೇ ಕರಡು ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದು, ಹಾಗಾಗಿ ಎಲ್ಲಾ ಅರ್ಹ ಯುವ ಮತದಾರರನ್ನು ನೋಂದಣಿ ಮಾಡಿಸುವ ಸಲುವಾಗಿ ಗುರುವಾರ ಜಿಲ್ಲೆಯಾದ್ಯಂತ ಎಲ್ಲಾ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ‘ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ’ ಶೀರ್ಷಿಕೆಯಡಿ ವಿಶೇಷ ಕಾರ್ಯಕ್ರಮ ನಡೆಸಲಾಯಿತು.

ಆ ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಪ್ರಕ್ರಿಯೆ ನಡೆಯಿತು. ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಈ ವಿಶೇಷ ಕಾರ್ಯಕ್ರಮಕ್ಕೆ ಜಿಲ್ಲಾ ಚುನಾ



ವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಚಾಲನೆ ನೀಡಿದರು. ಇದೇ ವೇಳೆ ಜಿಲ್ಲೆಯಲ್ಲಿ ಯುವ ಮತದಾರರ ನೋಂದಣಿಯು ಜನಗಣತಿ ಸರಾಸರಿಗಿಂತ ಕಡಿಮೆ ಇರುವ ಬಗ್ಗೆ ಅವರು ಮಾಹಿತಿ ನೀಡಿದರು.

ಮುಂದುವರೆದು ಮಾತನಾಡಿದ ಅವರು, ಜಿಲ್ಲೆಯಲ್ಲಿ ಯುವ ಮತದಾರರ ನೋಂದಣಿ ಕಡಿಮೆ ಇರುವ ಅಂಶ ತಿಳಿಯುತ್ತಿದ್ದಂತೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಯಿಂದ ಈ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ. ಇಂದು ಪದವಿ, ಎಂಜಿ ನಿಯರಿಂಗ್, ನರ್ಸಿಂಗ್, ವೈದ್ಯಕೀಯ ಕಾಲೇಜು ಸೇರಿ ದಂತೆ ಎಲ್ಲಾ ಪಿಯು, ಪದವಿ ಕಾಲೇಜುಗಳಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ. ಇಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರಷ್ಟೇ ಸಾಲದು. ಮುಂದಿನ ಪ್ರಕ್ರಿಯೆ ಗಳ ಬಗ್ಗೆಯೂ ಗಮನಹರಿಸಬೇಕು ಎಂದು ವಿದ್ಯಾರ್ಥಿ ನಿಯರಿಗೆ ಸಲಹೆ ನೀಡಿದರು. ▶ 10ನೇ ಪುಟಕ್ಕೆ

> “‘1950’ ಸಂಖ್ಯೆಗೆ ಕರೆ ಮಾಡಿದರೆ ನಮ್ಮ ಕಚೇರಿಯ ಹೆಲ್ಪ್‌ಲೈನ್ ಸೆಂಟರ್‌ಗಳಲ್ಲಿ ಮತದಾರರ ಪಟ್ಟಿ ಸಂಬಂಧ ಯಾವುದೇ ಮಾಹಿತಿ ಪಡೆಯಬಹುದು. ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ ಮತದಾರರ ಮನೆ ಬಾಗಿಲಿಗೆ ಮತಗಟ್ಟೆ ಅಧಿಕಾರಿಗಳೇ ಮತದಾನ ದಿನದಂದು ಭೇಟಿ ನೀಡಿ ಅಂಚೆ ಮತಪತ್ರದ ಮೂಲಕ ಮತದಾನ ಮಾಡಿಸುವ ಉದ್ದೇಶಿತ ಯೋಜನೆ ಪ್ರಸ್ತಾಪಿತ ಹಂತದಲ್ಲಿದೆ. ಹಾಗಾಗಿ ಅಂಗವಿಕಲತೆ ಹೊಂದಿರುವವರು ಅದನ್ನು ಅರ್ಜಿಯಲ್ಲಿ ದಾಖಲಿಸಬೇಕು.
> -ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಚಿಲುಮೆ ವಹಿವಾಟಿನ ನಿಗೂಢತೆ ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ತರಾಟೆ



ಬೆಂಗಳೂರು, ನ.24 (ಕೆಎಂಶಿ)– ಚಿಲುಮೆ ಸಂಸ್ಥೆಯ ಅಕ್ರಮಗಳ ಹಿಂದಿನ ರೂವಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ. ಇಷ್ಟು ದಿನವಾದರೂ ಈ ಅಕ್ರಮ ಸಂಸ್ಥೆಯ ಹಣಕಾಸಿನ ವಹಿವಾಟಿನ ಮೇಲೆ ಈ ಸಂಸ್ಥೆಗೆ ಹಣ ನೀಡಿದವರ ಮೇಲೆ ಯಾಕೆ ಸಿಬಿಐ, ಐಟಿ, ಇಡಿ ದಾಳಿ ನಡೆಸಿಲ್ಲ ಎಂದು ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ಖಾಸಗಿ ಸಂಸ್ಥೆ ಚಿಲುಮೆಗೆ ಮತದಾರರ ಪಟ್ಟಿಯನ್ನು ಪರಿಷ್ಕರಣೆಗೆ ವಹಿಸಿದ್ದರ ಹಿಂದೆ ಬಿಬಿಎಂಪಿ ಮತ್ತು ಚುನಾವಣಾ ಆಯೋಗದ ಅಧಿಕಾರಿಗಳೂ ಇದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ದೂರಿದ್ದಾರೆ. ಹೊಂಗಸಂದ್ರದ ಬಿಜೆಪಿಯ ಕಚೇರಿಯಲ್ಲಿ ಹಾಲಿ ಶಾಸಕರು ಹಾಗೂ ವಿಧಾನಸಭೆಯ ಮುಖ್ಯ ಸಚೇತಕರಾದ ಸತೀಶ್‌ರೆಡ್ಡಿಯವರ ನೇತೃತ್ವದಲ್ಲಿಯೇ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸುವ ಕುರಿತು ತರಬೇತಿ ನೀಡಲಾಗಿದೆ.

ಪರಿಷ್ಕರಣೆ ಕಾರ್ಯಕ್ಕಾಗಿಯೇ 25000 ದಿಂದ 30000 ರೂಪಾಯಿಗಳನ್ನು ನೀಡಿ ನೇಮಕಾತಿ ಮಾಡಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಈ ಹಣದ ಮೂಲದ ಬಗ್ಗೆ ತನಿಖೆ ನಡೆಯಬೇಕು. ನೂರಾರು ಸಂಖ್ಯೆಯ ನೌಕರರಿಗೆ ಸಂಬಳ ಕೊಡಲು ಖರ್ಚು ಮಾಡಿದ ▶ 10ನೇ ಪುಟಕ್ಕೆ

ಕದ್ರಿ ದೇವಸ್ಥಾನ ನಮ್ಮ ಟಾರ್ಗೆಟ್ ಆಗಿತ್ತು

ಮಂಗಳೂರು ಸ್ಫೋಟದ ಹೊಣೆ ಹೊತ್ತ ಇಸ್ಲಾಮಿಕ್ ಸಂಘಟನೆ


ಮಂಗಳೂರು, ನ.24– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಹೊಣೆಯನ್ನು ಇಸ್ಲಾಮಿಕ್ ರೆಸಿಸ್ಟೆನ್ಸ್ ಕೌನ್ಸಿಲ್ ಎಂಬ ಉಗ್ರ ಸಂಘಟನೆ ಹೊತ್ತುಕೊಂಡಿದ್ದು, ಕದ್ರಿ ದೇವಸ್ಥಾನ ನಮ್ಮ ಟಾರ್ಗೆಟ್ ಆಗಿತ್ತು ಎಂದು ಹೇಳಿದೆ. ಅದಲ್ಲದೇ ನಿಮ್ಮ ಸಂಭ್ರಮ ಕ್ಷಣಿಕವಾದುದು, ಸದ್ಯದಲ್ಲೇ ತಕ್ಕ ಪರಿಣಾಮ ಎದುರಿಸಲಿದ್ದೀರಿ ಎಂದು ಎಚ್ಚರಿಕೆ ನೀಡಿದೆ.

ಕುಕ್ಕರ್ ಸ್ಫೋಟದ ವಿಚಾರವಾಗಿ ಇಸ್ಲಾಮಿಕ್ ರೆಸಿಸ್ಟೆನ್ಸ್ ಕೌನ್ಸಿಲ್ ಸಂಘಟನೆಯ ಪತ್ರಿಕಾ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಪೋಸ್ಟ್ ಜೊತೆ ಬಾಂಬ್ ಸ್ಫೋಟದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿರುವ ಆರೋಪಿ ಶಾರಿಕ್ ಫೋಟೋಗಳನ್ನು ಕೂಡ ಅಳವಡಿಸಿ ನವೆಂಬರ್ 23ರಂದು ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ, ಪೊಲೀಸರು ಈ ಬಗ್ಗೆ ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಇದರ ಜೊತೆ ಎಡಿಜಿಪಿ ಅಲೋಕ್‌ಕುಮಾರ್‌ಗೆ ನಿಮ್ಮ ಸಂತೋಷ ಕ್ಷಣಿಕವಾದದ್ದು, ನಿಮ್ಮ ದಬ್ಬಾಳಿಕೆಯ ಫಲವನ್ನು ನೀವು ಸದ್ಯದಲ್ಲಿಯೇ ಅನುಭವಿಸ ಲಿದ್ದೀರಿ ಎಂದು ಪತ್ರದಲ್ಲಿ ಬೆದರಿಕೆ ಹಾಕಲಾಗಿದೆ. ▶ 10ನೇ ಪುಟಕ್ಕೆ

ನಾಳೆ ಕೊಡವ ನ್ಯಾಷನಲ್ ಡೇ

ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣೆಯನ್ ಸ್ವಾಮಿ ಭಾಗಿ


ಎನ್.ಯು.ನಾಚಪ್ಪ


ಸುಬ್ರಮಣೆಯನ್ ಸ್ವಾಮಿ

ಮಡಿಕೇರಿ,ನ.24– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ 32ನೇ ವರ್ಷದ 'ಕೊಡವ ನ್ಯಾಷನಲ್ ಡೇ' 'ಭಾರತದ ಸಂವಿಧಾನ' ದಿನವಾದ ನ.26ರಂದು ನಡೆಯಲಿದ್ದು, ವಿಶ್ವ ವಿಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಕಾನೂನು ಮಾಜಿ ಮಂತ್ರಿ ಡಾ.ಸುಬ್ರಮಣೆಯನ್ ಸ್ವಾಮಿ ಪಾಲ್ಗೊಳ್ಳಲಿದ್ದಾರೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಡಿಕೇರಿ ಸಮೀಪದ ಕ್ಯಾಪಿಟಲ್ ವಿಲೇಜ್‌ನಲ್ಲಿ ಬೆಳಗ್ಗೆ 10.30 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ವಿರಾಟ್ ಹಿಂದೂಸ್ತಾನ್ ಸಂಗಮ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಕೂಡ ಉಪಸ್ಥಿತರಿರುವರು ಎಂದು ಹೇಳಿದರು.

ತಮ್ಮ ಅಧ್ಯಕ್ಷತೆಯಲ್ಲಿ ನಡೆಯುವ ಸಮಾವೇಶದಲ್ಲಿ ಕೊಡವ ಮೂಲ ವಂಶಸ್ಥ ಬುಡಕಟ್ಟು ಸಮುದಾಯಕ್ಕೆ ಎಸ್‌ಟಿ ಪಟ್ಟಿಯಲ್ಲಿ ಮಾನ್ಯತೆ ನೀಡಬೇಕು, ಕೊಡವರ ಧಾರ್ಮಿಕ ಸಂಸ್ಕಾರ ಕೋವಿಗೆ ಸಂವಿಧಾನದ 25, 26ನೇ ವಿಧಿಯಲ್ಲಿ ವಿಶೇಷ ಭದ್ರತೆ ಒದಗಿಸಬೇಕು, ಕೊಡವ ತಕ್‌ಗೆ 8ನೇ ಶೆಡ್ಯೂಲ್ ಸ್ಥಾನಮಾನ ನೀಡಬೇಕು, ಅರಮನೆ ಪಿತೂರಿ ಮತ್ತು ದೇವಟ್ ಪರಂಬುವಿನ ನರಮೇಧದಲ್ಲಿ ಜೀವ ಕಳೆದುಕೊಂಡ ಕೊಡವರ ಸ್ಮರಣೆಗಾಗಿ ಸ್ಮಾರಕ ನಿರ್ಮಾಣ ಮಾಡಬೇಕು, ಕೊಡವರ ಭೂಮಿ, ಸಂಸ್ಕೃತಿ, ಜನಪದ ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಈಶಾನ್ಯ ರಾಜ್ಯದ ಮಾದರಿ 371(ಕೆ) ವಿಧಿಯಂತೆ ರಾಜ್ಯಾಂಗದ ವಿಶೇಷ ಖಾತ್ರಿಗೆ ಸಂಬಂಧಿಸಿದ ಪ್ರಮುಖ ನಿರ್ಣಯ ಸೇರಿದಂತೆ ಕೊಡವರ ಹಿತಾಸಕ್ತಿ ಕಾಪಾಡುವ ಮಹತ್ವದ ಹಕ್ಕೊತ್ತಾಯ ಮಂಡಿಸಿ ಅಂಗೀಕರಿಸಲಾಗುವುದು ಎಂದರು. ಈ ವೇಳೆ ಕೊಡವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಸರ್ವ ಕೊಡವ ಬಂಧುಗಳು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಪಾಲ್ಗೊಳ್ಳುವಂತೆ ನಾಚಪ್ಪ ಮನವಿ ಮಾಡಿದರು.

ಹೊರೆಯಾದರೆ ಬಿಟ್ಟು ಬಿಡಲಿ: ಸಂವಿಧಾನದಡಿ ನಮಗೆ ಸಿಗಬೇಕಾದ ಹಕ್ಕುಗಳ ಬಗ್ಗೆ ಪ್ರತಿಪಾದಿಸಿದರೆ ಅದನ್ನು ನಿರ್ಲಕ್ಷಿಸುತ್ತಾ ಬರಲಾಗುತ್ತಿದೆ. ಕರ್ನಾಟಕ ರಾಜ್ಯಕ್ಕೆ ಕೊಡವರು ಹೊರೆಯಾದರೆ ಬಿಟ್ಟು ಬಿಡಲಿ ಎಂದು ಎನ್.ಯು.ನಾಚಪ್ಪ ಅಸಮಾಧಾನ ವ್ಯಕ್ತಪಡಿಸಿದರು.

1956ರಲ್ಲಿ ಕೊಡಗು ಕರ್ನಾಟಕದೊಂದಿಗೆ ವಿಲೀನವಾದ ನಂತರ ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗ ಕೊಡವರನ್ನು ಬಹುಸಂಖ್ಯಾತ ಪ್ರಬಲ ಜನಾಂಗದವರು ಸಂರಕ್ಷಿಸಬೇಕಾಗಿತ್ತು. ಸಂವಿಧಾನದಡಿ ನಮ್ಮ ಹಕ್ಕುಗಳನ್ನು ನೀಡಬೇಕಾಗಿತ್ತು ಆದರೆ ಬೇಡಿಕೆಗಳನ್ನು ಕಡೆಗಣಿಸುವ ಮೂಲಕ ಇಲ್ಲಿಯವರೆಗಿನ ಎಲ್ಲಾ ಆಡಳಿತ ವ್ಯವಸ್ಥೆಗಳು ಕೊಡವರನ್ನು ಪರಕೀಯರಂತೆ ನೋಡುತ್ತಾ ಬಂದಿವೆ. ಈ ಬೆಳವಣಿಗೆಗಳನ್ನು ಗಮನಿಸಿದರೆ ನಾವು ಹೊರೆಯಾದಂತೆ ಕಾಣುತ್ತಿದೆ. ಕೊಡವರು ಹೊರೆಯಾದರೆ ನಮ್ಮನ್ನು ಬಿಟ್ಟು ಬಿಡಲಿ ಎಂದರು.

ಶೇ.50ಕ್ಕಿಂತ ಹೆಚ್ಚು ಮೀಸಲಾತಿ ನೀಡಬಾರದೆಂದು ನ್ಯಾಯಾಲಯವೇ ಹೇಳಿದೆ. ಆದರೆ ಹಲವರು ಶೇ.60–70ರಷ್ಟು ಮೀಸಲಾತಿಯ ಬೇಡಿಕೆಯನ್ನು ಮುಂದಿಡುತ್ತಿದ್ದಾರೆ. ಈ ರೀತಿಯ ಒತ್ತಡಗಳಿಗೆ ಮಣಿಯುತ್ತಿರುವ ಸರ್ಕಾರಗಳು ಅತಿ ಸಣ್ಣ ಜನಾಂಗವಾದ ಕೊಡವರ ಬಗ್ಗೆ ಯಾಕೆ ಇಷ್ಟೊಂದು ನಿರ್ಲಕ್ಷ್ಯ ತೋರುತ್ತಿವೆ ಎಂದು ಪ್ರಶ್ನಿಸಿದರು.

ಕೊಡವ ಜನಾಂಗದ ಅಧ್ಯಯನದ ಸರ್ವೆ ಕಾರ್ಯಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಅಡ್ಡಿಯಾಗಿದೆ. ಅರ್ಧಕ್ಕೇ ನಿಂತು ಹೋಗಿರುವ ಸರ್ವೆಯನ್ನು ಮುಂದುವರೆಸುವಂತೆ ನ್ಯಾಯಾಲಯದ ಮೂಲಕ ನಾನು ಆದೇಶ ತಂದಿದ್ದರೂ ಆಡಳಿತ ನಡೆಸುವವರು ಯಾವುದೇ ಆಸಕ್ತಿ ತೋರುತ್ತಿಲ್ಲ. ಈ ವಿಚಾರದ ಕುರಿತು ಎಲ್ಲಾ ರಾಜಕೀಯ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ತಿಳಿಸಿದರು.

'ನನ್ನ ಸಾವಿಗೆ ನಾನೇ ಕಾರಣ' ಎಂದು ಡೆತ್ ನೋಟ್ ಬರೆದಿಟ್ಟು

ಕೆರೆಗೆ ಹಾರಿ ಯುವಕ ಆತ್ಮಹತ್ಯೆ



ಸುಂಟಿಕೊಪ್ಪ,ನ.24– ಯುವಕನೋರ್ವ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ವರದಿಯಾಗಿದೆ. ಸುಂಟಿಕೊಪ್ಪ ಉಲುಗುಲಿ ರಸ್ತೆಯ ನಿವಾಸಿ ಸ್ಥಳೀಯ ಮಾರ್ಕೆಟಿಂಗ್ ಅಂಗಡಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮಧು(36) ಎಂಬಾತ ನ.23ರಂದು ಸಂಜೆ ಎಮ್ಮೆಗುಂಡಿ ಸಮೀಪದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಬರೆದಿಟ್ಟಿದ್ದು, ನನ್ನ ಸಾವಿಗೆ ನಾನೇ ಕಾರಣ ಎಂದು ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಠಾಣಾಧಿಕಾರಿ ಮಂಜು ಮತ್ತು ಸಿಬ್ಬಂದಿಗಳು ತೆರಳಿ ಮಹಜರು ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಇಂದು ಮಾಜಿ ಯೋಧರ ಒಕ್ಕೂಟದ ವಾರ್ಷಿಕ ಮಹಾಸಭೆ

ಮಡಿಕೇರಿ,ನ.24– ಮಾಜಿ ಯೋಧರ ಒಕ್ಕೂಟ ಅರೆಸೇನಾಪಡೆ ಕೊಡಗು ಜಿಲ್ಲೆ ವತಿಯಿಂದ ಬಿಎಸ್‌ಎಫ್, ಸಿಆರ್‌ಪಿಎಫ್, ಸಿಐಎಸ್‌ಎಫ್, ಐಟಿಬಿಪಿ, ಎಸ್‌ಎಸ್‌ಬಿ ಮತ್ತು ಅಸ್ಸಾಂ ರೈಫಲ್ಸ್ ಪಡೆಗಳ ಮಾಜಿ ಯೋಧರ ವಾರ್ಷಿಕ ಮಹಾಸಭೆಯು ನ.25 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಮೈತ್ರಿ ಪೊಲೀಸ್ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಅರೆಸೇನಾಪಡೆಯ ಮಾಜಿ ಯೋಧರ(ನಿವೃತ್ತ) ಒಕ್ಕೂಟದ ಅಧ್ಯಕ್ಷರು ತಿಳಿಸಿದ್ದಾರೆ.



ಅವಕಾಶಕ್ಕೆ ಕಾಯದೆ ನಾವೇ ಅದನ್ನು ಸೃಷ್ಟಿಸಿಕೊಳ್ಳಬೇಕು

'ಅಗ್ನಿವೀರ್' ವಾಯುದಳ ನೇಮಕಾತಿ ಕುರಿತ ಕಾರ್ಯಾಗಾರದಲ್ಲಿ ಮಾಹಿತಿ

ಮಡಿಕೇರಿ,ನ.24– ಇಂದಿನ ಸ್ಪರ್ಧಾತ್ಮಕ ಯುಗ ದಲ್ಲಿ ವಿದ್ಯಾರ್ಥಿಗಳು ಸದಾ ರಚನಾತ್ಮಕ ಮತ್ತು ಸಕಾರಾತ್ಮಕವಾಗಿ ಆಲೋಚನೆ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ಬೆಂಗಳೂರು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಜಂಟಿ ನಿರ್ದೇಶಕರಾದ ಸಾಧನಾ ಅಶೋಕ್ ಪೋಟೆ ಸಲಹೆ ನೀಡಿದ್ದಾರೆ.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಎನ್‌ಸಿಸಿ ಘಟಕದ ವತಿಯಿಂದ ಕೊಡಗು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಂಯುಕ್ತಾಶ್ರಯದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಸಭಾಂಗಣದಲ್ಲಿ ಎನ್‌ಸಿಸಿ ಕೆಡೆಟ್‌ಗಳಿಗೆ 'ಅಗ್ನಿವೀರ್' ವಾಯುದಳ ನೇಮಕಾತಿ ಕುರಿತು ನಡೆದ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅವಕಾಶಗಳು ತಾನಾಗಿಯೇ ಬರುವುದಕ್ಕೆ ಕಾಯದೆ ಅವಕಾಶವನ್ನು ನಾವಾಗಿಯೇ ಸೃಷ್ಟಿಸಿಕೊಳ್ಳಬೇಕು. ನಿರಂತರ ಪ್ರಯತ್ನ ಮಾಡಿದರೆ ಮುಂದೆ ಉತ್ತಮ ಗುರಿ ಮತ್ತು ಫಲ ಪಡೆಯಲು ಸಾಧ್ಯ ಎಂದರು. ಶಿಕ್ಷಣದ ನಂತರ ಉದ್ಯೋಗ ಪಡೆಯುವುದು ಎಲ್ಲರ ಉದ್ದೇಶವಾಗಿರುತ್ತದೆ. ವ್ಯಕ್ತಿತ್ವ ವಿಕಸನದ ಮೂಲಕ ಸ್ಪರ್ಧಾತ್ಮಕ ಯುಗವನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿದ ಸಾಧನಾ, ಖಾಸಗಿ ವಲಯ ಮತ್ತು ಸರ್ಕಾರಿ ವಲಯದಲ್ಲಿರುವ ಉದ್ಯೋಗವಕಾಶಗಳು ಹಾಗೂ ನಿರುದ್ಯೋಗಿಗಳ ಸಮಸ್ಯೆಗಳ ಕುರಿತು ತಿಳಿಸಿದರು.

19 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಅಧಿಕಾರಿ ಕರ್ನಲ್ ಚಾಕೊ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ರಕ್ಷಣಾ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಕ್ಷಣಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವಂತೆ ಕರೆ ನೀಡಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಜಗತ್ ತಿಮ್ಮಯ್ಯ, ಶಿಸ್ತು ಮತ್ತು ಸಂಯಮದಿಂದ ನಾಗರಿಕ ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಗುರುತಿಸಿಕೊಳ್ಳಬಹುದಾಗಿದೆ. ಅಗ್ನಿಪಥ್‌ನಿಂದ ಹೆಚ್ಚಿನ ಸಂಖ್ಯೆಯಲ್ಲಿ ಯುವಕ, ಯುವತಿಯರಿಗೆ ರಕ್ಷಣಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ವಿಂಗ್ ಕಮಾಂಡರ್ ಸಂತೋಷ್ ಶೆಟ್ಟಿ ಮಾತನಾಡಿ, ಅಗ್ನಿವೀರ್ ವಾಯುದಳ ನೇಮಕಾತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಹೇಗಿರಬೇಕು ಎಂಬುದರ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಎನ್‌ಸಿಸಿ ಆಫೀಸರ್ ಮೇಜರ್ ಡಾ.ರಾಘವ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಉದ್ಯೋಗಾಧಿಕಾರಿ ಸಿ.ಎಂ.ಉಮಾ, ಕೊಡಗು ಜಿಲ್ಲಾ ಪ್ರಚಾರ ಉಸ್ತುವಾರಿ ಕೆ.ಪಿ.ದಿಲನ್ ಹಾಗೂ ಉಪನ್ಯಾಸಕ ಡಾ.ರಾಜೇಂದ್ರ ಉಪಸ್ಥಿತರಿದ್ದರು.

ಡಿ.10, ಪುತ್ತರಿ ಮಂದ್ ನಮ್ಮೆ ಆಚರಣೆ

ಗೋಣಿಕೊಪ್ಪ ನ.24– ಮಾಯಮುಡಿ ಗ್ರಾಮದ ಕಂಗಳತ್ತ್‌ನಾಡ್ ಕೋಲ್ ಮಂದ್‌ನಲ್ಲಿ ಡಿ.10 ರಂದು ಪುತ್ತರಿ ಮಂದ್ ನಮ್ಮೆ ಆಚರಿಸುವ ನಿರ್ಧಾರವನ್ನು ಗುರುವಾರ ಕಂಗಳತ್ ನಾಡ್ ಮಹಿಳಾ ಸಮಾಜದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ತೆಗೆದುಕೊಳ್ಳಲಾಯಿತು. ಮಾನಿಲ್ ಅಯ್ಯಪ್ಪ ಸೇವಾ ಸಮಿತಿ, ಕಂಗಳತ್ತ್‌ನಡ್ ಮಹಿಳಾ ಸಮಾಜ ಸಹಯೋಗದಲ್ಲಿ ಬೆಳಗ್ಗೆ ಪುರುಷರು ಮತ್ತು ಮಹಿಳೆಯರಿಗೆ ಕ್ರೀಡಾಕೂಟ, 2 ಗಂಟೆಗೆ ಮಾಯಮುಡಿ, ಬಾಳಾಜಿ, ರುದ್ರಬೀಡ್ ಕೇರಿಯ ಮಂದ್ ಪತ್ತುವೊ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಯಿತು. ಊರೋರ್ಮೆ ಆಯೋಜನೆ, 7 ಸಾಧಕರಿಗೆ ಸನ್ಮಾನದ ಮೂಲಕ ಗೌರವಿಸಲು ನಿರ್ಧರಿಸಲಾಯಿತು. ಉಮ್ಮತ್ತಾಟ್, ಬೊಳಕಾಟ್, ಕೋಲಾಟ್, ಪರೆಯಕಳಿ ಪ್ರದರ್ಶನ ನಡೆಸುವುದು.

ಪುನೀತೋತ್ಸವಕ್ಕೆ ಕ್ಷಣಗಣನೆ

ಸಿದ್ಧತೆ ಪರಿಶೀಲಿಸಿದ ಶಾಸಕ ಸಿ.ಎಸ್.ಪುಟ್ಟರಾಜು





ಪಾಂಡವಪುರ, ನ.24– ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಸ್ಮರಣಾರ್ಥ ನಾಳೆ(ನ.25)ಯಿಂದ ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ 3 ದಿನಗಳ ಕಾಲ ನಡೆಯುವ 'ಪುನೀತೋತ್ಸವ'ಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಶಾಸಕ ಸಿ.ಎಸ್. ಪುಟ್ಟರಾಜು ಗುರುವಾರ ಬೆಳಗ್ಗೆ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, ಪಟ್ಟಣದಲ್ಲಿ ಅದ್ಧೂರಿಯಾಗಿ 3 ದಿನ ಪುನೀತೋತ್ಸವ ಏರ್ಪಡಿಸಲಾಗಿದ್ದು, ನಾಳೆ ಸಂಜೆ 5.30ಕ್ಕೆ ನಟ ನಿಖಿಲ್ ಕುಮಾರಸ್ವಾಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಪಟ್ಟಣದ ಬಾಲಕಿಯರ ಪ್ರೌಢಶಾಲೆ ಹಾಗೂ ಕಾಲೇಜಿನ ಸಾವಿರ ವಿದ್ಯಾರ್ಥಿನಿಯರು ನಾಡಗೀತೆ ಹಾಡುವ ಮೂಲಕ ಕಾರ್ಯಕ್ರಮ ಪ್ರಾರಂಭವಾಗುತ್ತದೆ ಎಂದರು.

ನ.25ರಂದು ಗಾಯಕಿ ಅನನ್ಯ ಭಟ್ ಸಂಗೀತ ರಸಸಂಜೆ ಕಾರ್ಯಕ್ರಮ ಹಾಗೂ ಕಿರುತೆರೆ ಕಲಾವಿದರಿಂದ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಎಂ.ಕೃಷ್ಣೇಗೌಡರನ್ನು ವೇದಿಕೆಯಲ್ಲಿ ಸನ್ಮಾನಿಸಲಾಗುವುದು. ನಟಿಯರಾದ ಶ್ವೇತಾ ಪ್ರಸಾದ್, ಸೋನುಗೌಡ, ಪ್ರಿಯಾಂಕ, ನಮ್ರತಾಗೌಡರಿಂದ ನೃತ್ಯ ಪ್ರದರ್ಶನ, ಚೇತನ್ ಹರಿ ಮತ್ತು ತಂಡದಿಂದ ಕಥಕ್ ನೃತ್ಯ ಪ್ರದರ್ಶನ, ಸಂತೋಷ್ ಮತ್ತು ತಂಡದಿಂದ ಹಾಸ್ಯ ಪ್ರದರ್ಶನ ಇರುತ್ತದೆ ಎಂದರು.

ನ.26 ರಂದು ಐಶ್ವರ್ಯ, ಅನಂತ, ಕಾರ್ತಿಕ್ ಅವರಿಂದ ಕಥಕ್ ನೃತ್ಯ, ನಯನ ಮತ್ತು ತಂಡದಿಂದ ಹಾಸ್ಯ ಪ್ರದರ್ಶನ, ರುದ್ರ ಮತ್ತು ತಂಡದಿಂದ ಜೈ ಭಜರಂಗಿ ನೃತ್ಯ ಪ್ರದರ್ಶನ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರಿಂದ ಸಂಗೀತ ಸಂಜೆ ಕಾರ್ಯಕ್ರಮ, ನಟಿಯರಾದ ಶುಭಾ ಪೂಂಜಾ, ಗೌತಮಿ, ರಜನಿ ಮತ್ತು ಭವ್ಯ ಗೌಡರಿಂದ ನೃತ್ಯ ಪ್ರದರ್ಶನವಿರಲಿದೆ. ನ.27ರಂದು ಜಂಬೆ ಅವರಿಂದ ಚಿತ್ರಕಲಾ ಪ್ರದರ್ಶನ, ಜಗ್ಗಪ್ಪ ಮತ್ತು ತಂಡದಿಂದ ಹಾಸ್ಯ ಪ್ರದರ್ಶನ, ರುದ್ರ ಮತ್ತು ತಂಡದಿಂದ ಅಪ್ಪು ನಮನ ಕುರಿತಂತೆ ನೃತ್ಯ, ನಟಿಯರಾದ ವೈಷ್ಣವಿಗೌಡ, ಶಮಿತಾಗೌಡರಿಂದ ನೃತ್ಯ ಪ್ರದರ್ಶನ, ಖ್ಯಾತ ಗಾಯಕ ವಿಜಯ ಪ್ರಕಾಶ್‌ರಿಂದ ಸಂಗೀತ ಕಾರ್ಯಕ್ರಮವಿರುತ್ತದೆ. ಕಾರ್ಯಕ್ರಮದಲ್ಲಿ ಪುನೀತ್ ರಾಜಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜಕುಮಾರ್ ಸೇರಿದಂತೆ ಡಾ.ರಾಜಕುಮಾರ್ ಕುಟುಂಬದ ಎಲ್ಲಾ ಸದಸ್ಯರು ಹಾಜರಿರುತ್ತಾರೆ. ನಿರೂಪಕಿ ಅನುಶ್ರೀ ಕಾರ್ಯಕ್ರಮದ ನಿರೂಪಣೆ ಮಾಡಲಿದ್ದಾರೆ.

ವೇದ ಚಿತ್ರದ ಆಡಿಯೋ ಬಿಡುಗಡೆ: ಪುನಿತೋತ್ಸವದ ಕೊನೆಯ ದಿನ ಡಾ.ಶಿವರಾಜ್ ಕುಮಾರ್ ಅಭಿನಯದ 'ವೇದ' ಚಿತ್ರದ ಆಡಿಯೋ ಬಿಡುಗಡೆ ಏರ್ಪಡಿಸಲಾಗಿದ್ದು, ಕಾರ್ಯಕ್ರಮದಲ್ಲಿ ನಟ ಶಿವರಾಜ್ ಕುಮಾರ್ ಸೇರಿದಂತೆ ಕನ್ನಡ ಚಿತ್ರರಂಗದ ಹೆಸರಾಂತ ನಟ, ನಟಿಯರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮ ವೀಕ್ಷಣೆಗೆ ಯಾವುದೇ ಪಾಸ್, ಟಿಕೆಟ್ ಇರುವುದಿಲ್ಲ. ಉಚಿತ ಪ್ರವೇಶವಿದ್ದು, ಮೊದಲು ಬಂದವರಿಗೆ ಆದ್ಯತೆ ಎಂದು ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭಾಧ್ಯಕ್ಷೆ ಅರ್ಚನಾ, ತಾಲೂಕು ಜೆಡಿಎಸ್ ಪ್ರಭಾರ ಅಧ್ಯಕ್ಷ ಎಸ್.ಎ.ಮಲ್ಲೇಶ್, ಪುರಸಭೆ ಸದಸ್ಯರು ಹಾಜರಿದ್ದರು.

ನ.28ಕ್ಕೆ ಸಚ್ಚಿದಾನಂದ ಬಿಜೆಪಿ ಸೇರ್ಪಡೆ

ಶ್ರೀರಂಗಪಟ್ಟಣ, ನ.24– ಕ್ಷೇತ್ರದ ಯುವ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಅವರು, ನ.28ರಂದು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಂದು ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದು, ಪಕ್ಷಕ್ಕೆ ಸೇರ್ಪಡೆಯಾಗುವ ಸಚ್ಚಿದಾನಂದ ಅವರು, ನಂತರ ರಾಷ್ಟ್ರ, ರಾಜ್ಯಮಟ್ಟದ ನಾಯಕರನ್ನು ಆಹ್ವಾನಿಸಿ ಶ್ರೀರಂಗಪಟ್ಟಣದಲ್ಲಿ ಬೃಹತ್ ಸಮಾರಂಭ ನಡೆಸುವ ತಯಾರಿಯಲ್ಲಿದ್ದಾರೆ.

2023ಕ್ಕೆ ಮತ್ತೆ ಬಿಜೆಪಿ ಅಧಿಕಾರಕ್ಕೆ: ಯಡಿಯೂರಪ್ಪ



ಕೆ.ಆರ್.ಪೇಟೆ, ನ.24– ನನ್ನ ಹುಟ್ಟೂರು ಕೆ.ಆರ್.ಪೇಟೆಯಲ್ಲಿ ನಾನು ಕಟ್ಟಿ ಬೆಳೆಸಿದ ಪಕ್ಷ ಖಾತೆ ತೆರೆಯಲಿಲ್ಲವಲ್ಲ ಎಂಬ 40 ವರ್ಷಗಳ ಕೊರಗನ್ನು ದೂರ ಮಾಡಿದ ತಾಲೂಕಿನ ಜನತೆಯನ್ನು ನಾನು ಎಂದಿಗೂ ಮರೆಯಲ್ಲ. 2023ಕ್ಕೆ ಮತ್ತೆ ಬಿಜೆಪಿ ಪಕ್ಷವೇ ಅಧಿಕಾರ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಹುಟ್ಟೂರು ತಾಲೂಕಿನ ಬೂಕನಕೆರೆ ಗ್ರಾಮದಲ್ಲಿರುವ ಮನೆದೇವರು ಅಕ್ಕಯ್ಯಮ್ಮ ಹಾಗೂ ಗ್ರಾಮದೇವತೆ ಗೋಗಾಲಮ್ಮನವರಿಗೆ ಕಾರ್ತಿಕ ಅಮಾವಾಸ್ಯೆಯ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಸಿಎಂ ಬಸವರಾಜ ಬೊಮ್ಮಾಯಿ ಉತ್ತಮವಾಗಿ ಆಡಳಿತ ನಡೆಸುತ್ತಿದ್ದಾರೆ. ಇದನ್ನು ಸಹಿಸದ ವಿರೋಧ ಪಕ್ಷಗಳು ನಿತ್ಯ ದಾಳಿ ನಡೆಸುತ್ತಿವೆ. ಆದರೂ ವಿಚಲಿತರಾಗದ ಅವರು ಎಲ್ಲವನ್ನೂ ಸಮರ್ಥವಾಗಿ ಎದುರಿಸುತ್ತಿದ್ದಾರೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ನಾನು ವಿಪಕ್ಷದ ನಾಯಕನಾಗಿದ್ದೆ. ತಪ್ಪಾದಾಗ ಕೂಡಲೇ ಎಚ್ಚರಿಸುತ್ತಿದ್ದೆ. ಆದರೆ ಕಾಂಗ್ರೆಸ್ ತಪ್ಪಲ್ಲದ ವಿಷಯಗಳನ್ನು ತಿರುಚಿ ರಾಜ್ಯದ ಜನರ ಮುಂದೆ ಇಟ್ಟು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ನಾರಾಯಣಗೌಡರು ಜನಪರ ಕೆಲಸ ಮಾಡಿದ್ದಾರೆ. ಕೆ.ಆರ್.ಪೇಟೆಯಲ್ಲಿ ಅಭಿವೃದ್ಧಿ ನಾಗಾಲೋಟ ಮುಂದುವರೆದಿದೆ. ಕುಡಿಯುವ ನೀರು ಹಾಗೂ ಕೃಷಿಗೆ ಬೇಕಾದ ನೀರನ್ನು ಒದಗಿಸಲು ಸಾವಿರಾರು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದೇವೆ. ಕೆಲಸಗಳು ಬಿರುಸಿನಿಂದ ನಡೆಯುತ್ತಿವೆ. ರಸ್ತೆ ಅಭಿವೃದ್ಧಿ ಬಗೆಗೆ ಗಮನಹರಿಸುವಂತೆ ನಾರಾಯಣಗೌಡರಿಗೆ ಹೇಳಿದ್ದೇನೆ. ಕೆ.ಆರ್.ಪೇಟೆ ತಾಲೂಕಿಗೆ ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ ಎಂದರು.

ಶಾಸಕ ಸಚಿವ ಡಾ.ನಾರಾಯಣಗೌಡ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಕೆಎಂಎಫ್ ನಿರ್ದೇಶಕ ಅಶೋಕ್, ಜಿಪಂ ಮಾಜಿ ಉಪಾಧ್ಯಕ್ಷ ಅಂಬರೀಷ್, ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಜವರಾಯಿಗೌಡ, ಮಾಜಿ ಸದಸ್ಯೆ ಮೀನಾಕ್ಷಿ, ಮಧುಸೂದನ್, ಬಿ.ಎನ್. ಪುಟ್ಟರಾಜು, ಮಂಜು, ತಾಲೂಕು ಬಿಜೆಪಿ ಅಧ್ಯಕ್ಷ ಎ.ಜಿ.ಪರಮೇಶ್, ಅರವಿಂದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮತ್ತಿತರರಿದ್ದರು.

ದೊಡ್ಡರಸಿನಕೆರೆಯಲ್ಲಿ ಅಂಬರೀಶ್ ಪುಣ್ಯಸ್ಮರಣೆ



ಭಾರತೀನಗರ, ನ.24– ಇಲ್ಲಿನ ದೊಡ್ಡರಸಿನಕೆರೆಯಲ್ಲಿ ದಿ.ಅಂಬರೀಶ್ ಅವರ 4ನೇ ವರ್ಷದ ಪುಣ್ಯಸ್ಮರಣೆ ನಡೆಯಿತು.

ಗ್ರಾಮದ ಹೆಬ್ಬಾಗಿಲ ಬಳಿಯ ಕೆರೆ ದಡದಲ್ಲಿ ಅಂಬರೀಶ್ ಚಿತಾಭಸ್ಮವನ್ನಿಟ್ಟು ನಿರ್ಮಿಸಿರುವ ಸಮಾಧಿಯನ್ನು, ತಳಿರು ತೋರಣ ಹಾಗೂ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಸಮಾಧಿ ಮೇಲೆ ವಿವಿಧ ಬಗೆಯ ಹಣ್ಣು–ಹಂಪಲು, ತಿಂಡಿ–ತಿನಿಸು, ಇಸ್ಪೀಟು, ಎಣ್ಣೆ ಇಡಲಾಗಿತ್ತು.

ಗ್ರಾಮಕ್ಕೆ ಸಂಸದೆ ಸುಮಲತಾ, ಪುತ್ರ ಅಭಿಷೇಕ್, ಚಿತ್ರನಟ ದೊಡ್ಡಣ್ಣ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಆಗಮಿಸಿ ಸಮಾಧಿಗೆ ಗಂಧದಕಡ್ಡಿ, ಕರ್ಪೂರದಾರತಿ ಬೆಳಗಿ ಪೂಜೆ ಸಲ್ಲಿಸಿದರು. ಅಲ್ಲಿಂದ ಗ್ರಾಮದ ಮಧ್ಯಭಾಗದಲ್ಲಿ ನಿರ್ಮಿಸಿರುವ ಅಂಬರೀಶ್ ಪುತ್ಥಳಿ ಬಳಿ ತೆರಳಿದ ಎಲ್ಲರೂ ಪುತ್ಥಳಿಗೆ ಹೂವಿನಹಾರ ಹಾಕಿ ನೆನೆದು ನಮಸ್ಕರಿಸಿದರು.

ಗ್ರಾಮದಲ್ಲಿ ನೆರೆದಿದ್ದ ಅಂಬರೀಶ್ ಅಭಿಮಾನಿಗಳು ರೆಬಲ್‌ಸ್ಟಾರ್ ಅಂಬರೀಶ್‌ಗೆ ಜಯವಾಗಲಿ, ಮತ್ತೆ ಅಂಬಿ ಹುಟ್ಟಿಬರಲಿ ಎಂದು ಜೈಕಾರ ಹಾಕಿದರು. ಗ್ರಾಮದಲ್ಲಿ ಅಭಿಮಾನಿಗಳು ಗ್ರಾಮಸ್ಥರಿಗೆ ಬಿರಿಯಾನಿ ಊಟ ಹಾಕಿ ಪುಣ್ಯಸ್ಮರಣೆ ಆಚರಿಸಿದರು.

ಈ ವೇಳೆ ಸೋಮಶೇಖರ್, ಕೇಬಲ್ ಮಧು, ಶಿವ, ಡಿ.ಎಸ್.ಶಿವಕುಮಾರ್, ಮಹೇಂದ್ರಕುಮಾರ್, ಸತೀಶ್ ಕುಮಾರ್, ಪ್ರಸನ್ನ, ಕೃಷ್ಣ, ಕುಮಾರ್, ಅಂಬಿ ಕೃಷ್ಣ, ಅಂಬಿ ಅಭಿಮಾನಿಗಳು ಉಪಸ್ಥಿತರಿದ್ದರು.

ಬಿ.ನಿಂಗಪ್ಪ ನಿಧನ



ಪಾಂಡವಪುರ, ನ.24– ತಾಲೂಕಿನ ಹಾಗನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಹಾಗೂ ವೀರಶೈವ ಮಹಾಸಭಾ ಮಾಜಿ ತಾಲೂಕು ಅಧ್ಯಕ್ಷ ಬಿ.ನಿಂಗಪ್ಪ(75) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ ಜಯಮ್ಮ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ ಸ್ವಗ್ರಾಮದ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭ್ರಷ್ಟ ವ್ಯವಸ್ಥೆ, ನಾಸ್ತಿಕವಾದಿಗಳು, ಕ್ರಿಶ್ಚಿಯನ್, ಇಸ್ಲಾಮಿಕ್ ಶಕ್ತಿಗಳು ದೇಶಕ್ಕೆ ಅಪಾಯಕಾರಿ

ಶ್ರೀ ರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆತಂಕ



ಚಾಮರಾಜನಗರ, ನ.24– ಈ ಭ್ರಷ್ಟ ವ್ಯವಸ್ಥೆ, ನಾಸ್ತಿಕವಾದಿಗಳು, ಕ್ರಿಶ್ಚಿಯನ್ ಶಕ್ತಿ ಹಾಗೂ ಇಸ್ಲಾಮಿಕ್ ಶಕ್ತಿ ದೇಶಕ್ಕೆ ಅಪಾಯಕಾರಿಯಾಗಿದೆ. ಇವುಗಳ ನಿರ್ಮೂಲನೆಗೆ ಹಿಂದೂಗಳೆಲ್ಲರೂ ಒಂದಾಗಬೇಕು ಎಂದು ಶ್ರೀ ರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರು ಕರೆ ನೀಡಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಎದುರು ಹಿಂದೂ ಸೇನೆ ಕಾರ್ಯಾಲಯವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು. ಜಾತಿ ಸಂಘಟನೆ, ವ್ಯಾಪಾರಿಗಳ ಸಂಘಟನೆ, ಕ್ರೀಡಾ ಸಂಘಟನೆ ಸೇರಿದಂತೆ ಅನೇಕ ಸಂಘಟನೆ ಮಾಡುವಾಗ ಯಾರೂ ಸಹ ತೊಂದರೆ ಕೊಡುವುದಿಲ್ಲ. ಆದರೆ ಹಿಂದೂಗಳ ಸಂಘಟನೆ ಮಾಡಲು ಹೊರಟರೆ ಕಿರಿ–ಕಿರಿ ಆರಂಭವಾಗುತ್ತದೆ. ನಮ್ಮ ದೇಶದಲ್ಲಿ ಸಂಘಟನೆ ಮಾಡಿದರೂ ಸಹ ಇಲ್ಲಿನವರೇ ತೊಂದರೆ ಕೊಡುತ್ತಾರೆ. ಇದು ದುರ್ದೈವದ ಸಂಗತಿ ಎಂದರು.

ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾನೂನು ವಿಧಾನಸೌಧದಲ್ಲಿ ಮಾತ್ರ ಜಾರಿಯಾಗಿದೆ. ಕಟ್ಟುನಿಟ್ಟಾಗಿ ಜಾರಿ ಮಾಡಿಲ್ಲ ಎಂದು ದೂರಿದ ಅವರು, ಗೋ ಹತ್ಯೆ ಇನ್ನು ನಿರಂತರವಾಗಿ ನಡೆಯುತ್ತಿವೆ. ರೈತರಿಗೆ ಆಧಾರವೇ ಗೋವು. ಅಂತಹ ಗೋ ಸಂತತಿಯನ್ನು ನಾಶ ಮಾಡಲು ಹೊರಟಿರುವುದು ಸರಿಯಲ್ಲ. ಇದಕ್ಕೆ ತಕ್ಷಣವೇ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

> 2007 ರಿಂದಲೇ ಮೈಸೂರು ಉಗ್ರರ ಸ್ಲೀಪರ್ ಸೆಲ್ ಆಗಿದೆ. ಮೈಸೂರು ಪಿಎಫ್‌ಐನ ಪ್ರಯೋಗ ಶಾಲೆಯಾಗಿದೆ. ಬಿಜೆಪಿಯವರು ಬರೀ ರಾಜಕೀಯ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸರ್ಕಾರ 200ಕ್ಕೂ ಹೆಚ್ಚು ಜನರ ಮೇಲಿದ್ದ ಪ್ರಕರಣಗಳನ್ನು ವಾಪಸ್ ತೆಗೆದುಕೊಂಡಿತು. ಬಿಜೆಪಿ ಸರ್ಕಾರ ಮತ್ತೆ ಪ್ರಕರಣವನ್ನು ಏಕೆ ದಾಖಲಿಸಲಿಲ್ಲ. ಸರ್ಕಾರ ಈ ಎಲ್ಲಾ ಪ್ರಕರಣಗಳಿಗೆ ಮರುಜೀವ ನೀಡಬೇಕು.
> –ಪ್ರಮೋದ್ ಮುತಾಲಿಕ್, ಮುಖ್ಯಸ್ಥರು, ಶ್ರೀರಾಮ ಸೇನೆ.

ವಾಟಾಳು ಸೂರ್ಯ ಸಿಂಹಾಸನ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಹಿಂದೂ ಧರ್ಮದ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಚಿಂತನೆ ನಡೆಸುವಂತೆ ಮನವಿ ಮಾಡಿದರು. ಮಂಗಲದ 88 ಗಡಿ ಕಟ್ಟೆ ಮನೆ ಪೀಠದ ಮಂಜುನಾಥ ಸ್ವಾಮೀಜಿ, ಆಜಾದ್ ಹಿಂದೂ ಸೇನೆ ರಾಜ್ಯಾಧ್ಯಕ್ಷ ಪೃಥ್ವಿರಾಜ್ ಇತರರು ಉಪಸ್ಥಿತರಿದ್ದರು.

ನಿರ್ಲಕ್ಷ್ಯದಿಂದ ಕುಕ್ಕರ್ ಬಾಂಬ್ ಸ್ಫೋಟ

ಚಾಮರಾಜನಗರ, ನ.24– ಸರ್ಕಾರದ ನಿರ್ಲಕ್ಷ್ಯದಿಂದಾಗಿ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಸಂಭವಿಸಿದೆ ಎಂದು ಶ್ರೀ ರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆರೋಪಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ಇಲಾಖೆಗೆ ಭಯೋತ್ಪಾದಕರು ಹಾಗೂ ಕಿಡಿಗೇಡಿಗಳ ಬಗ್ಗೆ ಎಲ್ಲವೂ ಸಹ ಗೊತ್ತಿರುತ್ತದೆ. ಆದರೆ ರಾಜ್ಯದಲ್ಲಿ ಪೊಲೀಸ್ ಇಲಾಖೆ ನಿದ್ದೆ ಮಾಡುತ್ತಿದೆ ಎಂದು ದೂರಿದರು.

ಸರ್ಕಾರದ ನಿರ್ಲಕ್ಷ್ಯ ಒಂದು ಕಡೆಯಾದರೆ, ಮತ್ತೊಂದು ಕಡೆ ಕಾಂಗ್ರೆಸ್‌ನ ಮುಸ್ಲೀಮರನ್ನು ಓಲೈಸುತ್ತಿರುವುದೇ ಭಯೋತ್ಪಾದನೆಗೆ ಮೂಲಕಾರಣವಾಗಿದ್ದು, ಮಂಗಳೂರು ಪ್ರಕರಣಕ್ಕೆ ಸಾಕ್ಷಿಯಾಗಿದೆ. ಮಂಗಳೂರು ಪ್ರಕರಣದ ಶಾರಿಕ್‌ನ ಚಲನವಲನಗಳ ಮೇಲೆ ಪೊಲೀಸರು ಕಣ್ಣಿಡಬೇಕಿದೆ ಎಂದರು. ಹಿಂದೂಗಳಿಗಾಗಿ ನಾನು ರಾಜಕೀಯ ಪ್ರವೇಶ ಮಾಡಲು ತೀರ್ಮಾನಿಸಿದ್ದೇನೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ. ಆದರೆ ಕ್ಷೇತ್ರ ಯಾವುದು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ. ನಾನಲ್ಲದೇ ಇನ್ನು 25 ಜನ ಪ್ರಮುಖ ಹಿಂದುತ್ವವಾದಿಗಳು ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎಂದರು.

ಹಾಸನ ಜಿಲ್ಲಾ ಬಳಗದಿಂದ ಪ್ರತಿಭಾ ಪುರಸ್ಕಾರ

ಮೈಸೂರು, ನ.24– ಹಾಸನ ಜಿಲ್ಲಾ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲಾ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಮೊ. 9886647852 ಸಂಪರ್ಕಿಸಬಹುದು.

9 ಕೋಟಿ ರೂ. ನೀಡಿ ಕ್ವಾರಿ ಖರೀದಿ ಹೇಳಿಕೆ ಹಿನ್ನೆಲೆಯಲ್ಲಿ

ಶಾಸಕ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಇಡಿ, ಐಟಿಗೆ ದೂರು

ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು ಹೇಳಿಕೆ



ಚಾಮರಾಜನಗರ, ನ.24– ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಕರಿಕಲ್ಲು ಕ್ವಾರಿಯನ್ನು 9 ಕೋಟಿ ರೂ. ನಗದು ನೀಡಿ ಖರೀದಿಸಿರುವುದಾಗಿ ಹೇಳಿದ್ದು, ಈ ಬಗ್ಗೆ ಜಾರಿ ನಿರ್ದೇಶನಾಲಯ (ಇಡಿ) ಹಾಗೂ ಆದಾಯ ತೆರಿಗೆ ಇಲಾಖೆ (ಐಟಿ)ಗೆ ದೂರು ಸಲ್ಲಿಸುವುದಾಗಿ ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು ತಿಳಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುಟ್ಟರಂಗಶೆಟ್ಟಿ ಚುನಾವಣಾ ಸಂದರ್ಭದಲ್ಲಿ ತಮ್ಮ ಆಸ್ತಿಯನ್ನು 3.50 ಕೋಟಿ ಎಂದು ಘೋಷಿಸಿದ್ದಾರೆ. ಈಗ ಕರಿಕಲ್ಲು ಕ್ವಾರಿ ಖರೀದಿಗೆ 9 ಕೋಟಿ ರೂ. ನೀಡುತ್ತೇನೆ ಎಂದು ಅವರೇ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇಷ್ಟು ಹಣ ಅವರಿಗೆ ಎಲ್ಲಿಂದ ಬಂತು, ಎಂಬುದನ್ನು ಕ್ಷೇತ್ರದ ಜನತೆಗೆ ತಿಳಿಸಬೇಕು ಎಂದು ಒತ್ತಾಯಿಸಿದರು.

ಗುಜರಾತ್ ಮೂಲದ ಉದ್ಯಮಿ ಕಮಲೇಶ್ ಎಂಬುವರು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ನನಗೆ 9 ಕೋಟಿ ರೂ. ವಂಚನೆ ಮಾಡಲು ಯತ್ನಿಸಿದ್ದಾರೆ ಎಂದು ಆರೋಪಿಸಿದ್ದರು. ಇದಕ್ಕೆ ಸ್ಪಷ್ಟನೆ ನೀಡಿರುವ ಶಾಸಕರು, ಕರಿಕಲ್ಲು ಕ್ವಾರಿ ಖರೀದಿಗೆ 9 ಕೋಟಿ ರೂ. ನೀಡಿದ್ದೇನೆ. ಇನ್ನು 3 ಕೋಟಿ ಮಾತ್ರ ನೀಡಬೇಕು ಎಂದು ತಿಳಿಸಿದ್ದಾರೆ. ಕಾನೂನಿನ ಪ್ರಕಾರ 20 ಸಾವಿರಕ್ಕಿಂತ ಹೆಚ್ಚು ಹಣವನ್ನು ನಗದು ರೂಪದಲ್ಲಿ ನೀಡುವಂತಿಲ್ಲ. ಇದು ಮೂರು ಬಾರಿ ಶಾಸಕರಾಗಿರುವ ಪುಟ್ಟರಂಗಶೆಟ್ಟಿ ಅವರಿಗೆ ತಿಳಿದಿಲ್ಲವೇ ಎಂದು ನಿಜಗುಣರಾಜು ಪ್ರಶ್ನಿಸಿದರು.

ಶಾಸಕರು ಹಾಗೂ ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಯಳಂದೂರು ತಾಲೂಕು ಯರಿಯೂರಿನಲ್ಲಿ 15 ಎಕರೆ ಕ್ವಾರಿ, ಅದಕ್ಕೆ ಹೊಂದಿಕೊಂಡಂತೆ 9 ಎಕರೆ ಭೂಮಿ, ಗುಂಬಳ್ಳಿಯಲ್ಲಿ 15 ಎಕರೆ ಕ್ವಾರಿ, ಉಪ್ಪಿನ ಮೋಳೆಯಲ್ಲಿ 2 ಕೋಟಿ ರೂ. ಬೆಲೆಬಾಳುವ ಪೆಟ್ರೋಲ್ ಬಂಕ್, ಚಾಮರಾಜನಗರದ ಶಂಕರಪುರದಲ್ಲಿ 20 ಗುಂಟೆ ಜಾಗ, ನ್ಯಾಯಾಲಯದ ರಸ್ತೆಯಲ್ಲಿ ಐಷಾರಾಮಿ ಬಂಗಲೆ ಹೊಂದಿದ್ದಾರೆ. ಕೇವಲ 3.5 ಕೋಟಿ ಆಸ್ತಿ ಘೋಷಿಸಿಕೊಂಡಿರುವ ಪುಟ್ಟರಂಗಶೆಟ್ಟಿ ಅವರಿಗೆ ಇದನ್ನೆಲ್ಲಾ ಖರೀದಿಸಲು ಬ್ಯಾಂಕಿನಿಂದ ಪಡೆದಿರುವ 5 ಕೋಟಿ ರೂ. ಸಾಲ ಸಾಲುತ್ತದೆಯೇ ಎಂದು ನಿಜಗುಣರಾಜು ಪ್ರಶ್ನಿಸಿದ್ದಾರೆ.

ಪುಟ್ಟರಂಗಶೆಟ್ಟಿ ಅವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಅವರು ಕಪ್ಪು ಹಣದ ಕುಳ ಎಂದು ದೂರಿದ ನಿಜಗುಣರಾಜು, ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕರು, ತಮ್ಮ ವಿರುದ್ಧದ ಆರೋಪದ ಹಿಂದೆ ಬಿಜೆಪಿಯ ಷಡ್ಯಂತರ ಅಡಗಿದೆ ಎಂದು ದೂರಿದ್ದಾರೆ. ಇದು ಸುಳ್ಳು, ಕಮಲೇಶ್ ಆರೋಪಕ್ಕೂ ಬಿಜೆಪಿಗೂ ಸಂಬಂಧ ಇಲ್ಲ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಎಸ್. ಬಾಲರಾಜು, ಚಾಮುಲ್ ಮಾಜಿ ನಿರ್ದೇಶಕ ಬಸವರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಕುಮಾರ್, ಮುಖಂಡ ನಲ್ಲೂರು ಶ್ರೀನಾಥ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ನಟ ಕಮಲ್ ಹಾಸನ್ ಆಸ್ಪತ್ರೆಗೆ ದಾಖಲು

ಚೆನ್ನೈ, ನ.24– ನಟ ಹಾಗೂ ಮಕ್ಕಳ್ ನೀಧಿ ಮಯ್ಯಂ ಪಕ್ಷದ ಸಂಸ್ಥಾಪಕ ಕಮಲ್ ಹಾಸನ್ ಅವರು ಅನಾರೋಗ್ಯ ನಿಮಿತ್ತ ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬುಧವಾರ ಸಂಜೆ ಅವರಿಗೆ ಜ್ವರ ಕಾಣಿಸಿಕೊಂಡಿದ್ದು, ರಾಮಚಂದ್ರ ಮೆಡಿಕಲ್ ಕಾಲೇಜಿಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ತೆರಳಿದ್ದು, ಈ ವೇಳೆ ಜ್ವರ ಇರುವುದು ಗೊತ್ತಾಗಿದೆ.

ಕೀರ್ತನ ನಿಧನ



ಬೇಗೂರು(ಗುಂಡ್ಲುಪೇಟೆ), ನ.24– ಸಮೀಪದ ಕುರುಬರ ಹುಂಡಿ ಗ್ರಾಮದ ನಿವಾಸಿ ಕೆ.ಎಸ್.ಮಲ್ಲಿಕಾರ್ಜುನಪ್ಪರವರ ಪುತ್ರ ಮಹದೇವಸ್ವಾಮಿ ಅವರ ಧರ್ಮಪತ್ನಿ ಕೀರ್ತನ ಇಂದು ಅನಾರೋಗ್ಯದಿಂದ ನಿಧನರಾದರು. ಮೃತರು ಪತಿ ಸೇರಿದಂತೆ ಓರ್ವ ಪುತ್ರ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕುರುಬರಹುಂಡಿಯ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು.



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಳ್ಳಲಿರುವ ಶಾಸಕ ಜಿ.ಟಿ.ದೇವೇಗೌಡರಿಗೆ ಗುರುವಾರವೇ ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ ಗ್ರಾಮದಲ್ಲಿ ಅವರ ಅಭಿಮಾನಿಗಳು ಬೃಹತ್ ಸೇಬಿನ ಹಾರ ಹಾಕುವ ಮೂಲಕ ಅದ್ಧೂರಿಯಾಗಿ ಸನ್ಮಾನಿಸಿ, ಹುಟ್ಟುಹಬ್ಬದ ಶುಭ ಕೋರಿದರು.

ತ್ರಿಚಕ್ರ ವಾಹನ ವಿತರಿಸಿದ ಶಾಸಕ ರಾಮದಾಸ್



ಮೈಸೂರು,ನ.24(ಎಂಟಿವೈ)– ಕೆ.ಆರ್. ವಿಧಾನಸಭಾ ಕ್ಷೇತ್ರದ 9 ಮಂದಿ ವಿಶೇಷಚೇತನರಿಗೆ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ತ್ರಿಚಕ್ರ ವಾಹನ ವಿತರಿಸಲಾಯಿತು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶಾಸಕ ಎಸ್.ಎ.ರಾಮದಾಸ್ ಅವರ ಕಚೇರಿ ಬಳಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಅರ್ಹ ಫಲಾನುಭವಿ ವಿಶೇಷಚೇತನರಿಗೆ ತ್ರಿಚಕ್ರ ವಾಹನದ ಕೀಲಿ ನೀಡಲಾಯಿತು.

ಈ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, 2 ತಿಂಗಳ ಹಿಂದೆ ಆಯೋಜಿಸಿದ್ದ ಮೋದಿ ಯುಗ ಉತ್ಸವ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ವಿವಿಧ ಯೋಜನೆಗಳ ಸೌಲಭ್ಯ ವಿತರಿಸಲಾಗಿತ್ತು. ಸೆ.25ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೋದಿ ಯುಗ ಉತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೆಲ ಫಲಾನುಭವಿಗಳಿಗೆ ವಿವಿಧ ಸೌಲಭ್ಯ ನೀಡಿದ್ದರು. ಕೆ.ಆರ್.ಕ್ಷೇತ್ರದ ವಿವಿಧೆಡೆ ನೆಲೆಸಿದ್ದ ವಿಶೇಷ ಚೇತನರನ್ನು ಗುರುತಿಸಿ, ಅವರು ಸ್ವಾವಲಂಬಿ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ 9 ಮಂದಿ ವಿಶೇಷ ಚೇತನರಿಗೆ 7.46 ಲಕ್ಷ ರೂ. ವೆಚ್ಚದಲ್ಲಿ ವಾಹನ ಖರೀದಿಸಿ ವಿತರಿಸಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮುಂಬರುವ ದಿನಗಳಲ್ಲಿ ಇ–ವೆಹಿಕಲ್‌ಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಈಗಾಗಲೇ ಪೌರಕಾರ್ಮಿಕರಿಗೆ ಎಲೆಕ್ಟ್ರಿಕ್ ವೆಹಿಕಲ್ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಬೀದಿ ಬದಿ ತಳ್ಳುಗಾಡಿಯನ್ನು ಬ್ಯಾಟರಿ ಚಾಲಿತ ವಾಹನಗಳನ್ನು ವಿತರಿಸುವ ಯೋಜನೆಯಿದೆ. ಇದರಿಂದ ಪ್ರತೀದಿನ ತಳ್ಳುವ ಗಾಡಿಯನ್ನು ಬಾಡಿಗೆಗೆ ತಂದು ವ್ಯಾಪಾರ ಮಾಡುವವರನ್ನು ಗುರುತು ಮಾಡಲಾಗಿದ್ದು, ಆದಷ್ಟು ಬೇಗ ಯೋಜನೆ ರೂಪಿಸಲಾಗುವುದು. ಪರಿಸರ ಮಾಲಿನ್ಯ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಇ–ಆಟೋಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಕಾರ್ಯಕಮದಲ್ಲಿ ವಿಕಲಚೇತನ ಅಭಿವೃದ್ಧಿ ಕಲ್ಯಾಣಾಧಿಕಾರಿ ಮಾಲಿನಿ, ಗೋಪಾಲ್ ಕೃಷ್ಣಹೆಗಡೆ, ಮುಖಂಡರಾದ ಈಶ್ವರ್, ಎಂ.ಆರ್.ಬಾಲಕೃಷ್ಣ, ದೇವರಾಜೇಗೌಡ, ಪ್ರಸಾದ್ ಬಾಬು, ಸಂತೋಷ್, ಆದರ್ಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಚೀಟಿ ದೋಖಾ; ಕಾರ್ಮಿಕ ಮಹಿಳೆಗೆ 2 ಲಕ್ಷ ರೂ. ವಂಚನೆ

ಮೈಸೂರು,ನ.24–ಚೀಟಿ ಹಣ ಕಟ್ಟಿಸಿಕೊಂಡು ಮರುಪಾವತಿ ಮಾಡದೇ ಕಾರ್ಮಿಕ ಮಹಿಳೆಗೆ 2 ಲಕ್ಷ ರೂ. ವಂಚಿಸಿರುವ ಬಗ್ಗೆ ಮತ್ತೋರ್ವ ಮಹಿಳೆ ವಿರುದ್ಧ ಆಲನಹಳ್ಳಿ ಠಾಣೆ ಪೊಲೀಸರು ಮೈಸೂರಿನ 3ನೇ ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಿಂಬುಜಾಂಬ ರಸ್ತೆ ನಿವಾಸಿ ಕೆ.ಎಂ.ವೀಣಾ(34) ವಂಚನೆಗೊಳಗಾದವರಾಗಿದ್ದು, ಆಲನಹಳ್ಳಿ ನಿವಾಸಿ ಶಶಿಕಲಾ(38) ಆರೋಪಕ್ಕೆ ಗುರಿಯಾಗಿರುವವರು.

ವಿವರ: ವೀಣಾ ಅವರು ಈ ಹಿಂದೆ ಮೈಸೂರಿನ ಕ್ರಿಸ್ಟಲ್ ಪಾರ್ಕ್ ಹೋಟೆಲ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಿಕೊಂಡಿದ್ದರು. ಈ ಹೋಟೆಲ್ ಮುಚ್ಚಿದ ನಂತರ ಹಾಲಿ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದರು. ಇವರನ್ನು ಕ್ರಿಸ್ಟಲ್ ಪಾರ್ಕ್ ಹೋಟೆಲ್‌ನಲ್ಲಿ ಭೇಟಿ ಮಾಡಿದ್ದ ಶಶಿಕಲಾ ಮತ್ತು ಅವರ ಪತಿ ಸ್ವಾಮಿ, ತಾವು ಸರ್ಕಾರದಿಂದ ಲೈಸೆನ್ಸ್ ಪಡೆದು ಚೀಟಿ ನಡೆಸುವುದಾಗಿಯೂ, 2020ರ ಜುಲೈ 10ರಂದು 2 ಲಕ್ಷ ರೂ.ನ ಚೀಟಿ ಆರಂಭಿಸುತ್ತಿರುವುದಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವರ ಬಳಿ ಚೀಟಿ ಹಾಕಿದ್ದು, 2022ರ ಜನವರಿಯಲ್ಲಿ ಚೀಟಿ ಮುಕ್ತಾಯವಾಗಿ ವೀಣಾ ಅವರಿಗೆ 2 ಲಕ್ಷ ರೂ. ಸಂದಾಯವಾಗಬೇಕಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಮಧ್ಯೆ ಶಶಿಕಲಾ ಪತಿ ಸ್ವಾಮಿ ಆತ್ಮಹತ್ಯೆಗೆ ಶರಣಾಗಿದ್ದರಿಂದ ವೀಣಾ ಅವರು, ಸ್ವಲ್ಪ ದಿನ ಕಳೆದು ತಮ್ಮ ಹಣವನ್ನು ಕೇಳಿದ್ದಾರೆ. ಸಬೂಬು ಹೇಳುತ್ತಾ ಬಂದಿದ್ದ ಶಶಿಕಲಾ, ಜೂನ್ 8ರಂದು ವೀಣಾ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿದ್ದಾರೆ. ನಂತರ ಶಶಿಕಲಾ ಅವರ ಎರಡೂ ಮೊಬೈಲ್‌ಗಳು ಸ್ವಿಚ್ ಆಫ್ ಆಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನ.27ರಂದು ಪದವಿ ಪ್ರದಾನ ಸಮಾರಂಭ

ಮೈಸೂರು,ನ.24–ಮೈಸೂರಿನ ಅಮೃತ ವಿಶ್ವವಿದ್ಯಾಪೀಠದಲ್ಲಿ 12ನೇ ಪದವಿ ಪ್ರದಾನ ಸಮಾರಂಭವು ನ.27ರಂದು ಬೆಳಗ್ಗೆ 11ಕ್ಕೆ ನಡೆಯಲಿದೆ. ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಪೂರ್ಣಾಮೃತಾನಂದಪುರಿ, ಕುಲಸಚಿವ ಡಾ.ಶಂಕರನ್, ಪರೀಕ್ಷಾ ನಿಯಂತ್ರಕ ಡಾ.ದಂಡಪಾಣಿ, ಡೀನ್ ಡಾ.ಕೃಷ್ಣಕುಮಾರ್, ಐಕ್ಯೂಎಸಿ ಮುಖ್ಯಸ್ಥ ಡಾ.ಪ್ರಶಾಂತ್ ನಾಯರ್ ಸಮಾರಂಭದಲ್ಲಿ ಪಾಲ್ಗೊಳ್ಳುವರು.

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬವರ್ಗ ಹಾಗೂ ಶ್ರೀ ಪಾರ್ವತಿ ಟ್ರಾನ್ಸ್‌ಪೋರ್ಟ್, ಮೈಸೂರು

ಜಿ. ಕೆಂಡಗಣ್ಣಾರಾಧ್ಯ

CHANGE OF NAME

I, Vyagula Mary, residing at D.No. 86, 7th Cross, O.D. Block, Rajendra Nagar, Kesare, Mysuru-570 007, have changed my name as Amulya Mary, on my own free will, in front of Notary M.A. Hemalatha on 21-10-2022. I hereby declare that I shall at all times here after in all records, deeds and instruments in writing and in all actions and proceedings, in all dealings and transactions and upon all occasions whatsoever use and sign the said name of Amulya Mary.

Sd/- Amulya Mary

ಇಂದಿನಿಂದ ಅಡೋ

ದಿನ 4 ಪ್ರದರ್ಶನ : 10.30, 1.30, 4.30, 7.30



ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ನಗರ, ಜಯನಗರ, 3ನೇ ಮುಖ್ಯ ರಸ್ತೆ, 12ನೇ ಅಡ್ಡ ರಸ್ತೆ, ಮನೆ ನಂ.118/ಎ ರಲ್ಲಿ ವಾಸವಾಗಿರುವ ಲೇಟ್. ಎಸ್. ವಾಸುದೇವ್ ರವರ ಮಗನಾದ ಲೋಕೇಶ್ ವಿ. ರವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ದೇವರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.60 ರೀ.ಖುಷ್ಕಿ ಸರ್ವೆ ನಂ. (60/2) ರಲ್ಲಿರುವ 0–20 ಗುಂಟೆ ಸ್ವತ್ತನ್ನು, ಸ್ವತ್ತಿನ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಗಿ ಗ್ರಾಮ, 11ನೇ ಮುಖ್ಯ ರಸ್ತೆ, ಮನೆ ನಂ.571 ರಲ್ಲಿ ವಾಸವಾಗಿರುವ ಶ್ರೀ ಶಿವೇಗೌಡ ರವರ ಮಗನಾದ ರಾಜೇಶರವರಿಂದ ಷೆಡ್ಯೂಲ್ ಸ್ವತ್ತನ್ನು ಈಗಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಖರೀದಿಸುವವರಿದ್ದಾರೆ.

ಈ ಸಂಬಂಧದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಿತಾಸಕ್ತಿ ಉಳ್ಳವರು, ಹಕ್ಕುದಾರರು ಇದ್ದರೆ ಅಕ್ಷೇಪಣೆ, ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನದಿಂದ 5 ದಿವಸಗಳೊಳಗೆ, ಈ ಕೆಳಕಂಡ ನನ್ನ ಕಕ್ಷಿದಾರರನ್ನು ಅಥವಾ ನೇರವಾಗಿ ನನ್ನನ್ನು ಕಛೇರಿಯಲ್ಲಿ ಸಂಪರ್ಕಿಸಿ ಸಂಬಂಧಪಟ್ಟ ಲಿಖಿತವಾದ ದಾಖಲೆ ಪತ್ರಗಳು ಹಾಜರುಪಡಿಸತಕ್ಕದ್ದು, ಅನಂತರ ಬಂದ ತಕರಾರುಗಳಿಗೆ ಮಾನ್ಯ ಮಾಡುವುದಿಲ್ಲ ಎಂದು ಶೃತಪಡಿಸಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ದೇವರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.60 ರೀ.ಖುಷ್ಕಿ ಸರ್ವೆ ನಂ. (60/2) ರಲ್ಲಿರುವ 0–20 ಗುಂಟೆ ಜಮೀನಿಗೆ ಚಕ್ಕುಬಂದಿ:–

ಪೂರ್ವಕ್ಕೆ : ಸಿದ್ದೇಗೌಡ ರವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ. 68ರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸಿದ್ದೇಗೌಡ ರವರ ಜಮೀನು.

ಈ ಮಧ್ಯೆಯಿರುವ 0–20 ಗುಂಟೆ ಖುಷ್ಕಿ ಜಮೀನು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ. Phone: 9606236742 (Lokesh V.)

Sd/- L.N.Rajendran, B.Sc., LL.B., Advocate, Office : #179/6, 1st Floor, M.G.Road, Udayagiri, Mysore - 570019, Mob.: 9741522545

Nc Sky Villas

30x40, 3 BHK Duplex, Bogadi Road, concrete road, gated community. Rera approved. Rs. 58.75 Lakhs.

Call: 9071401234

ಬೇಕಾಗಿದ್ದಾರೆ


ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888



3ನೇ ವರ್ಷದ ಸವಿನೆನಪು



ಜನನ: 2.5.1947–ಮರಣ: 25.11.2019

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದು:ಖತಪ್ತರು

ಪತ್ನಿ: ಶ್ರೀಮತಿ ಸಾವಿತ್ರಮ್ಮ,
ಮಕ್ಕಳು: ಗಿರೀಶ ಮತ್ತು ಬಸವರಾಜು,
ಸೊಸೆಯಂದಿರು: ಗೀತಾ ಮತ್ತು ಆಶಾ,
ಮೊಮ್ಮಕ್ಕಳು: ಮನುಸೂರ್ಯ, ಗಗನ್, ಲಿಖಿತ್ ರಾಜ್, ಹರ್ಷಿತ
ತಮ್ಮಂದಿರು: ಪುಟ್ಟಬಸವಯ್ಯ ಮತ್ತು ಚಿಕ್ಕಣ್ಣ

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು–570018
ವೆಬ್‌ಸೈಟ್: http://www.hootagallicity.mrc.gov.in
ಇಮೇಲ್: itstaff_ulb_hootagalli@yahoo.com ಸಹಾಯವಾಣಿ: 0821–2001737

ಸಂಖ್ಯೆ:ನಸಹೂ:ಆಶಾ:ಟೆಂಡರ್: 05/2022–23 ದಿನಾಂಕ:23.11.2022

ಟೆಂಡರ್ ಪ್ರಕಟಣೆ

ಕೆ.ಟಿ.ಟಿ.ಪಿ 2000ರ ನಿಯಮದಂತೆ ಹೂಟಗಳ್ಳಿ ನಗರಸಭೆಯ ಈ ಕೆಳಕಂಡ ಸಾಮಗ್ರಿಗಳ ಸರಬರಾಜು/ಸೇವೆಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೊಂದಾಯಿತ ಸಂಸ್ಥೆಗಳು **ದಿನಾಂಕ 09.12.2022 ರ ಸಂಜೆ 4.00 ಘಂಟೆಯೊಳಗೆ** ಈ ಕಛೇರಿಗೆ ಅರ್ಜಿ ಸಲ್ಲಿಸಿ ನಿಗಧಿತ ಶುಲ್ಕ ಪಾವತಿಸಿ ಟೆಂಡರ್ ನಮೂನೆಯನ್ನು ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್ ಫಾರಂಗಳೊಂದಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಮೊಹರು ಮಾಡಿದ ಲಕೋಟೆಯಲ್ಲಿ **ದಿನಾಂಕ: 12.12.2022ರ ಸಂಜೆ 4–30ರ** ಒಳಗಾಗಿ ಸಲ್ಲಿಸತಕ್ಕದ್ದು. ಸಾಧ್ಯಾವಾದಲ್ಲಿ ಅದೇ ದಿನ **ಸಂಜೆ 5–00ಕ್ಕೆ** ಟೆಂಡರ್ ಫಾರಂಗಳನ್ನು ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಅಂಗೀಕರಿಸುವ ಅಥವ ತಿರಸ್ಕರಿಸುವ ಅಧಿಕಾರ ಪುರಸಭೆ ಆಡಳಿತಕ್ಕೆ ಸೇರಿರುತ್ತದೆ. ಟೆಂಡರ್ ಫಾರಂ ಶುಲ್ಕ: ರೂ 500+18% ಜಿಎಸ್‌ಟಿ.

ಕ್ರ ಸಂ	ಕೆಲಸದ ವಿವರ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1.	ನಗರಸಭೆಯ ಪೌರಕಾರ್ಮಿಕರಿಗೆ ದೈನಂದಿನ ಸ್ವಚ್ಛತಾ ಕೆಲಸಗಳ ನಿರ್ವಹಣೆಗೆ ಅವಶ್ಯವಿರುವ ಸ್ವಚ್ಛತಾ ಸಾಮಗ್ರಿ, ಸಾಧನ ಸಲಕರಣೆಗಳನ್ನು ಸರಬರಾಜು ಮಾಡಲು ವಾರ್ಷಿಕ ಟೆಂಡರ್	4.75	12000–00
2.	ನಗರಸಭೆಯ ಪೌರಕಾರ್ಮಿಕರಿಗೆ ದೈನಂದಿನ ಸ್ವಚ್ಛತಾ ಕೆಲಸಗಳ ನಿರ್ವಹಣೆಗೆ ಅವಶ್ಯವಿರುವ ಸುರಕ್ಷಾ ಧರಿಸುಗಳನ್ನ ಸರಬರಾಜು ಮಾಡಲು ವಾರ್ಷಿಕ ಟೆಂಡರ್	4.75	12000–00
3.	ನಗರಸಭೆ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳಲ್ಲಿ ಅಳವಡಿಸಲು ಟ್ವಿನ್‌ಬಿನ್‌ಗಳನ್ನು ಸರಬರಾಜು ಮಾಡುವ ಬಗ್ಗೆ.	2.50	6250–00
4.	ಹೂಟಗಳ್ಳಿ ನಗರಸಭೆಯ ಸ್ವಚ್ಛತಾ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸಂಪೂರ್ಣ ಆರೋಗ್ಯ ತಪಾಸಣೆ (Master Health Check up) (ಶೇ. 24.10 ಯೋಜನೆಯಡಿ)	3.00	7500–00

ಸಹಿ/–ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/KAVITA/705/2022-23

ಮಾರಾಟಕ್ಕಿದೆ

30x40, ನಿವೇಶನ ಮಾರಾಟಕ್ಕಿದೆ. West Face, 'C' Block, ಆನಂದನಗರ, ಮೈಸೂರು (ರಿಂಗ್ ರೋಡ್ ಪಕ್ಕ) (ಮಧ್ಯವರ್ತಿಗಳಿಗೆ ಅವಕಾಶವಿಲ್ಲ ಕ್ಷಮಿಸಿ). ಸಂಪರ್ಕಿಸಿ:

9481188958

ಮನೆ ಬಾಡಿಗೆಗೆ ಇದೆ


ಎಲ್ಲಾ ಸೌಲಭ್ಯಗಳಿರುವ 2BHK, 2 ಬಾತ್ ರೂಂ, 1ನೇ ಮಹಡಿ @ 5ನೇ ಮೇನ್, 14ನೇ ಕ್ರಾಸ್, ಜಯನಗರ, ಮೈಸೂರು. (ಸಸ್ಯಹಾರಿಗಳಿಗೆ ಮಾತ್ರ) ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ:

9902302474 / 9902764613

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು




ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com







ಪಾರಂಪರಿಕ ಕಟ್ಟಡಗಳ ಸ್ವರೂಪ ಉಳಿಸುವುದು ನಮ್ಮ ಜವಾಬ್ದಾರಿ

ವಿಶ್ವ ಪಾರಂಪರಿಕ ಸಪ್ತಾಹಕ್ಕೆ ಚಾಲನೆ ನೀಡಿ ಇತಿಹಾಸ ತಜ್ಞ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಅಭಿಮತ



ಮೈಸೂರು, ನ.24(ಆರ್‌ಕೆಬಿ)– ಪಾರಂಪರಿಕ ಕಟ್ಟಡಗಳ ಸ್ವರೂಪ ಹಾಳು ಮಾಡದೆ ಅದನ್ನು ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ. ಯಾರಾದರೂ ಕಿಡಿಗೇಡಿಗಳು ಪಾರಂಪರಿಕ ಕಟ್ಟಡಗಳ ಸ್ವರೂಪವನ್ನು ಹಾಳು ಮಾಡುತ್ತಿದ್ದರೆ, ಹೆಸರು ಬರೆದು ವಿಕೃತಿ ಮೆರೆಯುತ್ತಿದ್ದರೆ ಅದನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಇತಿಹಾಸ ತಜ್ಞ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ತಿಳಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಗುರುವಾರ ಆಯೋಜಿಸಿದ್ದ 'ವಿಶ್ವ ಪಾರಂಪರಿಕ ಸಪ್ತಾಹ'ಕ್ಕೆ ಚಾಲನೆ ನೀಡಿ, 'ಮೂರ್ತ ಪರಂಪರೆಯ ಆಚರಣೆ ಮತ್ತು ವಾಸ್ತುಶಿಲ್ಪ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದೇಗುಲ, ಮಸೀದಿ, ಚರ್ಚ್ ಸೇರಿದಂತೆ ಯಾವುದೇ ಸ್ಮಾರಕ, ಒಂದೇ ಸಮುದಾಯಕ್ಕೆ ಮಾತ್ರ ಸೀಮಿತವಲ್ಲ. ಅದು ಎಲ್ಲರಿಗೂ ಸೇರಿರುವಂಥದ್ದು ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್, ಶ್ರೀರಂಗಪಟ್ಟಣದ ದರಿಯಾ ದೌಲತ್, ಹಳೇಬೀಡಿನ ಹೊಯ್ಸಳೇಶ್ವರ ದೇಗುಲ ಎಲ್ಲವೂ ನಮ್ಮವೇ. ಅವುಗಳನ್ನು ಉಳಿಸಬೇಕಿರುವುದು ನಮ್ಮದೇ ಜವಾಬ್ದಾರಿ. ಹಾಗಾಗಿ ಅವುಗಳನ್ನು ಸಂರಕ್ಷಿಸಿಕೊಳ್ಳುವುದು ಅಗತ್ಯ ಎಂದು ಹೇಳಿದರು.

ಭಾರತವನ್ನು ವಿಶ್ವ ಪಾರಂಪರಿಕ ತಾಣವಾಗಿ ಮಾಡುವಷ್ಟು ಐತಿಹಾಸಿಕ ಸ್ಥಳಗಳು ನಮ್ಮಲ್ಲಿ ಹೆಜ್ಜೆ ಹೆಜ್ಜೆಗೂ ಕಾಣ ಸಿಗುತ್ತವೆ. ಶ್ರೀಲಂಕಾ, ಬಾಂಗ್ಲಾದೇಶ, ಪಾಕಿಸ್ತಾನ, ಅಫ್ಘಾನಿಸ್ತಾನ ಸೇರಿದಂತೆ ದಕ್ಷಿಣ ಏಷ್ಯಾದಲ್ಲಿ ಐತಿಹಾಸಿಕ ಮಹತ್ವ ಸಾರುವ ಸಾವಿರಾರು ಪಾರಂಪರಿಕ ಸ್ಥಳಗಳಿವೆ. ನಮ್ಮ ದೇಶದಲ್ಲಿ ಯುನೆಸ್ಕೋ ಘೋಷಿಸಿರುವ 40 ವಿಶ್ವ ಪಾರಂಪರಿಕ ತಾಣಗಳಿವೆ. ಭಾರತವನ್ನು ವಿಶ್ವ ಪಾರಂಪರಿಕ ತಾಣವಾಗಿ ಮಾಡುವಷ್ಟು ಐತಿಹಾಸಿಕ ತಾಣಗಳಿವೆ ಎಂದು ತಿಳಿಸಿದರು.

ಭಾರತವು ವಿಶ್ವ ಪಾರಂಪರಿಕ ತಾಣವೆಂದು ಘೋಷಣೆಯಾದರೆ ಯುನೆಸ್ಕೋ ನಿಯಮಾವಳಿ ಪಾಲಿಸಬೇಕಾಗುತ್ತದೆ. ನಂಜನಗೂಡು, ಮೇಲುಕೋಟೆಯಂತಹ ಪಾರಂಪರಿಕ ಊರುಗಳಲ್ಲಿ ಮನೆಗಳ ದುರಸ್ತಿ ಮಾಡಬೇಕಾದರೆ ಅನುಮತಿ ಪಡೆಯಬೇಕಾಗುತ್ತದೆ. ಆದರೆ ಅದನ್ನು ಸಮಸ್ಯೆ ಎಂದು ಭಾವಿಸದೆ ಇದು ತಮ್ಮ ಜವಾಬ್ದಾರಿ ಎಂದು ತಿಳಿದುಕೊಳ್ಳಬೇಕು ಎಂದರು.

ಪಾರಂಪರಿಕ ಕಟ್ಟಡವಾಗಲೀ, ಆಧುನಿಕ ಕಟ್ಟಡವಾಗಲೀ ಸೂಕ್ತ ನಿರ್ವಹಣೆ ಇಲ್ಲದಿದ್ದರೆ ಶಿಥಿಲಗೊಳ್ಳುತ್ತದೆ. ಶತಕದಷ್ಟು ಹಳೆಯದಾದ ಮಹಾರಾಣಿ ಕಾಲೇಜು ಕಟ್ಟಡ ಶಿಥಿಲಗೊಂಡು ಕಣ್ಣೆದುರೇ ಒಂದು ಭಾಗ ಕುಸಿದಿದೆ. ಹೀಗಾಗಿ ನಿರ್ವಹಣೆ ಇಲ್ಲದಿದ್ದರೆ ಎಂಥ ಕಟ್ಟಡಗಳು ಕೂಡ ಶಿಥಿಲಗೊಂಡು ಕುಸಿಯುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ. ಹೀಗಾಗಿ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ. ವಿದ್ಯಾರ್ಥಿಗಳಿಗೆ ಪಾರಂಪರಿಕ ಕಟ್ಟಡಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಅದಕ್ಕಾಗಿ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್, ಇನ್ಸ್ಟಾಗ್ರಾಂಗಳನ್ನು ಬಳಸಿಕೊಂಡು ಪಾರಂಪರಿಕ ಕಟ್ಟಡಗಳ ಮುಂದೆ ಸೆಲ್ಫಿ ತೆಗೆದು ಹಾಕಬೇಕು. ಈ ಮೂಲಕ ಎಲ್ಲರಲ್ಲೂ ಪಾರಂಪರಿಕ ಕಟ್ಟಡಗಳ ಬಗ್ಗೆ ಜಾಗೃತಿ ಮೂಡಿಸಿದಂತಾಗುತ್ತದೆ ಎಂದು ಹೇಳಿದರು.

ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ವಿ.ಶೋಭಾ ಮಾತನಾಡಿದರು.

ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜು, ಟೆರೆಷಿಯನ್ ಕಾಲೇಜು, ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಡಿಸೈನ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇತಿಹಾಸ ತಜ್ಞರಾದ ಡಾ.ಎನ್.ಎಸ್.ರಂಗರಾಜು, ಡಾ.ಎಚ್.ಎಂ.ಸಿದ್ದನಗೌಡ, ಇಲಾಖೆಯ ಉಪನಿರ್ದೇಶಕಿ ಸಿ.ಎನ್.ಮಂಜುಳಾ, ಇಂಜಿನಿಯರ್ ಸಿ.ಟಿ. ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

'ಟಿಪ್ಪು ನಿಜಕನಸುಗಳು' ಮೂರನೇ ಪ್ರದರ್ಶನಕ್ಕೂ ಉತ್ತಮ ಪ್ರತಿಕ್ರಿಯೆ



ಮೈಸೂರು, ನ.24(ಎಂಕೆ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕದ ಮೂರನೇ ಪ್ರದರ್ಶನ ಪೊಲೀಸ್ ಭದ್ರತೆಯಲ್ಲಿ ನಡೆಯಿತು.

ಕಿಕ್ಕಿರಿದು ತುಂಬಿದ್ದ ರಂಗಾಯಣದ ಭೂಮಿಗೀತ ವೇದಿಕೆಯಲ್ಲಿ ಮೊದಲ (ನ.20) ಹಾಗೂ ಎರಡನೇ(21) ಪ್ರದರ್ಶನದಂತೆಯೇ ಗುರುವಾರ 3ನೇ ಪ್ರದರ್ಶನಕ್ಕೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಮಾರಾಟಕ್ಕೆ ಮಾತ್ರ ಹೈಕೋರ್ಟ್ ತಡೆ ನೀಡಿರುವ ಹಿನ್ನೆಲೆ ಯಾವುದೇ ಗೊಂದಲವಿಲ್ಲದೆ ನಾಟಕ ಪ್ರದರ್ಶನಗೊಂಡಿತು. ನಾಟಕ ವೀಕ್ಷಣೆಗೆ ತಂಡೋಪತಂಡವಾಗಿ ಆಗಮಿಸಿದ್ದ ನೂರಾರು ಮಂದಿ ರಂಗಭೂಮಿ ಅಭಿಮಾನಿಗಳು ನಾಟಕದ ಪ್ರತಿಯೊಂದು ಸನ್ನಿವೇಶವನ್ನು ಸವಿದರಲ್ಲದೆ ಚಪ್ಪಾಳೆ ತಟ್ಟಿ ಕಲಾವಿದರಿಗೆ ಪ್ರೋತ್ಸಾಹ ನೀಡಿದರು.

ರಾಜ್ಯದೆಲ್ಲೆಡೆ ಸತ್ಯದ ಅನಾವರಣಕ್ಕೆ ಜನರ ಒತ್ತಾಯ...

ಕೃತಿಗೆ ತಾತ್ಕಾಲಿಕ ತಡೆ ತಂದಿರಬಹುದು. ಆದರೆ ನಾಟಕ ಪ್ರದರ್ಶನ ಯಶಸ್ವಿಯಾಗಿ ನಡೆಯುತ್ತಿದೆ. ನೂರಾರು ಜನರು ನಾಟಕ ನೋಡುತ್ತಿದ್ದಾರೆ. ರಾಜ್ಯದೆಲ್ಲೆಡೆ ಸತ್ಯದ ಅನಾವರಣವಾಗಬೇಕು ಎಂದು ಜನರೇ ಒತ್ತಾಯಿಸುತ್ತಿದ್ದಾರೆ. ಸುಳ್ಳು ಇತಿಹಾಸವನ್ನು ತಿಳಿದಿದ್ದ ಜನರು, ಸತ್ಯದ ಅನಾವರಣವನ್ನು ಮೆಚ್ಚಿಕೊಂಡಿದ್ದಾರೆ. ನನಗೆ ಜನರ ಮಾತು ಕೇಳಿ ರೋಮಾಂಚನವಾಗುತ್ತಿದೆ. ನ್ಯಾಯಾಲಯ ನೀಡಿರುವ ತಡೆಯಾಜ್ಞೆ ಪ್ರತಿ ಇನ್ನೂ ನನ್ನ ಕೈ ಸೇರಿಲ್ಲ. ಆದರೆ, ನಮ್ಮ ನಾಟಕ ಪ್ರದರ್ಶನದ ಯಶಸ್ಸಿನ ದಾರಿ ಮುಂದುವರೆದಿದೆ

– ಅಡ್ಡಂಡ ಸಿ.ಕಾರ್ಯಪ್ಪ

ನ.29 ಮತ್ತು ಡಿ.1ಕ್ಕೆ ಕಲಾಮಂದಿರದಲ್ಲಿ: ರಂಗಾಸ್ತಕರ ಒತ್ತಾಯದ ಮೇರೆಗೆ ನ.29 ಹಾಗೂ ಡಿ.1 ರಂದು ಕಲಾಮಂದಿರದಲ್ಲಿ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಈಗಾಗಲೇ ಮೂರು ಪ್ರದರ್ಶನಗಳು ಯಶಸ್ವಿಯಾಗಿದ್ದು, ಟಿಕೆಟ್ ಸಿಗದೆ ಸಾಕಷ್ಟು ಜನರು ವಾಪಸ್ ಹೋಗುವಂತಾಗಿದೆ. ಆದ್ದರಿಂದ ಒಂದೇ ವೇದಿಕೆಯಲ್ಲಿ ಸಾವಿರಾರು ಜನರು ನೋಡಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ಕಲಾಮಂದಿರದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ರಂಗಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಲ್ವರು ಖದೀಮರ ಬಂಧನ: 20 ಲಕ್ಷ ರೂ. ಮೌಲ್ಯದ ಆಭರಣ ವಶ



ಮೈಸೂರು, ನ.24(ಎಸ್‌ಬಿಡಿ)– ಮೈಸೂರಿನ ಸಿಸಿಬಿ ಪೊಲೀಸರು, ನಾಲ್ವರು ಖತರ್ನಾಕ್ ಕಳ್ಳರನ್ನು ಬಂಧಿಸಿ, 20.40 ಲಕ್ಷ ರೂ. ಮೌಲ್ಯದ ಆಭರಣ ವಶಪಡಿಸಿಕೊಂಡಿದ್ದಾರೆ. ನಗರದಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಪತ್ತೆ ಕಾರ್ಯಕ್ಕೆ ಸಿಸಿಬಿ ಪೊಲೀಸರ ವಿಶೇಷ ತಂಡವನ್ನು ರಚಿಸಲಾಗಿತ್ತು. ಈ ಸಂಬಂಧ ಕಾರ್ಯಾಚರಣೆ ಆರಂಭಿಸಿದ ತಂಡ ನ.21ರಂದು ಓರ್ವ, ನ.16ರಂದು ಇಬ್ಬರು ಹಾಗೂ ಅ.25ರಂದು ಮತ್ತೋರ್ವ ಖದೀಮನನ್ನು ಬಂಧಿಸಿದ್ದು, ಈ ಮೂಲಕ ಹಲವು ಕಳ್ಳತನ ಪ್ರಕರಣಗಳನ್ನು ಬೇಧಿಸಿದೆ.

ಪೊಲೀಸರು ಖಚಿತ ಮಾಹಿತಿ ಮೇರೆಗೆ ನ.21ರಂದು ಓರ್ವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಮೈಸೂರಿನ ಜಯಲಕ್ಷ್ಮಿಪುರಂ ಠಾಣೆ ವ್ಯಾಪ್ತಿಯಲ್ಲಿ ಮನೆ ಕಳ್ಳತನ ಹಾಗೂ ಹಾಸನ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ ನಡೆಸಿರುವುದು ತಿಳಿದುಬಂದಿದೆ. ನಂತರ ಆತನನ್ನು ಬಂಧಿಸಿ, ಕಳವು ಮಾಡಿದ್ದ 2.40 ಲಕ್ಷ ರೂ. ಮೌಲ್ಯದ 38 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಮತ್ತಿಬ್ಬರು ಆರೋಪಿಗಳನ್ನು ನ.16ರಂದು ಬಂಧಿಸಿ, ಅವರಿಂದ 16.50 ಲಕ್ಷ ರೂ. ಮೌಲ್ಯದ 312 ಗ್ರಾಂ ಚಿನ್ನಾಭರಣ, 868 ಗ್ರಾಂ ಬೆಳ್ಳಿಯ ಆಭರಣ, 4 ವಾಚ್ ಹಾಗೂ ಕ್ಯಾಮರಾ ವಶಪಡಿಸಿಕೊಳ್ಳಲಾಗಿದೆ. ಮೈಸೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವೇಣೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಕಳ್ಳತನ, ಸರಗಳ್ಳತನ ಮತ್ತು ಸಾಮಾನ್ಯ ಕಳವು ನಡೆಸಿರುವುದು ವಿಚಾರಣೆಯಲ್ಲಿ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೋರ್ವ ಆರೋಪಿಯನ್ನು ಕಳೆದ ಅಕ್ಟೋಬರ್ 25ರಂದು ಬಂಧಿಸಿ, ಆತ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ 1.50 ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಈ ನಾಲ್ವರು ಖದೀಮರ ಬಂಧನದಿಂದ ವಿದ್ಯಾರಣ್ಯಪುರಂ ಠಾಣೆಯ 2 ಸರಗಳ್ಳತನ, ನಜರ್‌ಬಾದ್, ಕುವೆಂಪುನಗರ, ಉದಯಗಿರಿ ಠಾಣಾ ವ್ಯಾಪ್ತಿಯ ತಲಾ ಒಂದು ಸರಗಳ್ಳತನ, ಸರಸ್ವತಿಪುರಂ, ನಜರ್‌ಬಾದ್, ಆಲನಹಳ್ಳಿ, ದಕ್ಷಿಣ ಕನ್ನಡ ಜಿಲ್ಲೆಯ ವೇಣೂರು ಠಾಣಾ ವ್ಯಾಪ್ತಿಯ ತಲಾ ಒಂದು ಕನ್ನ ಕಳವು, ನಜರ್‌ಬಾದ್ ಠಾಣಾ ವ್ಯಾಪ್ತಿಯ ಒಂದು ಮನೆ ಕಳುವು, ನಜರ್‌ಬಾದ್ ಮತ್ತು ವಿಜಯನಗರ ಠಾಣೆಯಲ್ಲಿ ತಲಾ ಒಂದು ಸಾಮಾನ್ಯ ಕಳವು ಪ್ರಕರಣಗಳು ಪತ್ತೆಯಾಗಿವೆ.

ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತ ಪ್ರಸನ್ನ, ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿಸಿಬಿ ಹೆಚ್‌ಬಿ ವಿಭಾಗದ ಇನ್ಸ್‌ಪೆಕ್ಟರ್ ಜಿ.ಶೇಖರ್, ಎಎಸ್‌ಐಗಳಾದ ಯು.ಉಮೇಶ್, ಅಸ್ಗರ್ ಖಾನ್, ಸಿಬ್ಬಂದಿ ಸಲೀಂಪಾಷ, ರಾಮಸ್ವಾಮಿ, ಲಕ್ಷ್ಮಿಕಾಂತ, ಪಿ.ಎನ್.ಆನಂದ, ಯಾಕೂಬ್ ಷರೀಫ್, ಉಮಾಮಹೇಶ್, ಗಣೇಶ್, ಶಿವರಾಜು, ಪ್ರಕಾಶ್, ಸುರೇಶ್, ಚಂದ್ರಶೇಖರ, ಗೋವಿಂದ, ಮಧುಸೂದನ, ಮೋಹನಾರಾಧ್ಯ, ಮಹೇಶ್, ಪವನ್, ನರಸಿಂಹರಾಜು, ರಮ್ಯಾ ಹಾಗೂ ಗೌತಮ್ ಕಾರ್ಯಾಚರಣೆ ನಡೆಸಿದ್ದರು.

ಕುಡಿದು ವಾಹನ ಚಾಲನೆ ಮಾಡಿದರೆ ಬೀಳಲಿದೆ ದಂಡದ ಬರೆ

ಮೈಸೂರಲ್ಲಿ ಇನ್ನು ಮುಂದೆ ವಾರಕ್ಕೆ ಮೂರು ದಿನ 'ಡ್ರಂಕ್ ಅಂಡ್ ಡ್ರೈವ್' ಕಾರ್ಯಾಚರಣೆ



ಮೈಸೂರು, ನ.24(ಎಂಟಿವೈ)– ಟ್ರಾಫಿಕ್ ರೂಲ್ಸ್ ಗಾಳಿಗೆ ತೂರಿ ಬೇಕಾಬಿಟ್ಟಿ ವಾಹನ ಚಲಾಯಿಸುವವರಿಗೆ ಬಿಸಿ ಮುಟ್ಟಿಸಲು ಮುಂದಾಗಿರುವ ಮೈಸೂರು ಸಂಚಾರ ಪೊಲೀಸರು, ಇನ್ನು ಮುಂದೆ ವಾರಕ್ಕೆ ಮೂರು ದಿನ 'ಡ್ರಂಕ್ ಅಂಡ್ ಡ್ರೈವ್' ತಪಾಸಣೆ ಕಾರ್ಯಾಚರಣೆ ನಡೆಸಲು ಸಜ್ಜಾಗಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಒಂದೂವರೆ ವರ್ಷದಿಂದ ಕುಡಿದು ವಾಹನ ಚಲಾಯಿಸುವವರಿಗೆ ಕಡಿವಾಣ ಹಾಕಲು ಕಾರ್ಯಾಚರಣೆ ನಡೆಸುತ್ತಿರಲಿಲ್ಲ. ಇದನ್ನೇ ಬಂಡವಾಳವನ್ನಾಗಿಸಿಕೊಂಡಿದ್ದ ಕೆಲವರು ಸಂಜೆ ವೇಳೆ ಮದ್ಯಪಾನ ಮಾಡಿ ವಾಹನ ಚಲಾಯಿಸುತ್ತಿದ್ದರು. ಇದರಿಂದ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದ್ದವು. ಇದನ್ನು ಗಮನಿಸಿರುವ ಮೈಸೂರು ಪೊಲೀಸರು ಕುಡಿದು ವಾಹನ ಚಲಾಯಿಸುವವರಿಂದ ಅಮಾಯಕರಿಗೆ ಆಗುವ ತೊಂದರೆ ತಡೆಗಟ್ಟಲು ಮತ್ತೆ ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ನೂತನ ಪೊಲೀಸ್ ಆಯುಕ್ತರಾಗಿ ಬಿ.ರಮೇಶ್ ಅಧಿಕಾರ ವಹಿಸಿಕೊಂಡ ನಂತರ ಎಲ್ಲಾ ಟ್ರಾಫಿಕ್ ಪೊಲೀಸ್ ಠಾಣೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ತಮ್ಮ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸುವ ವಾಹನ ಸವಾರರಿಗೆ ದಂಡದ ಬರೆ ಬೀಳಲಿದೆ. ಈ ಮಧ್ಯೆ ಮೈಸೂರಲ್ಲಿ ತ್ರಿಬಲ್ ಡ್ರೈವ್, ಹೆಲ್ಮೆಟ್ ತಪಾಸಣಾ ಕಾರ್ಯಾಚರಣೆಯನ್ನೂ ಆರಂಭಿಸಲಾಗಿದೆ. ಅಲ್ಲದೆ, ಕುಡಿದು ವಾಹನ ಚಾಲನೆ ಮಾಡುವವರಿಗೆ ಕಡಿವಾಣ ಹಾಕಲು ವಾರದಲ್ಲಿ 3 ದಿನ ಆಯ್ದ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಲು ಕ್ರಮ ಕೈಗೊಂಡಿದ್ದಾರೆ. ಕುಡಿದು ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.



ಶಾಸಕರಾದ ಜಿ.ಟಿ.ದೇವೇಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ ಅವರ ಅಭಿಮಾನಿಗಳು ಬೃಹತ್ ಬಾದಾಮಿ ಹಾರ ಹಾಕಿ ಶುಭಾಶಯ ಕೋರಿದರು. ಚಿತ್ರದಲ್ಲಿ ಜಿ.ಟಿ.ದೇವೇಗೌಡರೊಂದಿಗೆ ಪುತ್ರ ಜಿ.ಡಿ.ಹರೀಶ್‌ಗೌಡ ಇದ್ದಾರೆ.

ವಿದ್ಯುನ್ಮಾನ ಮತಯಂತ್ರ ಭದ್ರತೆಗೆ ಪ್ರತ್ಯೇಕ ಹೊಸ ಕಟ್ಟಡ

ಮೈಸೂರು, ನ.24(ಎಸ್‌ಬಿಡಿ)– ಮೈಸೂರಿನಲ್ಲಿ ನೂತನ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿ ಗುರುವಾರ ಉದ್ಘಾಟನೆಗೊಂಡಿತು.



ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದ ಆವರಣದಲ್ಲಿ ನಿರ್ಮಿಸಲಾಗಿರುವ ನೂತನ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿ(EVM & VVPAT Warehouse)ಯನ್ನು ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಉದ್ಘಾಟಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮತಯಂತ್ರಗಳ ಭದ್ರತಾ ಕೊಠಡಿಯ ಕಟ್ಟಡವನ್ನು 300 ಚದರ ಅಡಿ ವಿಸ್ತೀರ್ಣದಲ್ಲಿ ಅಂದಾಜು ಮೊತ್ತ 5.10 ಕೋಟಿ ರೂ.ಗಳಲ್ಲಿ ನಿರ್ಮಿಸಲಾಗಿದೆ ಎಂದು ಮೈಸೂರು ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಹೆಚ್.ಬಿ.ಸತೀಶ್ ತಿಳಿಸಿದ್ದಾರೆ.

ಈವರೆಗೆ ವಾಲ್ಮೀಕಿ ರಸ್ತೆಯ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕಟ್ಟಡವನ್ನು ಮತಯಂತ್ರಗಳ ಸ್ಟ್ರಾಂಗ್ ರೂಮ್ ಆಗಿ ಬಳಸಿಕೊಳ್ಳಲಾಗುತ್ತಿತ್ತು. ಸದ್ಯ ಇದಕ್ಕಾಗಿಯೇ ಪ್ರತ್ಯೇಕ ಕಟ್ಟಡ ನಿರ್ಮಿಸಿರುವುದರಿಂದ ಸೂಕ್ತ ಭದ್ರತೆ ಕಲ್ಪಿಸಲು ಅನುಕೂಲವಾಗಲಿದೆ.

ನವವಿವಾಹಿತೆ ನಾಪತ್ತೆ

ಮೈಸೂರು, ನ.24– ನವವಿವಾಹಿತೆಯೊಬ್ಬರು ನಾಪತ್ತೆಯಾಗಿರುವ ಘಟನೆ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.



ಇಲ್ಲಿನ ನಿವಾಸಿ ಆರ್.ಎಸ್.ವಿವೇಕ್ ಎಂಬುವರ ಪತ್ನಿ ಪೂಜಾ(24) ಕಾಣೆಯಾದವರು. ಮೈಸೂರಿನ ಜೆ.ಸಿ.ನಗರ ನಿವಾಸಿ ಜಗದೀಶ್ ಎಂಬುವರ 2ನೇ ಮಗಳಾದ ಪೂಜಾಳನ್ನು 2022ರ ಫೆಬ್ರವರಿ ತಿಂಗಳಲ್ಲಿ ಮದುವೆಯಾಗಿ ಅನ್ಯೋನ್ಯವಾಗಿದ್ದವು. ನ.18ರಂದು ಮಧ್ಯಾಹ್ನ 3.45ರ ಸುಮಾರಿಗೆ ಮನೆಯಿಂದ ಹೊರ ಹೋದವಳು ಪುನಃ ಮನೆಗೆ ವಾಪಸ್ ಬಂದಿರುವುದಿಲ್ಲ. ಸ್ನೇಹಿತರು, ಸಂಬಂಧಿಕರ ಮನೆಗಳಲ್ಲಿ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಪೂಜಾ ಪತಿ ವಿವೇಕ್, ಸರಸ್ವತಿಪುರಂ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.0821–2418123/2418323/2418339 ಸಂಪರ್ಕಿಸುವಂತೆ ಕೋರಲಾಗಿದೆ.

ನಿಧನ

ಶ್ರೀಮತಿ ನಾಗಲಕ್ಷ್ಮಿ



ಮೈಸೂರು: ಮೈಸೂರಿನ ಜೆಪಿ ನಗರದ ನಿವಾಸಿ ಹಾಗೂ ಮೂಲತಃ ಗುಂಡ್ಲುಪೇಟೆ ಪಟ್ಟಣದವರಾದ ರಾಮಚಂದ್ರ ಅವರ ಪತ್ನಿ ಶ್ರೀಮತಿ ನಾಗಲಕ್ಷ್ಮಿ(70) ಗುರುವಾರ ನಿಧನರಾದರು.

ಮೃತರು ಕೀರ್ತಿಶೇಷರಾದ ರಾಮನಾರಾಯಣ ಶಾಸ್ತ್ರಿಗಳ ಸೊಸೆ ಹಾಗೂ ರಾಮಸಮುದ್ರದ ಗಮಕ ವಿದ್ವಾನ್ ಕೀರ್ತಿಶೇಷರಾದ ರಾಜಗೋಪಾಲ್ ಅವರ ಮಗಳು. ಮೃತರು ಪತಿ, ಮೈಸೂರು ವಿಶ್ವವಿದ್ಯಾನಿಲಯದ ನೌಕರ ಗಿರೀಶ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಗದೀಶ



ಮೈಸೂರು ಗಾಯತ್ರಿಪುರಂ ನಿವಾಸಿ ಜಗದೀಶ್(50) ಅವರು ನಿನ್ನೆ ನಿಧನರಾದರು. ಇವರು ಪತ್ನಿ ಸುಧಾ, ಪುತ್ರ, ಪುತ್ರಿ, ಬಂಧು–ಬಳಗ ಅಗಲಿದ್ದಾರೆ. ಇವರು ಭುವನೇಶ್ವರಿ ಸಂಘದ ಸದಸ್ಯರಾಗಿದ್ದರು. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕಮಲಮ್ಮ



ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು, ರಾವಂದೂರು ಹೋಬಳಿ ಮಲಗನಕೆರೆ ಗ್ರಾಮದ ನಿವಾಸಿ, ಅಂಗನವಾಡಿ ಕಾರ್ಯಕರ್ತೆ ಸಿ.ಜಿ.ಕಮಲಮ್ಮ(52) ಅವರು ನ.20ರಂದು ನಿಧನರಾದರು.

ಮೃತರು ಪತಿ ಶಾವಂದಪ್ಪ(ರಾಜಶೇಖರ), ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.11.2022 ಶುಕ್ರವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಿತೀಯ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು :** ಕೊಲಬರೇಟಿವ್ ಫೋರೆನ್ಸಿಕ್ ಕುರಿತು ರಾಜ್ಯ ಮಟ್ಟದ ಸಮ್ಮೇಳನ, ಮುಖ್ಯ ಅತಿಥಿಗಳು : ನಿವೃತ್ತ ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ, ಗೌರವ ಅತಿಥಿಗಳು : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ. ಬಿ. ಮಂಜುನಾಥ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಹೆಚ್. ಬಸವನಗೌಡಪ್ಪ, ಅಧ್ಯಕ್ಷತೆ : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ. ಸುರಿಂದರ್ ಸಿಂಗ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎ ಫಾರ್ಮಸಿ ಕಾಲೇಜು, ಬೆಳಗ್ಗೆ 9ಕ್ಕೆ.

■ **ಕರುನಾಡ ರಕ್ಷಣಾ ವೇದಿಕೆ, ಲಯನ್ಸ್ ಕ್ಲಬ್ ಆಫ್ ಮೈಸೂರು ರಾಜೀವನಗರ :** ಕನ್ನಡ ರಾಜ್ಯೋತ್ಸವ ಆಚರಣೆ ಪ್ರಯುಕ್ತ ಉಚಿತ ಕಣ್ಣಿನ ತಪಾಸಣೆ, ಉಚಿತ ಆರೋಗ್ಯ ತಪಾಸಣೆ, ಸಸಿ ನೆಡುವ ಕಾರ್ಯಕ್ರಮ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಸಾಮಾಜಿಕ ವಿಜ್ಞಾನದಲ್ಲಿ ಸಂಶೋಧನಾ ಪದ್ಧತಿ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಪ್ರಭಾರ ಉಪಕುಲಪತಿ ಪ್ರೊ. ಹೆಚ್. ರಾಜಶೇಖರ್, ಪ್ರಾಸ್ತಾವಿಕ ಭಾಷಣ : ಅಸೋಸಿಯೇಟ್ ಪ್ರೊಫೆಸರ್ ಡಾ. ಎಂ.ವಿ. ಮಹೇಶ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ : ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 9.30ಕ್ಕೆ

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಪ್ರಗತಿ ಪ್ರತಿನಿಧಿಗಳು ಮತ್ತು ವಿದ್ಯಾರ್ಥಿ ಪದಾಧಿಕಾರಿಗಳ ಪ್ರಮಾಣ ವಚನ, ಅಭಿವಿನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಒಡನಾಡಿ ಸೇವಾ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಸ್ಟ್ಯಾನ್ಲಿ ಕೆ.ವಿ. ಹಾಗೂ ಪರಶು, ಅಧ್ಯಕ್ಷತೆ : ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಾಂಶುಪಾಲ ಡಾ. ಡಿ. ರವಿ, ಸ್ಥಳ: ಕಾಲೇಜು ಕಲಾ ಮಂಟಪ, ಬೆಳಗ್ಗೆ 10ಕ್ಕೆ.

■ **ಮೈಸೂರು ಹಿಮೋಫೀಲಿಯ ಸೊಸೈಟಿ :** ಹಿಮೋಫಿಲಿಯ ಚಿಕಿತ್ಸೆಯಲ್ಲಿ ಆಧುನಿಕ ಸಂಶೋಧನೆಗಳು ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಡಾ. ಶಕೀಲಾ, ಡಾ. ರಾಜೇಶ್ವರಿದೇವಿ, ಕೆ.ಆರ್. ಆಸ್ಪತ್ರೆ ಡೀನ್ ಡಾ. ದಾಕ್ಷಾಯಿನಿ, ಡಾ. ಮೀರಾ, ಸ್ಥಳ: ಮಾಯಾಸ್ ಕಿಂಗ್ಸ್ ಕೋರ್ಟ್ ಹೋಟೆಲ್, ಬೆಳಗ್ಗೆ 10ಕ್ಕೆ

■ **ಕನ್ನಡ ಜಾನಪದ ಪರಿಷತ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಕನ್ನಡ ಜಾನಪದ ರಾಜ್ಯೋತ್ಸವ, ರಾಜ್ಯೋತ್ಸವ ಪುರಸ್ಕೃತರಿಗೆ ಸನ್ಮಾನ, ಉದ್ಘಾಟನೆ : ಮಾಜಿ ವಿಧಾನ ಪರಿಷತ್ ಸದಸ್ಯ ಡಿ. ಮಾದೇಗೌಡ, ಪ್ರಧಾನ ಭಾಷಣ : ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಎನ್. ರಾಗಿಣಿ, ಪ್ರಾಸ್ತಾವಿಕ ನುಡಿ : ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಡಾ. ಕ್ಯಾತನಹಳ್ಳಿ ಪ್ರಕಾಶ್ ಹೆಚ್. ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ. ಸುಬ್ರಮಣ್ಯ, ತಾಲೂಕು ಒಕ್ಕಲಿಗರ ಸಂಘದ ಖಜಾಂಚಿ ಕೃಷ್ಣಕುಮಾರ್ ಸಾಗರ್, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮ :** ಸಹಕಾರಿ ಸಂಘಗಳ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕ ರವಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ನಿರ್ದೇಶಕ ಎಸ್.ಕೆ. ಮಂಜುನಾಥ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಜಿ.ಆರ್. ಹರೀಶ್‌ಕುಮಾರ್, ಎಸ್.ಆರ್. ನಾರಾಯಣರಾವ್, ಮಾನವ ಸಂಪನ್ಮೂಲ ತರಬೇತಿ ಕೇಂದ್ರದ ಪ್ರಾಂಶುಪಾಲ ದಿನೇಶ್ ಪೂಜಾರಿ, ಸ್ಥಳ: ಧರ್ಮಸ್ಥಳ ಟ್ರಸ್ಟ್, ಮಾನವ ಸಂಪನ್ಮೂಲ ತರಬೇತಿ ಕೇಂದ್ರ, ಕಳಸ್ತವಾಡಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ರಂಗಭೂಮಿ ವೃತ್ತಿ ಕಲಾವಿಧೆಯರ ಸಂಘ :** ವಾರ್ಷಿಕೋತ್ಸವದ ಅಂಗವಾಗಿ ಮಧ್ಯಾಹ್ನ 12 ರಿಂದ ರಂಗ ಗೀತೆಗಳು, ಮಧ್ಯಾಹ್ನ 3 ರಿಂದ ಮುದುಕನ ಮದುವೆ ನಾಟಕ ಪ್ರದರ್ಶನ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಉದ್ಘಾಟನೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ರಂಗಚಾರ್ಲು ಪುರಭವನ.

■ **ಟೆರೇಷಿಯನ್ ಕಾಲೇಜು :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಪ್ರಾಧ್ಯಾಪಕ ಹೆಚ್.ಆರ್. ರವಿಕುಮಾರ್, ಅಧ್ಯಕ್ಷತೆ : ಟೆರೇಷಿಯನ್ ಕಾಲೇಜು ನಿರ್ದೇಶಕ ಡಾ. ಸಿಸ್ಟರ್ ಜ್ವೆನಿಟ, ಸ್ಥಳ: ಗೋಲ್ಡನ್ ಜ್ಯೂಬಿಲಿ ಸಭಾಂಗಣ, ಮಧ್ಯಾಹ್ನ 2ಕ್ಕೆ.

■ **ಅಮೃತ ವರ್ಷಿಣಿ ಗಾನವೃಂದ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಚಿತ್ರಗೀತೆಗಳ ರಸಮಂಜರಿ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ :** ವೀಣಾನಾದ ಸಂಭ್ರಮ, ಪ್ರಥಮ ವರ್ಷದ ಶಾರದಾ ವೀಣಾ ಮಹೋತ್ಸವ, ಮುಖ್ಯ ಅತಿಥಿಗಳು : ವೀಣಾ ವಾದಕ ವಿದ್ವಾನ್ ಆರ್.ಕೆ. ಪದ್ಮನಾಭ, ಮೃದಂಗ ವಾದಕ ವಿದ್ವಾನ್ ಪಿ.ಎಸ್. ಶ್ರೀಧರ್, ಅಧ್ಯಕ್ಷತೆ : ವಿದ್ವಾನ್ ವಿ.ಎಸ್. ರಮೇಶ್, ಉಪಸ್ಥಿತರು : ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ವಿದ್ವಾನ್ ಮೈಸೂರು ಕುಮಾರ್, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6 ರಿಂದ.

■ **ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ :** ಸಂಘದ ಉದ್ಘಾಟನೆ ಮತ್ತು ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್, ಉದ್ಘಾಟನೆ : ಮಹಾರಾಣಿ ಕಲಾ ಕಾಲೇಜು ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಸ್ಥಳ: ಎಫ್.ಕೆ. ಇರಾನಿ ಹಾಲ್, ರೋಟರಿ ಸ್ಕೂಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಚಾಲೆಂಜರ್ಸ್ ಅಕಾಡೆಮಿ ಮೈಸೂರು, ಪರಿವರ್ತನ ಪ್ರಥಮ ದರ್ಜೆ ಕಾಲೇಜು :** ಚಾಲೆಂಜರ್ಸ್ ಕಪ್–2022, ಅಂತರ ರಾಜ್ಯ ಪದವಿ ಕಾಲೇಜು ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್, ಉದ್ಘಾಟನೆ : ಕರಾಮುವಿವಿ ವಿಶ್ರಾಂತ ಉಪಕುಲಪತಿ ಡಾ. ಎನ್.ಎಸ್. ರಾಮೇಗೌಡ, ಅಧ್ಯಕ್ಷತೆ : ಪರಿವರ್ತನ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಪುಟ್ಟೇಗೌಡ, ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಪಾಲಿಕೆ ಸದಸ್ಯ ಎಸ್.ಬಿ.ಎಂ. ಮಂಜು, ವಿಶೇಷ ಆಹ್ವಾನಿತರು : ಕ್ರೀಡಾ ನಿರ್ದೇಶಕ ಡಾ. ಯು.ವಿ. ಶಂಕರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಪಿ. ಕೃಷ್ಣಯ್ಯ, ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ. ಬಾಲು, ಹೆಚ್.ಆರ್. ಭಗವಾನ್, ಎಂ.ವಿ. ಶ್ರೀನಿವಾಸ್, ವಿಜಯಕುಮರ್, ಸ್ಥಳ: ಮೈಸೂರು ವಿವಿ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ, ಯುವರಾಜ ಕಾಲೇಜು ಎದುರು, ಸಂಜೆ 6.30ಕ್ಕೆ.

■ **ಗಾನಭಾರತೀ :** ವಿದ್ವಾನ್ ಡಾ. ಶೇಷಪ್ರಸಾದ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್ –ಪಿಟೀಲು, ವಿದ್ವಾನ್ ಫಣೀಂದ್ರ, ಭಾಸ್ಕರ–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಮುದಾಯ ಧಾರವಾಡ ತಂಡದಿಂದ ತಲೆದಂಡ ನಾಟಕ ಪ್ರದರ್ಶನ, ರಚನೆ : ಡಾ. ಗಿರೀಶ್ ಕಾರ್ನಾಡ್, ನಿರ್ದೇಶನ : ಮಹಾದೇವ ಹಡಪದ, ಸಂಗೀತ : ಆರ್. ಸತ್ಯನಾರಾಯಣ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಅಧ್ಯಕ್ಷತೆ : ಹಿರಿಯ ರಂಗಕರ್ಮಿ ಡಾ. ಹೆಚ್.ಎ. ಪಾರ್ಶ್ವನಾಥ್, ಮುಖ್ಯ ಅತಿಥಿಗಳು : ಹಿರಿಯ ರಂಗಕರ್ಮಿ ಎಸ್.ಆರ್. ರಮೇಶ್, ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಗ, ರಂಗಾಸಕ್ತ ಲ. ಜಗನ್ನಾಥ್, ಉಪಸ್ಥಿತರು : ಸಮುದಾಯ, ಧಾರವಾಡ ಅಧ್ಯಕ್ಷ ಬಿ.ಐ. ಈಳಿಗೇರ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಮಜೆ 6.30ಕ್ಕೆ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಸಂಜೆ 7 ರಿಂದ ರಾಘವೇಂದ್ರನಗರದ ಎನ್. ಚಂದನ ಅವರಿಂದ ಪಿಟೀಲು ವಾದನ, ರಾತ್ರಿ 8 ರಿಂದ ಮೈಸೂರಿನ ಮೋಹನ್ ದೇವಯ್ಯ ಅವರಿಂದ ಆರ್ಕೆಸ್ಟ್ರಾ, ಸ್ಥಳ: ಪಿ.ಕಾಳಿಂಗರಾವ್ ಮಂಟಪ.

ಮೈಸೂರು ಮಿತ್ರ


ಬಿ.ಪಿ ಕನ್ನೇಗೌಡ
ತಾಲ್ಲೂಕು ಪಂಚಾಯಿತಿ ಸದಸ್ಯರು
ಬೋಗಾದಿ
ಇ.ಪಿ.ರವಿ
ಮಾಜಿ ಗ್ರಾ.ಪಂ.ಉಪಾಧ್ಯಕ್ಷರು, ಹಾಲಿ ಸದಸ್ಯರು
ಎನ್.ಚಂದ್ರಶೇಖರ್
ನಿರ್ದೇಶಕರು ಜನಹಿತ ವಿವಿದ್ದೋದ್ದೇಶ ಸಹಕಾರ ಸಂಘ
ಕೇಬಲ್ ರವಿ
ಎಂ.ಡಿ. ದುರ್ಗಾಗ್ರೂಪ್ಸ್
ಮಹದೇವು
ಯುವ ಮುಖಂಡರು
ಎಸ್.ಬಿ. ಶಿವು
ಅಧ್ಯಕ್ಷರು
ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರು
ಶಂಬೇಗೌಡ
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಮಹೇಶ್
ಸಿವಿಲ್ ಕಂಟ್ರಾಕ್ಟರ್
ಟಿ. ರವಿ
ಮಹದೇಶ್ವರ ಚಿತ್ರಮಂದಿರ ಮಾಲೀಕರು
ಲೋಕೇಶ್ ಎಂ
ನಿರ್ದೇಶಕರು
ವಿಶ್ವಶಾಂತಿ ಗೃ. ನಿ. ಸಹಕಾರ ಸಂಘ (ನಿ)ಮೈಸೂರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಶಾಸಕರು ಹಾಗೂ ಮಾಜಿ ಸಚಿವರಾದ
ಜಿ.ಟಿ.ದೇವೇಗೌಡರವರಿಗೆ
73ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು
ಅಂಗಡಿ ನಾಗರಾಜು
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಹೊನ್ನೇಗೌಡ
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಬಿ. ಸ್ವಾಮಿ
ಯುವ ಮುಖಂಡರು
ಗುರುರಾಜ್ ವಿ
ಯುವ ಮುಖಂಡರು
ಶ್ರೀನಿವಾಸ್
ಸಿವಿಲ್ ಕಂಟ್ರಾಕ್ಟರ್
ಸೊಸೈಟಿ ಆನಂದ್
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಶುಭ ಕೋರುವವರು : ದುರ್ಗಾ ಗ್ರೂಪ್ಸ್



ಎಲ್ರಿಗೂ ಗೌಡ್ರ ಕಂಡರೆ ಬಲು ಪ್ರೀತಿ...

ಕುಗ್ರಾಮದ ರೈತಾಪಿ ವರ್ಗದಿಂದ ಬಂದ ಜಿ.ಟಿ.ದೇವೇಗೌಡರು ರಾಜ್ಯದ ಶಕ್ತಿಸೌಧ ಪ್ರವೇಶಿಸಲು ಜನರ ಮಮಕಾರವೇ ಹೂವಿನ ಹಾಸಾಯ್ತು...: ಹುಟ್ಟುಹಬ್ಬದ ಸವಿ ಸವಿ ನೆನಪು

ಹಳೇ ಮೈಸೂರು ಭಾಗದ ಅತ್ಯಂತ ಪ್ರಭಾವಿ ನಾಯಕ ಜಿ.ಟಿ.ದೇವೇಗೌಡರು. ಮೂಲತಃ ರೈತನಾಗಿ, ಹಿರಿಯ ಸಹಕಾರಿಯಾಗಿ, ಅನನ್ಯ ಸಮಾಜ ಸೇವಕನಾಗಿ, ಜನಪ್ರಿಯ ರಾಜಕಾರಣಿಯಾಗಿರುವ ಜಿ.ಟಿ.ದೇವೇಗೌಡರ ಹೆಸರು ಹೇಳಿದರೆ ಜನಪರ ಚಿಂತನೆ ಪ್ರತಿಯೊಬ್ಬರ ತಲೆಯಲ್ಲಿ ಹೊಳೆಯುತ್ತದೆ. ಯಾರೇ ಬಂದು ಗೌಡ್ರೇ... ಎಂದರೆ ಅವರ ಕಷ್ಟ-ಸುಖದಲ್ಲಿ ಮನೆ ಮಗನಂತೆ ಭಾಗಿಯಾಗುವ ಜನಸೇವಕ.



ಇತ್ತೀಚೆಗೆ ತಮ್ಮ ಮನೆಗೆ ಬಂದ ಮಾಜಿ ಪ್ರಧಾನಿ, ದೇಶದ ಮುತ್ಸದ್ದಿ ರಾಜಕೀಯ ಧುರೀಣ ಹೆಚ್.ಡಿ.ದೇವೇಗೌಡರನ್ನು ಸಕುಟುಂಬ ಸಮೇತ ಹೃದಯಸ್ಪರ್ಶಿ ಸನ್ಮಾನಿಸಿ, ಗೌರವ ಸಲ್ಲಿಸಿದರು ಜಿ.ಟಿ.ದೇವೇಗೌಡರು.

ಮೈಸೂರು ತಾಲೂಕು, ಇಲವಾಲ ಹೋಬಳಿ, ಗುಂಗ್ರಾಲ್ ಛತ್ರ ತಮ್ಮೇಗೌಡ ಹಾಗೂ ಲಕ್ಷ್ಮಮ್ಮ ದಂಪತಿ ಪುತ್ರನಾದ ಜಿ.ಟಿ.ದೇವೇಗೌಡರು, ಹೆಚ್ಚು ಓದಲು ಸಾಧ್ಯವಾಗದಿದ್ದರೂ ಜೀವನಾನುಭವದಿಂದಲೇ ಅಪಾರ ಜ್ಞಾನ ಸಂಪಾದಿಸಿದ್ದಾರೆ. ಪತ್ನಿ ಶ್ರೀಮತಿ ಕೆ.ಲಲಿತಾ, ಪುತ್ರ ಜಿ.ಡಿ. ಹರೀಶ್‌ಗೌಡ ಅವರೂ ಜಿಟಿಡಿ ಅವರೊಂದಿಗೆ ಸಹಕಾರಿ ಕ್ಷೇತ್ರದ ಮೂಲಕ ಜನಸೇವೆಗಿಳಿದು, ಈಗ ರಾಜಕೀಯವಾಗಿ ತೊಡಗಿಸಿಕೊಂಡಿದ್ದಾರೆ. 1965ರಿಂದಲೂ ಕೃಷಿ ಕ್ಷೇತ್ರದಲ್ಲಿ ಸಕ್ರಿಯವಾಗಿ, ಆಧುನಿಕ ಬೇಸಾಯ ಪದ್ಧತಿಯೊಂದಿಗೆ ತೆಂಗು, ಬಾಳೆ, ಮಾವಿನ ತೋಟ ಅಭಿವೃದ್ಧಿಪಡಿಸಿದ್ದಾರೆ. ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ಇಂದಿಗೂ ಜಿಟಿಡಿ ಕೃಷಿಯಿಂದ ವಿಮುಖರಾಗಿಲ್ಲ. ಸದಾ ಶ್ವೇತವಸ್ತ್ರಧಾರಿಯಾಗಿ ಎಲ್ಲರನ್ನೂ ಆತ್ಮೀಯವಾಗಿ ಹಳ್ಳಿ ಸೊಗಡಿನಲ್ಲೇ ಮಾತನಾಡಿಸಿ, ಎಲ್ಲರ ಮನಗೆದ್ದಿರುವ ಜಿ.ಟಿ. ದೇವೇಗೌಡರಿಗೆ ಇಂದು ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ಅವರ ಸಾಧನೆ ಹೆಜ್ಜೆ ಗುರುತುಗಳನ್ನು ಮೆಲುಕು ಹಾಕಿದರೆ ಇಂದಿನ ಯುವ ಪೀಳಿಗೆಯಲ್ಲಿ ಜೀವನೋತ್ಸಾಹ ಜಾಗೃತವಾಗಬಹುದು.

ಸಹಕಾರಿ ಸಾಧಕ

1970ರಲ್ಲಿ ಗುಂಗ್ರಾಲ್ ಛತ್ರ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ಸೇವೆ ಆರಂಭಿಸಿದ ಜಿಟಿಡಿ, ಜೊತೆ ಜೊತೆಗೆ ಸಾಮಾಜಿಕ ಸೇವೆಯಲ್ಲೂ ನಿರತರಾದರು. 1972ರಲ್ಲಿ ಸಹಕಾರಿ ಸಂಘದ ಕಾರ್ಯದರ್ಶಿಯಾಗಿ ಶೇ.4ರಷ್ಟು ಬಡ್ಡಿದರದಲ್ಲಿ ಸಾಲ ನೀಡಿದ್ದಲ್ಲದೆ ಪ್ರತಿ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಹೆಗ್ಗಳಿಕೆ ಜಿಟಿಡಿ ಅವರದ್ದಾಗಿದೆ. 1982ರಲ್ಲಿ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿ ಸಂಘದ ಅಧ್ಯಕ್ಷರಾಗಿ ಸಹಕಾರ ಸೇವೆ ಮುಂದುವರೆಸಿದರು. 1983ರ ಜುಲೈನಲ್ಲಿ ನಡೆದ ಮೈಸೂರು ತಾಲೂಕು ಎಪಿಎಂಸಿ ಚುನಾವಣೆಯಲ್ಲಿ ಗೆಲುವು ಸಾಧಿಸಿ, ಉಪಾಧ್ಯಕ್ಷರೂ ಆದರು. ಆ ವೇಳೆ ಸಹಕಾರ ಮತ್ತು ಮಾರುಕಟ್ಟೆ ಸಚಿವರಾಗಿದ್ದ ಆರ್.ಎಲ್.ಜಾಲಪ್ಪನವರ ನೇತೃತ್ವದಲ್ಲಿ ರೈತಪರವಾದ ತರಕಾರಿ ನಿಯಂತ್ರಣ ಕಾಯ್ದೆ ಜಾರಿಗೆ ನಡೆದ ಹೋರಾಟದಲ್ಲಿ ಭಾಗಿಯಾಗಿ, ಅದರಲ್ಲಿ ಯಶಸ್ವಿಯಾದರು. 1986ರಲ್ಲಿ ಟಿಎಪಿಸಿಎಂಎಸ್ ನಿರ್ದೇಶಕರಾಗಿ ಆಯ್ಕೆಯಾಗಿ ನಂತರ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಬಳಿಕ ಮೈಸೂರು ವಿಭಾಗದಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಆಯ್ಕೆಯಾದ ಜಿಟಿಡಿ, 1995-98ರ ಅವಧಿಯಲ್ಲಿ ಮೂರೂವರೆ ವರ್ಷ ಕರ್ನಾಟಕ ರಾಜ್ಯ ಸಹಕಾರ ಮಂಡಳದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಅಲ್ಲದೆ ರಾಷ್ಟ್ರೀಯ ಸಹಕಾರಿ ಯೂನಿಯನ್ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ನಂತರ 2001 ರಿಂದ 2015ರವರೆಗೆ ಮತ್ತೆ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷರಾಗಿ, ಸಹಕಾರಿ ಕ್ಷೇತ್ರದ ಚುನಾಯಿತ ಪ್ರತಿನಿಧಿಗಳ ಸಂಘದ ಸದಸ್ಯರಾಗಿ ಶ್ರಮಿಸಿದ ಜಿಟಿಡಿ, 2006-2013ರವರೆಗೆ ಕರ್ನಾಟಕ ರಾಜ್ಯ ವಿಮಾ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. 2021ರ ಮಾರ್ಚ್ 28ರಂದು ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳದ ನಿರ್ದೇಶಕರಾಗಿ, 2021ರ ಏಪ್ರಿಲ್ 6ರಂದು ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳದ ಅಧ್ಯಕ್ಷರಾಗಿ ಮತ್ತೊಮ್ಮೆ ಅವಿರೋಧವಾಗಿ ಆಯ್ಕೆಯಾದರು.

ದೇಶ ಸುತ್ತಿದ ರೈತಪುತ್ರ...

'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಹಾಗೂ 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಈ ನಾಣ್ಣುಡಿಗಳಂತೆ ಜಿಟಿಡಿ ಸಾಧನೆ ಹಾದಿಯಲ್ಲಿ ಸಾಕಷ್ಟು ವಿದೇಶಗಳಲ್ಲಿ ಅಧ್ಯಯನ ಪ್ರವಾಸ ನಡೆಸಿದ್ದಾರೆ. 1996ರ ಡಿಸೆಂಬರ್‌ನಲ್ಲಿ ನೆದರ್‌ಲ್ಯಾಂಡ್, ಸ್ವೀಡನ್, ಬ್ರೆಜಿಲ್, ಫ್ರಾನ್ಸ್ ಮತ್ತು ಇಂಗ್ಲೆಂಡ್ ರಾಷ್ಟ್ರಗಳಿಗೆ ಪ್ರವಾಸ ಬೆಳೆಸಿ ಸಹಕಾರಿ ಕ್ಷೇತ್ರದ ಬಗ್ಗೆ ತಿಳಿದುಕೊಂಡಿದ್ದಾರೆ. 2002ರಲ್ಲಿ ಪೋಲೆಂಡ್ ದೇಶದ ವಿವಿಧ ಸ್ಥಳಗಳಲ್ಲಿ ಸಹಕಾರಿ ಅಧ್ಯಯನ ಪ್ರವಾಸ, 2004ರಲ್ಲಿ ಶ್ರೀಲಂಕಾ, ಥಾಯ್ಲೆಂಡ್, ಮಲೇಷಿಯಾ ಮತ್ತು ಸಿಂಗಾಪೂರ್‌ಗೆ ತೆರಳಿದ್ದರು. 2008ರಲ್ಲಿ ದಕ್ಷಿಣ ಅಮೆರಿಕಾದ ವಿವಿಧ ರಾಷ್ಟ್ರಗಳಿಗೆ ಭೇಟಿ ನೀಡಿ, ಅಲ್ಲಿ ಕಡಿಮೆ ವೆಚ್ಚದಲ್ಲಿ ಮನೆ ನಿರ್ಮಿಸುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರು. 2012ರಲ್ಲಿ ಬ್ಯಾಂಕಾಕ್, ಸಿಡ್ನಿ ಸೇರಿದಂತೆ ವಿವಿಧೆಡೆ ಸಹಕಾರಿ ಕ್ಷೇತ್ರದ ಬಗ್ಗೆ ಅಧ್ಯಯನ ಪ್ರವಾಸ ನಡೆಸಿದ್ದಾರೆ.

ಪ್ರಶಸ್ತಿ ಪ್ರಶಂಸೆ

ಕೃಷಿ ಹಾಗೂ ಸಹಕಾರ ಕ್ಷೇತ್ರದ ಸುದೀರ್ಘ, ಸಾರ್ಥಕ ಪಯಣದಲ್ಲಿ ಜಿಟಿಡಿ ಅವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ರಾಜ್ಯ ಸರ್ಕಾರದ ಕೃಷಿ ನಿರ್ದೇಶಕರಿಂದ ಜಿಲ್ಲೆಯ ಪ್ರಗತಿ ಪರ ರೈತನೆಂಬ ಮನ್ನಣೆ. ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕರು ಹಾಗೂ ಸಹಕಾರಿ ಇಲಾಖೆ ವತಿಯಿಂದ(1972-73ನೇ ಸಾಲಿನಲ್ಲಿ) ನೀಡಲಾದ ಮೈಸೂರು ವಿಭಾಗದ ಅತ್ಯುತ್ತಮ ಕಾರ್ಯದರ್ಶಿ ಪ್ರಶಸ್ತಿ ಮತ್ತು ನಗದು ಪುರಸ್ಕಾರ. ಗುಂಗ್ರಾಲ್ ಛತ್ರದಲ್ಲಿ ಯೂತ್ ಕ್ಲಬ್ ಸ್ಥಾಪಿಸಿ ಆ ಮೂಲಕ ಸಾವಯುವ ಕೃಷಿ ಪದ್ಧತಿ ಅಳವಡಿಕೆ, ಕಾಂಪೋಸ್ಟ್ ಗೊಬ್ಬರ ತಯಾರಿ ಹಾಗೂ ಬಳಕೆ ಬಗ್ಗೆ ಜಾಗೃತಿ ಮೂಡಿಸಿದ್ದಕ್ಕಾಗಿ ಜಿಲ್ಲಾಧಿಕಾರಿಗಳಿಂದ ಪ್ರಶಸ್ತಿ. ಸಹಕಾರಿ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದ ಸಾಧನೆಗಾಗಿ ಬೆಂಗಳೂರಿನ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್‌ನ 'ಭಾರತ ರತ್ನ ವಿಕಾಸ ಪ್ರಶಸ್ತಿ'. ದೆಹಲಿಯಲ್ಲಿ ನಡೆದ 2012ರ ಅಂತರರಾಷ್ಟ್ರೀಯ ಸಹಕಾರಿ ವರ್ಷಾಚರಣೆಯಲ್ಲಿ ಜೀವನ ಶ್ರೇಷ್ಠ ಪ್ರಶಸ್ತಿ ಹಾಗೂ ಸಹಕಾರ ಕ್ಷೇತ್ರದ ರಾಯಭಾರಿ ಬಿರುದು ಪ್ರದಾನ. ಕ್ರಿಬ್ಕೋ ಸಂಸ್ಥೆಯ 2013-14ನೇ ಸಾಲಿನ ಸಾಮಾನ್ಯ ಸಭೆಯಲ್ಲಿ 'ಸಹಕಾರಿ ಶಿರೋಮಣಿ' ಪ್ರಶಸ್ತಿ ಪ್ರದಾನ. ಹೀಗೆ ಜಿಟಿಡಿ ಅವರು ಸಾಕಷ್ಟು ಪ್ರಶಸ್ತಿ, ಮನ್ನಣೆಗೆ ಭಾಜನರಾಗಿದ್ದಾರೆ.

ಜಿಟಿಡಿಯವರದ್ದು ರೋಚಕ ರಾಜಕೀಯ ಪಯಣ

1971ರ ಲೋಕಸಭಾ ಚುನಾವಣೆಯಲ್ಲಿ ಅಂದಿನ ಸಂಸ್ಥಾ ಕಾಂಗ್ರೆಸ್ ಪಕ್ಷದ ಮುಖೇನ ರಾಜಕೀಯದಲ್ಲಿ ಸಕ್ರಿಯರಾದ ಜಿಟಿಡಿ, ದಿವಂಗತ ಡಾ.ಹೆಚ್.ಎಲ್. ತಿಮ್ಮೇಗೌಡರ ನೇತೃತ್ವದಲ್ಲಿ ಮುನ್ನಡೆದರು. 1983ರಿಂದ 2006ರವರೆಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಇಂದಿನ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಗೆಲುವಿಗಾಗಿ ಶ್ರಮಿಸಿದವರಲ್ಲಿ ಜಿಟಿಡಿ ಪ್ರಮುಖರು. ರಾಜ್ಯದಲ್ಲಿ ಪ್ರಥಮವಾಗಿ 1987ರಲ್ಲಿ ನಡೆದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಇಲವಾಲ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವಿನ ಹೆಜ್ಜೆ ಇಟ್ಟರು. ಜಿಲ್ಲಾ ಪರಿಷತ್ ಆಡಳಿತದ ಪಕ್ಷದ ನಾಯಕ, ಹಣಕಾಸು ಮತ್ತು ಕಾಮಗಾರಿ ಸಮಿತಿಯಲ್ಲಿ ಸದಸ್ಯನಾಗಿ ಕಾರ್ಯನಿರ್ವಹಣೆ. 1987ರಿಂದ 90ರವರೆಗೆ ಜಿಲ್ಲಾ ಯುವ ಜನತಾದಳದ ಉಪಾಧ್ಯಕ್ಷರಾಗಿ, 1990-2000ದವರೆಗೆ ಜಿಲ್ಲಾ ಗ್ರಾಮಾಂತರ ಜನತಾದಳದ ಮಹಾಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. 1995ರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಇಲವಾಲ ಕ್ಷೇತ್ರದಿಂದ ಪುನರಾಯ್ಕೆಯಾದರಲ್ಲದೆ, 1995ರಿಂದ 97ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 1995ರಿಂದ 97ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ನೂರು ದಿನದಲ್ಲಿ 235 ಗ್ರಾಮ ಪಂಚಾಯಿತಿಗಳಲ್ಲಿ ವಾಸ್ತವ್ಯ ಹೂಡಿ, ಆಡಳಿತವನ್ನು ಗ್ರಾಮದ ಬೀದಿಗಿಳಿಸಿ, ಗ್ರಾಮೀಣ ಜನರಗೆ ಸವಲತ್ತು ಕಲ್ಪಿಸಿದ ಹೆಗ್ಗಳಿಕೆ ಇವರದು. ಅಲ್ಲದೆ, ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ದೇವೇಗೌಡರಿಂದ ಮೈಸೂರಲ್ಲಿ ಪ್ರಪ್ರಥಮ ಬಾರಿಗೆ ಜನತಾ ದರ್ಶನ ಏರ್ಪಡಿಸಿ, ಸಾವಿರಾರು ಜನರ ಅಹವಾಲು ಸ್ವೀಕರಿಸಲು ಅವಕಾಶ ಮಾಡಿಕೊಟ್ಟು ದಾಖಲೆ ಬರೆದರು. 1996ರ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಕ್ಷೇತ್ರದಿಂದ ಮೈಸೂರು ಮಹಾರಾಜರಾದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ವಿರುದ್ಧ ಸ್ಪರ್ಧಿಸಿ, ಕೇವಲ 10 ಸಾವಿರ ಮತಗಳಿಂದ ಪರಾಭವಗೊಂಡರು. 1997ರಲ್ಲಿ ಕರ್ನಾಟಕ ಪ್ರದೇಶ ಜನತಾದಳದ ರಾಜ್ಯ ಪ್ರಧಾನ ಕಾರ್ಯ ದರ್ಶಿಯಾಗಿ ಕಾರ್ಯ ನಿರ್ವಹಿಸಿದರು.



1998ರ ಲೋಕ ಸಭಾ ಚುನಾವಣೆಯಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಿ, ಸೋಲುಂಡರು. ಅದೇ ವರ್ಷ ಹುಣಸೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿ, ಗೆಲುವು ದಾಖಲಿಸುವ ಮೂಲಕ ಪ್ರಪ್ರಥಮ ಬಾರಿಗೆ ವಿಧಾನಸೌಧ ಪ್ರವೇಶಿಸಿದರು.

1999ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತರು. 2000-2007ರವರೆಗೆ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಅಧ್ಯಕ್ಷರಾಗಿದ್ದ ಅವರು ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದರು. ಇದೇ ವೇಳೆ ರಾಜ್ಯದಲ್ಲೇ ಮೊದಲಿಗೆ ಮೈಸೂರು ಜಿಪಂ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಜೆಡಿಎಸ್ ಅಧಿಕಾರ ಹಿಡಿದಿದ್ದು ಗಮನಾರ್ಹ. 2004ರ ಚುನಾವಣೆಯಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರ ದಿಂದ ಸ್ಪರ್ಧಿಸಿ 2ನೇ ಬಾರಿ ಶಾಸಕರಾಗಿ ಆಯ್ಕೆಯಾದರು. ಎನಿಎಂಕ್ ಸಂಸ್ಥೆಯ ಅಕ್ರಮಗಳ ಪರಿಶೀಲನೆಗೆ ವಿಧಾನಸಭಾಧ್ಯಕ್ಷರು ರಚಿಸಿದ್ದ ಸದನ ಸಮಿತಿ ಅಧ್ಯಕ್ಷರಾಗಿ, ವಿಧಾನಸಭೆಯ ಅಂದಾಜು ಸಮಿತಿಗಳ ಅಧ್ಯಕ್ಷರಾಗಿ ಗೌಡರು ಕಾರ್ಯ ನಿರ್ವಹಿಸಿದರು. 2007ರ ಜನವರಿ 25ರಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಇವರನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ನಿಯೋಜಿಸಲಾಯಿತು.

ಸಹಕಾರ ಇಲಾಖೆ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು. 2008ರಲ್ಲಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿದ್ದ ಅವರು, 2013ರ ಫೆಬ್ರವರಿಯಲ್ಲಿ ಆ ಸ್ಥಾನಕ್ಕೆ ರಾಜೀನಾಮೆ ನೀಡಿದರು. 2013ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ದಿಂದ ಸ್ಪರ್ಧಿಸಿ 7,103 ಮತಗಳ ಅಂತರದಿಂದ ಗೆಲುವು ಸಾಧಿಸಿದರು. 2018ರ ಚುನಾವಣೆಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 36,042 ಮತಗಳ ಭಾರೀ ಅಂತರದಲ್ಲಿ ಮಣಿಸಿ, ದೇಶದ ಗಮನ ಸೆಳೆದರು. 2018ರ ಜೂ.6ರಂದು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಜಿಟಿಡಿ, ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿ ದರು. 8ನೇ ತರಗತಿ ಪಾಸ್ ಆಗದವರು ಉನ್ನತ ಶಿಕ್ಷಣ ಇಲಾಖೆಯನ್ನು ನಿರ್ವಹಿಸಲು ಸಾಧ್ಯವೇ? ಎಂದು ಮೂಗು ಮುರಿದವರಿಗೆ ಸಮರ್ಪಕ ಆಡಳಿತದ ಮೂಲಕವೇ ತಕ್ಕ ಪ್ರತ್ಯುತ್ತರ ನೀಡಿದರು.

ಜಿ.ಟಿ.ದೇವೇಗೌಡರು ಸಹಕಾರ ಸಚಿವರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ, ಓರ್ವ ಶಾಸಕರಾಗಿ ಮಹತ್ವದ ಕಾರ್ಯಕ್ರಮಗಳ ಮೂಲಕ ಅಭಿವೃದ್ಧಿಯ ಮೈಲಿಗಲ್ಲು ಸ್ಥಾಪಿಸಿದ್ದಾರೆ. ನಗರಪಾಲಿಕೆ, ಜಿಪಂ, ತಾಪಂ, ಗ್ರಾಪಂ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ, ಪದಾಧಿಕಾರಿಗಳ ಆಯ್ಕೆ, ಸಹಕಾರ ಸಂಘಗಳ ಚುನಾವಣೆ, ಹೀಗೆ ಎಲ್ಲಾ ಹಂತದಲ್ಲೂ ಜಿಟಿಡಿ ನಿರ್ಣಾಯಕರೆನಿಸಿದ್ದಾರೆ. ಹಲವು ಮಹನೀಯರ ಜೊತೆ ಜೊತೆಯಲ್ಲಿ ಬೆಳೆದು ಬಂದಿರುವ ಜಿಟಿಡಿ, ರಾಜಕೀಯ ಜೀವನದಲ್ಲಿ ಸಾಕಷ್ಟು ಏಳು-ಬೀಳುಗಳನ್ನು ಕಂಡಿದ್ದಾರೆ. ಆದರೆ ಸಾಧಿಸುವ ಛಲದಿಂದಲೇ ಪ್ರತಿ ಹೆಜ್ಜೆಯನ್ನಿಡುವ ಮೂಲಕ ಯುವ ಪೀಳಿಗೆಗೆ ಪ್ರೇರಣೆಯಾಗಿದ್ದಾರೆ.

ಐದನೇ ಪುಟದಿಂದ

ಚುನಾವಣಾ ಕಣ ಪ್ರವೇಶ

ಕೆಲಸವನ್ನು ಆ ಕ್ಷೇತ್ರದಲ್ಲಿ ಮಾಡುತ್ತಾನೆ. ಅವರು ನೀಡುವ ವರದಿಯನ್ನು ಮುಂದಿಟ್ಟುಕೊಂಡು ನಿಮಗೆ ನಾವು ಸಲಹೆ ಸೂಚನೆ ಕೊಡುತ್ತೇವೆ. ನಿಮ್ಮ ಸಂಪುಟದಲ್ಲಿರುವ ಪ್ರತಿಯೊಬ್ಬ ಸಚಿವನು ತನ್ನ ಸುತ್ತಲಿನ ನಾಲ್ಕು ಕ್ಷೇತ್ರಗಳ ಹೊಣೆಗಾರಿಕೆಯು ಅವರೇ ವಹಿಸಿಕೊಳ್ಳಬೇಕು. ಪಕ್ಷದ ಅಭ್ಯರ್ಥಿಗಳಿಗೆ ಈ ಸಚಿವರು ಚುನಾವಣೆಗೆ ಎಲ್ಲಾ ರೀತಿಯ ಸಹಕಾರ ನೀಡಬೇಕು. ಇದನ್ನು ಈಗಲೇ ಅವರಿಗೆ ಮನದಟ್ಟು ಮಾಡಿ. ಹಾಲಿ ಶಾಸಕರಿಗೆ ಪಕ್ಷದಿಂದ ಯಾವುದೇ ರೀತಿಯ ಸೌಕರ್ಯಗಳಿರುವುದಿಲ್ಲ. ಅವರಿಗೆ ಟಿಕೆಟ್ ನೀಡಿದರೆ ಅವರು ಸ್ವಂತ ಚುನಾವಣಾ ವೆಚ್ಚ ಭರಿಸಿ, ಮತ್ತೆ ಆಯ್ಕೆಗೊಳ್ಳಬೇಕು.

ಅಗರಬತ್ತಿ ಉದ್ಯಮಕ್ಕೆ ಸರ್ಕಾರದ ಸಹಕಾರ

ತರಲಾಗುತ್ತಿದೆ. ಆರ್ಥಿಕತೆ ಕೆಳ ಸ್ತರದಿಂದ ಬಲಗೊಳ್ಳುತ್ತದೆ ಎಂದು ನಂಬಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು. ಅಗರಬತ್ತಿ ಉದ್ಯಮ ಪರಿಮಳದ ಜೊತೆಗೆ ಸಂತೋಷ ಹರಡುವ ಕೆಲಸ ಮಾಡುತ್ತಿದೆ. 250 ವರ್ಷಗಳಿಂದ ಪರಿಮಳದ ಜೊತೆಗೆ ಸಂತೋಷ ಹರಡುತ್ತಿದ್ದೀರಿ. ಯಾವುದೇ ಉದ್ಯಮ ಈ ರೀತಿ ಇಲ್ಲ. ಸಣ್ಣ ಸಣ್ಣ ಸಂತೋಷಗಳು ದೊಡ್ಡ ಸಂಭ್ರಮ ನೀಡುತ್ತಿವೆ. ಅಗರಬತ್ತಿ ಉದ್ಯಮಕ್ಕೆ ದೊಡ್ಡ ಇತಿಹಾಸವಿದೆ. ಇದೊಂದು ದೊಡ್ಡ ವಿಜ್ಞಾನ. ಪಶ್ಚಿಮಾತ್ಯ ದೇಶಗಳಲ್ಲಿ ಕೃತಕ ಪರಿಮಳ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದರು. ಭಾರತ ಜೀವ ವೈವಿಧ್ಯವಿರುವ ದೇಶ. ನಮ್ಮಲ್ಲಿ ಪ್ರಾಕೃತಿಕವಾಗಿಯೇ ಪರಿಮಳ ಬೀರುವ ಉತ್ಪನ್ನಗಳು ದೊರೆಯುತ್ತಿವೆ. ನನ್ನ ಕ್ಷೇತ್ರದಲ್ಲಿಯೂ ಒಬ್ಬರು ಸುಮಾರು 2000 ಎಕರೆ ಪ್ರದೇಶದಲ್ಲಿ ಪುಷ್ಪ ಕೃಷಿ ಮಾಡುತ್ತಿದ್ದಾರೆ ಎಂದರು. ನಮ್ಮ ಸರ್ಕಾರ ಮಹಿಳೆಯರಿಗೆ ಸ್ತ್ರೀ ಸಾಮರ್ಥ್ಯ ಯೋಜನೆ ಜಾರಿಗೆ ತಂದಿದೆ ಅವರಿಗೆ 1.5 ಲಕ್ಷ ಸರ್ಕಾರ ನೀಡುತ್ತದೆ. 5 ಲಕ್ಷದವರೆಗೆ ಅನುದಾನ ನೀಡಲಾಗುತ್ತಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಲ್ಪಿಸಲು ಅನುಕೂಲವಾಗುತ್ತದೆ. ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಉಳಿತಾಯ ಮಾಡುತ್ತಾರೆ. ಅವರು ಉತ್ಪಾದನೆಯಲ್ಲಿ ತೊಡಗಿದರೆ ಕುಟುಂಬದಲ್ಲಿ ಹೆಚ್ಚಿನ ಉಳಿತಾಯವಾಗಲಿದೆ. ಮಹಿಳೆಯರು ಮನೆಯಲ್ಲಿಯೇ ಕುಳಿತು ಕೆಲಸ ಮಾಡಬಹುದು. ಮಹಾತ್ಮಾ ಗಾಂಧಿ ಹೆಚ್ಚಿನ ಜನರಿಂದ ಉತ್ಪಾದನೆಯಾಗಬೇಕು ಎಂದು ಎಂದರು.

ಮೀಸಲಾತಿ ಹೆಚ್ಚಳಕ್ಕೆ ಒಕ್ಕಲಿಗರ ಪಟ್ಟು

ಶೇ.12ಕ್ಕೆ ಹೆಚ್ಚಿಸಬೇಕು. ಇಲ್ಲದಿದ್ದರೆ, ಒಕ್ಕಲಿಗ ಸಮುದಾಯದವರಿಗೆ ಅನ್ಯಾಯವಾಗುತ್ತಿದೆ. ರಾಜ್ಯ ಸರ್ಕಾರ ನಿಗಧಿಪಡಿ ಸಿರುವ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ 3ಎ ಅಡಿಯಲ್ಲಿ ಒಕ್ಕಲಿಗರ ಸಮುದಾಯ, ಒಕ್ಕಲಿಗರ ಉಪ ಪಂಗಡಗಳು ಹಾಗೂ ಇತರೆ ಜಾತಿಗಳು ಸೇರಿವೆ. ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜಾತಿ ಪಂಗಡದವರ ಮೀಸಲಾತಿ ಯನ್ನು ಅವರ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳ ಮಾಡಿರುವುದನ್ನು ನಾವು ಸ್ವಾಗತಿಸುತ್ತೇವೆ. ಅದೇ ರೀತಿ ನಮ್ಮ ಸಮು ದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಬೇಕೆಂದು ಒಕ್ಕೊರಲಿನಿಂದ ಆಗ್ರಹಿಸುತ್ತೇವೆ. ಬೇರೆ ಸಮುದಾಯದವರಿಗೆ ಮೀಸಲಾತಿ ಹೆಚ್ಚಿಸಲು ನಮ್ಮ ಅಭ್ಯಂತರವಿಲ್ಲ. ಆದರೆ, ಆದೇ ರೀತಿ ರಾಜ್ಯದಲ್ಲಿ ಅಧಿಕ ಜನಸಂಖ್ಯೆಯನ್ನು ಹೊಂದಿರುವ ನಮ್ಮ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಅವರು ತಿಳಿಸಿದರು.

ಒಂದು ಗಂಟೆ ವಿಶೇಷ ಕಾರ್ಯಕ್ರಮ

ಮೊದಲಿದ್ದಂತೆ ಅರ್ಹತಾ ದಿನಾಂಕವಾದ ಜ.1ರವರೆಗೂ ಕಾಯಬೇಕಿಲ್ಲ. ಈಗ 17 ವರ್ಷ ಮೇಲ್ಪಟ್ಟವರು ಮುಂಗಡ ವಾಗಿ ನೋಂದಣಿಗೆ ಅರ್ಜಿ ಸಲ್ಲಿಸಬಹುದು. ಪ್ರಸಕ್ತ 2023ರ ವಾರ್ಷಿಕ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ 1ನೇ ಏಪ್ರಿಲ್, 1ನೇ ಜುಲೈ ಮತ್ತು 1ನೇ ಅಕ್ಟೋಬರ್ 2022ಕ್ಕೆ 18 ವರ್ಷ ತುಂಬುವ ಯುವ ಮತದಾರರು ನೋಂದಣಿಗೆ ಅರ್ಜಿ ಸಲ್ಲಿಸಬಹುದು. ಮತದಾರರ ಪಟ್ಟಿಯ ಸಾಫ್ಟ್‌ವೇರ್ 18 ವರ್ಷ ತುಂಬದವರ ಅರ್ಜಿಗಳನ್ನು ಬಾಕಿ ಉಳಿಸಿ ಕೊಂಡು ಅರ್ಹ ವಯಸ್ಸು ತುಂಬುತ್ತಿದ್ದಂತೆ ಸ್ವಯಂಚಾಲಿತ ವಾಗಿ ಪರಿಷ್ಕರಣೆಗೆ ಒಳಪಡಿಸಲಿದೆ ಎಂದು ಹೇಳಿದರು.

2023ರಲ್ಲಿ ವಿಧಾನಸಭಾ ಚುನಾವಣೆ, 2024ರಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಬಹಳ ಜನ ಮತದಾರರ ಪಟ್ಟಿಯಲ್ಲಿನ ತಮ್ಮ ನ್ಯೂನತೆ ಸರಿಪಡಿಸಿಕೊಳ್ಳಲು ಚುನಾವಣೆ ಸಮೀಪದವರೆಗೂ ಕಾಲದೂಡುವುದೇ ಹೆಚ್ಚು. ಇದಕ್ಕೆ ಬದಲು ಮುಂಗಡವಾಗಿ ಸರಿಪಡಿಸಿಕೊಳ್ಳಲು ವೋಟರ್ಸ್ ಹೆಲ್ಪ್‌ಲೈನ್ ಮೊಬೈಲ್ ಆಪ್ (ವಿಹೆಚ್‌ಎ) ಬಳಸಿಕೊಳ್ಳಬಹುದು. ಇದು ಸುಲಭ ಸಾಧನ ಎಂದರು. ಮೊಬೈಲ್‌ನಲ್ಲಿ ವೋಟರ್ಸ್ ಹೆಲ್ಪ್‌ಲೈನ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ವಿಳಾಸ ದೃಢೀಕರಣ ಹಾಗೂ ವಯಸ್ಸಿನ ದೃಢೀಕರಣದ ದಾಖಲೆಗಳನ್ನು ಅಪ್‌ಲೋಡ್ ಮಾಡಿ ನೋಂದಣಿಗೆ ಅರ್ಜಿ ಸಲ್ಲಿಸಬಹುದು. ಆಧಾರ್ ಕಾರ್ಡ್ ಅಪ್‌ಲೋಡ್‌ಗೂ ಅವಕಾಶವಿದ್ದು, ಆದರೆ ಇದು ಕಡ್ಡಾಯವಲ್ಲ. ಅದಾಗ್ಯೂ ಇದನ್ನು ಅಪ್‌ಲೋಡ್ ಮಾಡಿದರೆ ಪಟ್ಟಿಯಲ್ಲಿ ನಮ್ಮ ದೃಢೀಕರಣಕ್ಕೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಇಂದು ನೀವು ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದರೆ ಬಿಎಲ್‌ಓಗಳು (ಮತಗಟ್ಟೆ ಅಧಿಕಾರಿಗಳು) ಪರಿಶೀಲನೆಗಾಗಿ ನಿಮ್ಮ ಮನೆಗಳಿಗೆ ಭೇಟಿ ನೀಡಲಿದ್ದಾರೆ. ನಿಮ್ಮ ವಿಳಾಸ ವ್ಯಾಪ್ತಿಯ ಬಿಎಲ್‌ಓ ಯಾರೆಂದು ತಿಳಿದುಕೊಳ್ಳಬೇಕು. ನಿಮ್ಮ ಮತಗಟ್ಟೆ ಯಾವುದೆಂದು ಈಗಲೇ ತಿಳಿದುಕೊಳ್ಳ ಬೇಕು. ಇದರಿಂದ ಮತದಾನ ದಿನದಂದು ಗೊಂದಲ ಉಂಟಾಗುವುದು ತಪ್ಪಲಿದೆ ಎಂದು ಸಲಹೆ ನೀಡಿದರು.

ಪ್ರತಿದಿನ ಕನಿಷ್ಠ 2 ಗಂಟೆ ಓದಿ: ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದು ನನಗೆ ಅತ್ಯಂತ ಸಂತಸ ವಿಚಾರ. ಕಾರಣ ಯಾವುದೇ ಉನ್ನತ ಬದಲಾವಣೆಗೆ ವಿದ್ಯಾರ್ಥಿಗಳ ಪಾತ್ರ ಮುಖ್ಯ. ಪರೀಕ್ಷೆ ನಾಳೆ ಇರುವಾಗ ಓದುವುದು ಮುಖ್ಯವಲ್ಲ ಪ್ರತಿದಿನ ಕನಿಷ್ಠ 2 ಗಂಟೆ ಓದುವುದು ಪರಿಣಾಮಕಾರಿ. ನಾವು ಕಾಲೇಜಿನಲ್ಲಿ ಓದುವಾಗ ಕೇವಲ ಬೇಸಿಕ್ ಮೊಬೈಲ್‌ಗಳಿದ್ದವು. ಆದರೆ ಈಗ ಸಾಮಾಜಿಕ ಜಾಲತಾಣಗಳು ಹೆಚ್ಚಾಗಿದ್ದು, ಮೊಬೈಲ್‌ಗಳಲ್ಲೇ ಲಭ್ಯವಿರುವ ಅವುಗಳಲ್ಲಿಯೇ ಹೆಚ್ಚು ವಿದ್ಯಾರ್ಥಿ ಸಮೂಹ ತಲ್ಲೀನವಾಗುವುದು ಜಾಸ್ತಿಯಾಗಿದೆ. ಆದರೆ ಸಾಮಾಜಿಕ ಜಾಲತಾಣಗಳನ್ನು ಸದ್ಬಳಕೆಗೆ ಸೀಮಿತಗೊಳಿಸಿ ಓದಿನಲ್ಲಿ ತೊಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇಸ್ಲಾಮಿಕ್ ಸಂಘಟನೆ

ಐಆರ್‌ಸಿ ಹೇಳಿಕೆಯಲ್ಲಿ ಏನಿದೆ?: ಕೇಸರಿ ಭಯೋತ್ಪಾದಕರು ಇರುವ ಪ್ರದೇಶ ಮಂಗಳೂರಿನ ಕದ್ರಿಯ ಹಿಂದೂ ದೇವಸ್ಥಾನದಲ್ಲಿ ಬಾಂಬ್ ಸ್ಫೋಟಿಸಲು ನಮ್ಮ ಮುಜಾಹಿದ್ ಸಹೋದರ ಮೊಹಮದ್ ಶಾರಿಕ್ ಪ್ರಯತ್ನಿಸಿದ್ದಾನೆ. ಈ ಆಪರೇಷನ್ ನಿಗದಿತ ಗುರಿಯನ್ನು ತಲುಪದಿದ್ದರೂ ಇದನ್ನು ನಾವು ಯಶಸ್ಸು ಎಂದೇ ಪರಿಗಣಿಸುತ್ತೇವೆ. ಏಕೆಂದರೆ, ಇಲ್ಲಿ ಆತ ಅನುಸರಿಸಿರುವ ಕಾರ್ಯತಂತ್ರಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಗುಪ್ತಚರ ಇಲಾಖೆಗಳನ್ನು ಕಣ್ತಪ್ಪಿಸಿ ದಾಳಿ ನಡೆಸುವ ಪ್ರಯತ್ನ ಮಾಡಿರುವುದು ನಮ್ಮ ಯಶಸ್ಸನ್ನು ಹೇಳುತ್ತವೆ. ಆದರೆ, ದಾರಿಯ ಮಧ್ಯೆಯೇ ಬಾಂಬ್ ಸ್ಫೋಟವಾಗಿದ್ದರಿಂದ ನಮ್ಮ ಗುರಿಯನ್ನು ನಾವು ತಲುಪದೇ ನಮ್ಮ ಸಹೋದರ ಶಾರಿಕ್ ಬಂಧನ ಆಗಿದ್ದಾನೆ ಎಂದು ಐಆರ್‌ಸಿ ಹೇಳಿದೆ.

ಸಿದ್ದರಾಮಯ್ಯ ತರಾಟೆ

ಕೋಟ್ಯಾಂತರ ರೂಪಾಯಿಗಳನ್ನು ಈ ಸಂಸ್ಥೆಗೆ ನೀಡಿದವರು ಯಾರು, ಇಷ್ಟು ದೊಡ್ಡ ಮೊತ್ತವನ್ನು ವಿನಿಯೋಗಿ ಸುತ್ತಿದ್ದವರ ಉದ್ದೇಶವಾದರೂ ಏನು, ಅಕ್ರಮವಾಗಿ ವಿನಿ ಯೋಗಿಸಿದ ಹಣದ ಕುರಿತು ಇನ್ನೂ ದಾಳಿಗಳನ್ನು ನಡೆಸದೆ ಐಟಿ, ಇಡಿಗಳು ಯಾಕೆ ಇನ್ನೂ ಕಣ್ಣು ಮುಚ್ಚಿಕೊಂಡಿವೆ. ಮತದಾರರ ಪಟ್ಟಿಯ ಅಕ್ರಮಕ್ಕೆ ಸರ್ಕಾರ, ಚುನಾವಣಾ ಆಯೋಗ ಮತ್ತು ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿ, ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿಗಳು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಇಷ್ಟು ಬೃಹತ್ ಮಟ್ಟದ ಹಗರಣ ನಡೆದಿದ್ದರೂ ಚುನಾವಣಾ ಆಯೋಗದ ಅಧಿಕಾರಿಗಳ ಮೇಲೆ ಯಾಕೆ ಇನ್ನೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಎನ್‌ಆರ್ ಕ್ಷೇತ್ರದ ಸರ್ಕಾರಿ ಭೂಮಿ ಸಂರಕ್ಷಣೆಗೆ ಸಂದೇಶ್ ಸ್ವಾಮಿ ಆಗ್ರಹ

ಅನಧಿಕೃತ ಬಡಾವಣೆ ನಿರ್ಮಾಣಕ್ಕೆ ಬ್ರೇಕ್ ಹಾಕಲು ಒತ್ತಾಯ

ಮೈಸೂರು, ನ.24- ಮೈಸೂರಿನ ನರಸಿಂಹ ರಾಜ (ಎನ್‌ಆರ್) ಕ್ಷೇತ್ರದಲ್ಲಿರುವ ಸರ್ಕಾರಿ ಭೂಮಿ ಸಂರಕ್ಷಣೆ ಜೊತೆಗೆ ಅನಧಿಕೃತ ಬಡಾವಣೆ ನಿರ್ಮಾಣ ತಡೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ. ನಗರದ ಕೃಷ್ಣರಾಜ ಹಾಗೂ ಚಾಮರಾಜ ಕ್ಷೇತ್ರಗಳಲ್ಲಿ ಒಂದೇ ಒಂದು ಅನಧಿಕೃತ ಬಡಾವಣೆಗಳ ನಿರ್ಮಾಣವಾಗುತ್ತಿಲ್ಲ. ಆದರೆ ನರಸಿಂಹ ರಾಜ ಕ್ಷೇತ್ರದಲ್ಲಿ ಅತೀ ಹೆಚ್ಚು ಕಂದಾಯ ಬಡಾವಣೆ ಗಳನ್ನು ಅನಧಿಕೃತವಾಗಿ ನಿರ್ಮಿಸಲಾಗುತ್ತಿದೆ. ರಾಜೀವ್ ನಗರ, ಶಕ್ತಿನಗರ, ಆರ್‌ಎಂಎಸ್ ಲೇಔಟ್, ಶ್ರೀನಗರ ಹಾಗೂ ಅಕ್ಕಪಕ್ಕದಲ್ಲಿ ಇಂತಹ ಸಾಕಷ್ಟು ಬಡಾವಣೆಗಳಿವೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಜಾಗ ಸೇರಿದಂತೆ ಸುಮಾರು 250 ಎಕರೆ ಸರ್ಕಾರಿ ಭೂಮಿಯಲ್ಲಿ ಅನಧಿಕೃತ ಬಡಾವಣೆಗಳು ತಲೆ ಎತ್ತುತ್ತಿವೆ ಎಂದು ತಿಳಿಸಿದ್ದಾರೆ.



ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಂದು ಪುಟ್ಟ ಮನೆ ನಿರ್ಮಾಣಕ್ಕೆ ಪ್ಲಾನ್ ಪಡೆಯುವುದು ಕಷ್ಟಸಾಧ್ಯ. ಅಂತಹದರಲ್ಲಿ ನರಸಿಂಹರಾಜ ಕ್ಷೇತ್ರದಲ್ಲಿ ಕಳೆದ ಐದಾರು ವರ್ಷಗಳಲ್ಲಿ ಸಾಕಷ್ಟು ಅನಧಿಕೃತ ಬಡಾವಣೆಗಳನ್ನು ನಿರ್ಮಿಸುತ್ತಿದ್ದರೂ ಯಾವುದೇ ಕ್ರಮ ವಹಿಸಿಲ್ಲ. ಇದೆಲ್ಲವೂ ಅಧಿಕಾರಿಗಳ ಸಹಕಾರದಿಂದಲೇ ನಡೆಯುತ್ತಿದೆ. ಮುಡಾ ಹಾಗೂ ಪಾಲಿಕೆ ಅನುಮತಿ ಪಡೆಯದೆ ನಿರ್ಮಾಣವಾಗಿರುವ ಬಡಾವಣೆಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಈ ಬಗ್ಗೆ ಮುಡಾ, ಪಾಲಿಕೆ ಹಾಗೂ ಸೆಸ್ಕ್ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ. ನಾನು ಮುಡಾ ಸದಸ್ಯನಾಗಿದ್ದಾಗ ನರಸಿಂಹರಾಜ ಕ್ಷೇತ್ರದಲ್ಲಿರುವ ಸುಮಾರು 200 ಎಕರೆ ಸರ್ಕಾರಿ ಭೂಮಿ ಹಾಗೂ ಖಾಲಿ ನಿವೇಶನಗಳನ್ನು ಸಂರಕ್ಷಿಸಲು ಕ್ರಮ ವಹಿಸುವಂತೆ ಒತ್ತಾಯಿಸಿದ್ದೆ. ಕ್ಷೇತ್ರದ ಶೇ.60ರಷ್ಟು ಜನರಿಗೆ ಸೂರಿಲ್ಲ. ಅಂತಹವರಿಗೆ ಸಂರಕ್ಷಿಸುವ ಜಾಗದಲ್ಲಿ ಮನೆ ಕಟ್ಟಿಸಿಕೊಡುವಂತೆ ಒತ್ತಾಯಿಸಿದ್ದೆ. ಆದರೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಎಚ್ಚೆತ್ತುಕೊಂಡು ಪರಿಣಾಮಕಾರಿ ಕ್ರಮ ಕೈಗೊಳ್ಳದಿದ್ದರೆ ದೇವನೂರು ಕೆರೆ ಮಾತ್ರವಲ್ಲ ಕ್ಷೇತ್ರದಲ್ಲಿರುವ ಸರ್ಕಾರಿ ಜಾಗವನ್ನೆಲ್ಲಾ ಕಳೆದುಕೊಳ್ಳಬೇಕಾಗುತ್ತದೆ ಎಂದು ಸಂದೇಶ್ ಸ್ವಾಮಿ ಎಚ್ಚರಿಸಿದ್ದಾರೆ.

ಫುಡ್ ಪ್ರಾಡಕ್ಟ್ ಖರೀದಿಸಿ 10.73 ಲಕ್ಷ ವಂಚನೆ

ಮೈಸೂರು, ನ.24-ಫುಡ್ ಪ್ರಾಡಕ್ಟ್‌ಗಳನ್ನು ಖರೀದಿಸಿ 10.73 ಲಕ್ಷ ರೂ. ಪಾವತಿಸದೇ ವಂಚಿಸಲಾಗಿದೆ ಎಂದು ಮೈಸೂರಿನ ಮಾರ್ಕೆಟಿಂಗ್ ಸಂಸ್ಥೆಯೊಂದರ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಬಂಡಿಪಾಳ್ಯದಲ್ಲಿರುವ ಎಪಿಎಂಸಿ ಯಾರ್ಡ್‌ನಲ್ಲಿ ಮಾರ್ಜಿನ್ ಪ್ರೈವೇಟ್ ಲಿ. ಎಂಬ ಹೆಸರಿನಲ್ಲಿ ಕಂಪನಿ ನಡೆಸುತ್ತಿರುವ ಬಿ.ಎಸ್.ಮಲ್ಲಿಕಾರ್ಜುನ ಅವರು ರೀಫೆಂಡ್ ಆಯಿಲ್ ಸೇರಿದಂತೆ ಫುಡ್ ಪ್ರಾಡಕ್ಟ್‌ಗಳನ್ನು ಮಾರಾಟ ಮಾಡುತ್ತಿದ್ದು, ಅವರನ್ನು ಪರಿಚಯಿಸಿಕೊಂಡ ಶ್ಯಾದನಹಳ್ಳಿಯ ಗಜಾನನ ಮಾರ್ಕೆಟಿಂಗ್ ಕಂಪನಿಯ ಮಾಲೀಕರಾದ ಶ್ರೀಮತಿ ಎಂ.ಸೌಲ್ಯ ಎಂಬುವರು ಸೆ.15 ರಿಂದ 28ರವರೆಗೆ 10,73,607 ರೂ. ಮೌಲ್ಯದ ಫುಡ್ ಪ್ರಾಡಕ್ಟ್‌ಗಳನ್ನು ಖರೀದಿಸಿ ಸೆ.30ರಂದು ಚೆಕ್ ನೀಡಿದ್ದಾರೆ. ಆದರೆ ಸದರಿ ಚೆಕ್ ಬೌನ್ಸ್ ಆಗಿದ್ದು, ತಮಗೆ ಹಣ ನೀಡದೇ ವಂಚಿಸಿದ್ದಾರೆ ಎಂದು ಮಲ್ಲಿಕಾರ್ಜುನ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿವಿ ಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಧರ್ಮ, ದೇವರನ್ನು ರಾಜಕಾರಣಕ್ಕೆ ದುರ್ಬಳಕೆ ಮಾಡಿಕೊಂಡ

ಬಿಜೆಪಿ ವ್ಯಾಪಾರಿಗಳ ಪಕ್ಷ: ಹೆಚ್‌ಸಿಎಂ ಟೀಕೆ

ತಿ.ನರಸೀಪುರ, ನ.24– ಧರ್ಮ ಮತ್ತು ದೇವರನ್ನು ರಾಜಕಾರಣಕ್ಕೆ ದುರ್ಬಳಕೆ ಮಾಡಿಕೊಂಡ ಬಿಜೆಪಿ ವ್ಯಾಪಾರಿಗಳ ಪಕ್ಷವಾಗಿದ್ದು, ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ರೈತರ ಆದಾಯ ದ್ವಿಗುಣಗೊಳ್ಳುವ ಬದಲು ಆ ಪಕ್ಷದ ನಾಯಕರ ವ್ಯಾಪಾರಿ ಮನೋಭಾವನೆಯಿಂದಾಗಿ ಕೃಷಿ ಚಟುವಟಿಕೆಗಳ ಖರ್ಚು ದುಪ್ಪಟ್ಟಾಗಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಟೀಕಿಸಿದರು.

ತಾಲೂಕಿನ ಟಿ.ದೊಡ್ಡಪುರ ಗ್ರಾಮದಲ್ಲಿ ನಡೆದ ಪಂಚಾಯಿತಿ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಹಿರಿಯ ಮುಖಂಡ ದೊಡ್ಡನಹುಂಡಿ ನಂಜುಂಡಸ್ವಾಮಿ ಸೇರಿದಂತೆ ಹಲವು ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ನರೇಂದ್ರ ಮೋದಿ ಪ್ರಧಾನಿಯಾಗುತ್ತಿದ್ದಂತೆ ದೇಶದ ರೈತರ ಆದಾಯ ದ್ವಿಗುಣಗೊಳಿಸುತ್ತೇನೆ ಎಂದಿದ್ದರು. 8 ವರ್ಷಗಳಾದರೂ ಆದಾಯ ದ್ವಿಗುಣವಾಗುವುದಿರಲಿ, ಎಕರೆ ಜಮೀನಿನ ಕೃಷಿಗೆ 20 ಸಾವಿರ ಆಗುತ್ತಿದ್ದ ಖರ್ಚು ಈಗ 40ಕ್ಕೆ ಏರಿದೆ ಎಂದು ಆರೋಪಿಸಿದರು.

ಅತಂತ್ರ ವಿಧಾನಸಭೆಗೆ ಹಾತೊರೆಯುವ ಜೆಡಿಎಸ್‌ಗೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ. ಅವಕಾಶ ರಾಜಕಾರಣದ ಮೂಲಕ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ತಡೆಯಲು ಬಿಜೆಪಿ ಜೊತೆ ಆಂತರಿಕ ಒಪ್ಪಂದ ಮಾಡಿ ಕೊಳ್ಳುತ್ತಾರೆ. ಎರಡೂ ಕಡೆ ಅಧಿಕಾರವಿದ್ದರೂ, ಆಡಳಿತರೂಢ ಬಿಜೆಪಿ ಪಕ್ಷ ಯಾವುದೇ ಅಭಿವೃದ್ಧಿ ಮಾಡಿಲ್ಲ. ದೇಶದಲ್ಲಿ ರೈತರು ಮತ್ತು ಬಡವರ ಅಭಿವೃದ್ಧಿಯಾಗಲೂ, ಜನರು ಸಾಮರಸ್ಯದಿಂದ ನೆಮ್ಮದಿ ಜೀವನ ನಡೆಸಲು ಹಾಗೂ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಯಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದರು.

ಜನತೆ ನೀಡಿದ ಅಧಿಕಾರದಿಂದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಚಿವನಾಗಿ ಕ್ಷೇತ್ರದ ಅಭಿವೃದ್ಧಿಗೆ ದುಡಿದಿದ್ದೇನೆ. ರಾಜಕೀಯವಾಗಿ ಕೈ ಹಿಡಿದಿದ್ದ ಮತದಾರರು ದುಡಿಯುವ ಎತ್ತನ್ನು ಬಿಟ್ಟು, ಕೆಲಸವೇ ಗೊತ್ತಿಲ್ಲದ ಎತ್ತನ್ನು ಗೆಲ್ಲಿಸಿದರು. ಗೆದ್ದ ಮೇಲಾದರೂ ಕೆಲಸ ಮಾಡದೆ ಮೇವನ್ನು ಮಾತ್ರ ಖಾಲಿ ಮಾಡುತ್ತಿದೆ. ಆಗಿರುವ ಲೋಪ ದೋಷ ತಿದ್ದಿಕೊಂಡು ಮುನ್ನಡೆಯೋಣ. ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕೆಂದು ಮನವಿ ಮಾಡಿದರು. ಇದೇ ವೇಳೆ ಜೆಡಿಎಸ್ ಹಿರಿಯ ಮುಖಂಡರಾದ ಎಪಿಎಂಸಿ ಮಾಜಿ ಅಧ್ಯಕ್ಷ ದೊಡ್ಡನಹುಂಡಿ ನಂಜುಂಡಸ್ವಾಮಿ, ಯುವ ಮುಖಂಡ ಚರಣ್ ಸೇರಿದಂತೆ ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆಗೊಂಡರು. ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ಧಿ, ಗ್ರಾಪಂ ಸದಸ್ಯ ಮಾವಿನಹಳ್ಳಿ ಮಾದೇಶ್, ಮಾಜಿ ಸದಸ್ಯ ಕಲಿಯೂರು ಶಿವಣ್ಣ, ಚಂದ್ರಧರ, ದೊಡ್ಡಪುರ ಚಂದ್ರು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಪುರಸಭಾ ಸದಸ್ಯ ಬಾದಾಮಿ ಮಂಜು, ಕೊತ್ತೇಗಾಲ ಬಸವರಾಜು, ಮುಖಂಡರಾದ ಜಾಕೀರ್, ರಮೇಶ್, ಶಿವಕುಮಾರ್, ಜಯ ಬಸವಣ್ಣ, ಮಲ್ಲಯ್ಯ, ಚಿಕ್ಕಮಾದು, ರಾಜೇಶ್, ನಂಜಪ್ಪ, ಅಂಗಡಿ ನಾಗಪ್ಪ, ಚಿಕ್ಕಮಾದು, ಲಕ್ಷ್ಮೀನಾರಾಯಣ, ಎಂ.ಬಿ.ಸಾಗರ್, ಮಂಟೇಲಿಂಗು ಇನ್ನಿತರರಿದ್ದರು.

'ಕೈ' ಹಿಡಿದ ಜೆಡಿಎಸ್ ಮುಖಂಡರು



6 ಬೂತ್ ಸಮಿತಿಗೆ ಚುನಾವಣೆ ಜವಾಬ್ದಾರಿ

ಪಂಚಾಯಿತಿ ಮಟ್ಟದ ಕಾರ್ಯಕರ್ತರ ಸಭೆ ನಂತರ ಪ್ರತಿಯೊಂದು ಹಳ್ಳಿಯಲ್ಲೂ ಜನರನ್ನು ಭೇಟಿಯಾಗಿ ಮತ್ತೊಂದು ಸುತ್ತಿನ ಸಭೆ ನಡೆಸಿ ಬೂತ್ ಸಮಿತಿ ರಚಿಸಿ ಕಾರ್ಯಕರ್ತರಿಗೆ ಚುನಾವಣೆ ಜವಾಬ್ದಾರಿ ನೀಡಲಾಗುವುದು. ರಾಜ್ಯದ ಬಿಜೆಪಿ ಸರ್ಕಾರ, ಕ್ಷೇತ್ರದ ಜೆಡಿಎಸ್ ಶಾಸಕರನ್ನು ನೋಡಿ ಬೇಸತ್ತಿರುವ ಜನರು ಕಾಂಗ್ರೆಸ್ ಪರ ಒಲವು ವ್ಯಕ್ತಪಡಿಸುತ್ತಿದ್ದಾರೆ. ಅವರ ಮನವೊಲಿಸಲು ಪಕ್ಷದ ಮುಖಂಡರು ಕಾರ್ಯ ಪ್ರವೃತ್ತರಾಗಬೇಕು. ಯಾವುದೇ ಲೋಪದೋಷ ಸರಿಪಡಿಸಿಕೊಳ್ಳಲು ಪ್ರತಿಯೊಬ್ಬರೂ ಸಲಹೆಗಳನ್ನು ಮುಕ್ತವಾಗಿ ತಿಳಿಸಬೇಕು.

– ಸುನೀಲ್ ಬೋಸ್,
ಯುವ ಕಾಂಗ್ರೆಸ್ ಮುಖಂಡ.

ರಸ್ತೆ ಡಾಂಬರೀಕರಣ ಕಾಮಗಾರಿಗೆ ಭೂಮಿ ಪೂಜೆ



ಹಿರೀಕ್ಯಾತನಹಳ್ಳಿ, ನ.24– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ–ಮರೂರು ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 1.10 ಕೋಟಿ ವೆಚ್ಚದ 1.65 ಕಿಲೋಮೀಟರ್‌ವರೆಗಿನ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿ ಫೆಬ್ರವರಿ ತಿಂಗಳ ಅಂತ್ಯಕ್ಕೆ ಮುಗಿಯಲಿದೆ. 11 ಲಕ್ಷ ವೆಚ್ಚದ ಗ್ರಾಮದ ದೇವಸ್ಥಾನ ರಸ್ತೆ ಹಾಗೂ 20 ಲಕ್ಷ ರೂ. ವೆಚ್ಚದ ಗ್ರಾಮದ ಹಳೇ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಕರೆದಿದ್ದು, ಕಾಮಗಾರಿ ಪ್ರಾರಂಭವಾಗಲಿದೆ. ಜೊತೆಗೆ ಮಾರಮ್ಮನ ದೇವಾಲಯ ನಿರ್ಮಾಣಕ್ಕೂ ಸಹಾಯ ಮಾಡಲಾಗುವುದು. ಇದೇ ವೇಳೆ ಮಡಿವಾಳ ಸಮಾಜ ವಾಸಿಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿ 20ಕ್ಕೂ ಹೆಚ್ಚು ಕುಟುಂಬಗಳ ಮನೆಗಳಿಗೆ ಹೋಗಲು ರಸ್ತೆ ನಿರ್ಮಿಸಿ ಕೊಡುವ ಭರವಸೆ ನೀಡಿದರು.

ಈ ವೇಳೆ ತಾಪಂ ಇಓ ಮನು, ಲೋಕೋಪಯೋಗಿ ಇಲಾಖೆ ಎಇಇ ಭೋಜರಾಜ್, ಸಹಾಯಕ ಇಂಜಿನಿಯರ್ ಚಂದ್ರಶೇಖರ್, ಗ್ರಾಪಂ ಅಧ್ಯಕ್ಷ ಜವರೇಗೌಡ, ಉಪಾಧ್ಯಕ್ಷೆ ವತ್ಸಲ, ಸದಸ್ಯರಾದ ಸುಜಾತ, ಸತೀಶ್, ರುಕ್ಮಿಣಿ, ಪಿಡಿಓ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ದೇವರಾಜ್, ತಾಪಂ ಮಾಜಿ ಅಧ್ಯಕ್ಷ ಬಿ.ನಾಗರಾಜ್, ಮುಖಂಡರಾದ ಉದಯ್ ಕುಮಾರ್, ಶಿವಪ್ಪ, ಮಹೇಶ್, ಜಗದೀಶ್, ಸುರೇಶ್, ಹರೀಶ್, ಮಹದೇವ್, ವಿಜಯ್, ಪುಟ್ಟರಾಜು, ಸತೀಶ್, ಪಾಪಣ್ಣ, ಪ್ರಸಾದ್, ಮಂಜು, ರಾಘು ಹಲವರಿದ್ದರು.



ಬನ್ನೂರಿನಲ್ಲಿ ರೆಬೆಲ್‌ಸ್ಟಾರ್ ಅಂಬರೀಶ್ ಅವರ 4ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಗುರುವಾರ ಸಂಜೆ ನಡೆಯಿತು. ಈ ವೇಳೆ ಅಂಬರೀಶ್ ಅಭಿಮಾನಿ ಬಳಗದ ಅಧ್ಯಕ್ಷ ವೆಂಕಟೇಶ್, ರೈತ ಸಂಘದ ಹೋಬಳಿ ಅಧ್ಯಕ್ಷ ಹುಚ್ಚೇಗೌಡ, ಕಾರ್ಯದರ್ಶಿ ಮಹೇಶ್, ಪ್ರಕಾಶ್, ಪುರಸಭೆ ಸದಸ್ಯ ಶ್ರೀನಿವಾಸ್, ನಂಜುಂಡ, ಶಿವರಾಮು, ನಾಗರಾಜು, ಜೋಗಪ್ಪ, ದಿನೇಶ್, ಜಯರಾಮು, ಮೋಹನ್ ಸೇರಿದಂತೆ ಹಲವರಿದ್ದರು.

ನಾಳೆ ಹೆಚ್‌ಸಿಎಂಗೆ ಅಭಿನಂದನೆ

ಮಲ್ಕುಂಡಿ, ನ.24– ಕಾಂಗ್ರೆಸ್ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಹೆಚ್ಚು ಅನುದಾನ ನೀಡಿ ಹೆಡಿಯಾಲ ಭಾಗದ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಕಾರಣರಾದ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರನ್ನು ನ.26 ರಂದು ಸನ್ಮಾನಿಸಲಾಗುವುದು ಎಂದು ಡಾ.ಹೆಚ್.ಸಿ. ಮಹದೇವಪ್ಪ ಅಭಿಮಾನಿ ಬಳಗ ತಿಳಿಸಿದೆ. ಅಂದು ಬೆಳಗ್ಗೆ 10 ಗಂಟೆಗೆ ಹುಲ್ಲಹಳ್ಳಿಯಿಂದ ಹೊರಟು ಹುರ ಮಾರ್ಗವಾಗಿ ಶ್ರೀಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಲಾಗುವುದು. ಈ ವೇಳೆ ಹೆಚ್.ಸಿ.ಮಹದೇವಪ್ಪನವರು ಉಪಸ್ಥಿತರಿರುವರು. ನಂತರ ಅಲ್ಲಿಂದ ಹೆಡಿಯಾಲಕ್ಕೆ ಹಿಂತಿರುಗಿದ ಬಳಿಕ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ. ಹೀಗಾಗಿ ಸುತ್ತಮುತ್ತಲ ಗ್ರಾಮಸ್ಥರು ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಭಿಮಾನಿ ಬಳಗ ಪ್ರಕಟಣೆಯಲ್ಲಿ ಕೋರಿದೆ.

ಆದಿವಾಸಿಗಳ ಕೃಷಿ ಭೂಮಿ ಭೂಗಳ್ಳರ ಪಾಲು

ದಲಿತ ಸಂಘರ್ಷ ಸಮಿತಿ ಗಂಭೀರ ಆರೋಪ



ಹುಣಸೂರು, ನ.24– ತಾಲೂಕಿನ ಆದಿವಾಸಿ, ಗಿರಿಜನರಿಗಾಗಿ ಮೀಸಲಿಟ್ಟ ಕೃಷಿ ಭೂಮಿ ಭೂಗಳ್ಳರ ಪಾಲಾಗುತ್ತಿದ್ದು, ಜಿಲ್ಲಾಡಳಿತ ಗಿರಿಜನರ ಭೂಮಿಯನ್ನು ಮರಳಿ ಕೊಡಿಸಬೇಕೆಂದು ದಲಿತ ಸಂಘರ್ಷ ಸಮಿತಿ (ದಸಂಸ) ಸಂಘಟನಾ ಸಂಚಾಲಕ ಕಿರಂಗೂರು ಸ್ವಾಮಿ ಆಗ್ರಹಿಸಿದರು.

ಕಾಡಿನಿಂದ ಹೊರಬಂದ ಆದಿವಾಸಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಪ್ಯಾಕೇಜ್ ಯೋಜನೆಯಡಿ ತಾಲೂಕಿನ ನಾಗಪುರ ಗಿರಿಜನ ಪುನರ್ವಸತಿ ಕೇಂದ್ರದ 6 ಬ್ಲಾಕ್‌ಗಳು, ಶೆಟ್ಟಳ್ಳಿ ಮತ್ತು ಹೆಬ್ಬಾಳ ಗಿರಿಜನ ಪುನರ್ವಸತಿ ಕೇಂದ್ರಗಳಲ್ಲಿ ನೆಲೆಸಲು ಅವಕಾಶ ಕಲ್ಪಿಸಿದೆ. ಜೊತೆಗೆ ಅವರಿಗೆ ಕೃಷಿಗಾಗಿ ಭೂಮಿ ನೀಡಿದೆ. ಆದರೆ ಭೂಮಿ ನೀಡಿ 2–3 ದಶಕಗಳೇ ಕಳೆದರೂ ಕೃಷಿ ಕುರಿತಾದ ಅರಿವು ಮೂಡಿಸುವ ಕಾರ್ಯ ನಡೆದಿಲ್ಲ. ಕೃಷಿ ಪದ್ಧತಿ ತಿಳಿಯದ ಆದಿವಾಸಿಗಳು ಭೂಮಿ ಪಾಳುಬಿಟ್ಟು ಕೊಡಗಿಗೆ ಕೂಲಿಗಾಗಿ ಕುಟುಂಬ ಸಮೇತ ತೆರಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪರಭಾರೆ ಭೂಮಿ ಗುರುತಿಸಿ: ಕೃಷಿ ಬಗ್ಗೆ ಗೊತ್ತಿಲ್ಲದ ಆದಿವಾಸಿಗಳನ್ನು ಕಾಡಿನಿಂದ ಹೊರತಂದು ಮತ್ತೆ ಕೂಲಿಯಾಳುಗಳನ್ನಾಗಿಸಿದೆ. ಇದರಿಂದಾಗಿ ಆದಿವಾಸಿಗಳು ಸಮಾಜದ ಮುಖ್ಯವಾಹಿನಿಗೆ ಬರದಂತಾಗಿದೆ. ಬಹುತೇಕ ಭೂಮಿ ಹೊಂದಿರುವ ಆದಿವಾಸಿಗಳಿಂದ ಭೂಗಳ್ಳರು, ಕೇರಳದ ಬಂಡವಾಳ ಶಾಹಿಗಳು ಶುಂಠಿ ಕೃಷಿಯ ಹಣದಾಸೆ ತೋರಿ ಭೂಮಿ ವಶಕ್ಕೆ ಪಡೆದಿದ್ದಾರೆ. ಜಿಲ್ಲಾಡಳಿತ ಕೂಡಲೇ ಪರಭಾರೆಯಾಗಿರುವ ಭೂಮಿ ಸಮೀಕ್ಷೆ ಕೈಗೊಂಡು ಆದಿವಾಸಿಗಳಿಗೆ ಮರಳಿ ಭೂಮಿ ಒಪ್ಪಿಸಬೇಕು. ಗಿರಿಜನರು ಮತ್ತೆ ಕೃಷಿ ಕೈಗೊಳ್ಳುವಂತೆ ಅರಣ್ಯ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆ ಮತ್ತು ಜಿಲ್ಲಾಡಳಿತ ಸಂಘಟಿತ ಪ್ರಯತ್ನ ನಡೆಸಿ ಕೃಷಿಗೆ ಅಗತ್ಯ ಅರಿವು ಮತ್ತು ಮೂಲ ಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ಮಹೇಶ್ ಪಾಲ, ಹರೀಶ್, ಮಹೇಶ್ ಹಾಜರಿದ್ದರು.

ಕಂಪಲಾಪುರದಲ್ಲಿ ಕನಕ ಜಯಂತಿ



ಕಂಪಲಾಪುರ, ನ.24– ಕನಕದಾಸರ ಕೀರ್ತನೆಗಳು ಜನರ ಮನದಲ್ಲಿ ಅಚ್ಚಳಿಯದೆ ಉಳಿದಿವೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಟಿ.ಡಿ.ಗಣೇಶ್ ತಿಳಿಸಿದರು.

ಗ್ರಾಮದ ವಿನಾಯಕ ಸರ್ಕಲ್‌ನಲ್ಲಿ ಆಯೋಜಿಸಿದ್ದ ಕನಕ ಜಯಂತಿ ಉದ್ಘಾಟಿಸಿ ಮಾತನಾಡಿ, ಕನಕದಾಸರು ಯುದ್ಧದಲ್ಲಿ ಸೋತಾಗ ಗುರುಕುಲಕ್ಕೆ ಸೇರಿ ನಾಡಿನ ಒಳಿತಿಗಾಗಿ 78 ಹಳ್ಳಿಗಳಿಗೆ ಮಾಂಡಲೀಕರಾದರು. ಯಾವುದೇ ಜಾತಿಭೇದವಿಲ್ಲದೇ ಸರ್ವ ಜನಾಂಗದ ನಾಯಕರಾಗಿದ್ದು, ಉಡುಪಿ ಶ್ರೀಕೃಷ್ಣನ ಪರಮ ಭಕ್ತರಾಗಿದ್ದರು ಎಂದರು.

ತಾಲೂಕು ಜೆಡಿಎಸ್ ಉಪಾಧ್ಯಕ್ಷ ಕೆ.ಕುಮಾರ್ ಮಾತನಾಡಿದರು. ಶಿಕ್ಷಕ ಶಿವರಾಜ್ ಕನಕದಾಸರ ಜೀವನ ಚರಿತ್ರೆಯನ್ನು ಸವಿವರವಾಗಿ ತಿಳಿಸಿಕೊಟ್ಟರು.

ವೇದಿಕೆಯಲ್ಲಿ ಹಿರಿಯ ಮುಖಂಡ ಕೆ.ಎಂ.ರಾಮಪ್ಪ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಯ.ಸ್ವಾಮಿ ಗೌಡ, ಮಹದೇವಣ್ಣ, ಗ್ರಾಪಂ ಅಧ್ಯಕ್ಷೆ ಮಮತ, ಉಪಾಧ್ಯಕ್ಷ ರಾಮಲಿಂಗಂ, ಪ್ರಕಾಶ್‌ಗೌಡ, ಸಹಕಾರ ಸಂಘದ ಅಧ್ಯಕ್ಷ ಕೆ.ಎನ್. ಜಯಣ್ಣ, ಡೇರಿ ಅಧ್ಯಕ್ಷ ಕೃಷ್ಣೇಗೌಡ, ಶ್ರೀಪತಿ, ಶೀಲಾ, ಸುಮ, ಕೆ.ಎಂ.ಲಕ್ಷ್ಮಣ್, ಮಾಜಿ ಅಧ್ಯಕ್ಷ ಗಿರೀಶ್, ತಮ್ಮಯ್ಯ, ಅನಿಲ್, ನಾರಾಯಣ್, ನಾಗರಾಜ್, ಮಹೇಶ್, ಶಿವು, ಆನಂದ್, ಪಾಪಣ್ಣ ಮತ್ತಿತರರಿದ್ದರು.

ಯುವತಿ ನಾಪತ್ತೆ



ತಿ.ನರಸೀಪುರ, ನ.24– ಯುವತಿಯೊಬ್ಬಳು ನಾಪತ್ತೆಯಾಗಿರುವ ಬಗ್ಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರವಿಕುಮಾರ್ ಎಂಬುವರ ಮಗಳು ಹರ್ಷಿತ (22) ನಾಪತ್ತೆಯಾದ ಯುವತಿ. ನ.21ರ ಸಂಜೆ 6 ಗಂಟೆಗೆ ಮನೆ ಬಿಟ್ಟು ಹೋದವಳು ವಾಪಸ್ ಬಂದಿಲ್ಲ ಎಂದು ಯುವತಿ ತಂದೆ ರವಿಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ 0822–7261227 ಕರೆ ಮಾಡುವಂತೆ ಟಿ.ನರಸೀಪುರ ಟೌನ್ ಪೊಲೀಸರು ಕೋರಿದ್ದಾರೆ.

ಮಾಡ್ರಹಳ್ಳಿಯಲ್ಲಿ ಸಹಕಾರ ಸಪ್ತಾಹ ಆಚರಣೆ



ತಿ.ನರಸೀಪುರ, ನ.24– ತಾಲೂಕಿನ ಮಾಡ್ರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ ನೀರು ಬಳಕೆದಾರರ ಸಹಕಾರ ಸಂಘದಿಂದ ಸಹಕಾರ ಸಪ್ತಾಹ ಆಚರಿಸಲಾಯಿತು.

ಪ್ರಾರ್ಥನೆ ಬಳಿಕ ಸಹಕಾರಿ ಪಿತಾಮಹ ಗದಗ ಜಿಲ್ಲೆ ಶ್ರೀಸಿದ್ದನಗೌಡ ಸನ್ನಾರಾಮನಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಹಕಾರ ಸಪ್ತಾಹ ಉದ್ಘಾಟಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಸ್.ಮಹದೇವಪ್ಪ, ಉಪಾಧ್ಯಕ್ಷ ಆರ್.ನಾರಾಯಣ, ಕಾರ್ಯ ನಿರ್ವಾಹಕ ಎಂ.ಲಿಂಗಣ್ಣ, ನಿರ್ದೇಶಕರಾದ ಎಸ್.ಬಸವಯ್ಯ, ಎಂ.ಎಸ್.ಶಿವಮೂರ್ತಿ, ಷಡಕ್ಷರಿ, ಶಂಕರಗುರು, ಎನ್. ಸಂತೋಷ್ ಕುಮಾರ್, ಜಿ.ಮರಿಸ್ವಾಮಿ, ವಾದಕರ ಸಹಕಾರ ಸಂಘದ ಕಾರ್ಯದರ್ಶಿ ಎಂ.ಬಿ.ನಂಜುಂಡಸ್ವಾಮಿ, ನಿರ್ದೇಶಕರಾದ ಜಯಮ್ಮ, ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.20ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ಕಾಂತಾರ (ಕ): ಮ.1.05ಕ್ಕೆ.
ಸ್ಕ್ರೀನ್ 2	ಸ್ಟ್ರೇಂಜ್ ವರ್ಲ್ಡ್ (3ಡಿ)(ಇಂ): ಬೆ.11ಕ್ಕೆ, ಸಂ.4.30ಕ್ಕೆ, ರೇಮೊ (ಕ): ಮ.1.20ಕ್ಕೆ, ಕಾಂತಾರ (ಕ): ರಾ.7ಕ್ಕೆ, ಸದ್ದು ವಿಚಾರಣೆ ನಡೆಯುತ್ತಿದೆ (ಕ): ರಾ.9.55ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.11.10ಕ್ಕೆ, ಏಜೆಂಟ್ ಕನ್ನೈರಾಮ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.05ಕ್ಕೆ, ದೃಶ್ಯಂ–2 (ಹಿಂ): ರಾ.7.10ಕ್ಕೆ, ಮಸೂದ (ತೆ): ರಾ.10ಕ್ಕೆ.
ಸ್ಕ್ರೀನ್ 4	ಭೇದಿಯಾ (3ಡಿ)(ಹಿಂ): ಬೆ.10ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಭೇದಿಯಾ (3ಡಿ)(ಹಿಂ): ಬೆ.9.50ಕ್ಕೆ, ಮ.1ಕ್ಕೆ, ಮ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ತ್ರಿಬಲ್ ರೈಡಿಂಗ್ (ಕ): ಬೆ.9.55ಕ್ಕೆ, ಕಾಂತಾರ (ಕ): ಮ.1.05ಕ್ಕೆ, ರಾ.7.15ಕ್ಕೆ, ಇಟ್ಲು ಮರೆದುಮಿಲ್ಲಿ ಪ್ರಜಾನೀಕಂ (ತೆ): ಸಂ.4.10ಕ್ಕೆ, ದೃಶ್ಯಂ–2 (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ರೇಮೊ (ಕ): ಬೆ.10.30ಕ್ಕೆ, ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.4.50ಕ್ಕೆ, ಕಾಂತಾರ (ಕ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.35ಕ್ಕೆ, ದೃಶ್ಯಂ–2 (ಹಿಂ): ಮ.1.40ಕ್ಕೆ, ತ್ರಿಬಲ್ ರೈಡಿಂಗ್ (ಕ): ಸಂ.4.35ಕ್ಕೆ, ರಾ.10.10ಕ್ಕೆ, ಸ್ಟ್ರೇಂಜ್ ವರ್ಲ್ಡ್ (3ಡಿ)(ಹಿಂ): ರಾ.7.45ಕ್ಕೆ,

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಾರಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೇದಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ರೆಮೋ (ಕ)	4 ಪ್ರದರ್ಶನಗಳು
ಲಿಡೋ	
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ತಂದೆಯಿಂದ ಹಲ್ಲೆಗೊಳಗಾಗಿದ್ದ ಹಿರಿಯ ಪುತ್ರಿ ಸಾವು

ಮೈಸೂರು, ನ.24– ಕುಡಿದ ಮತ್ತಿನಲ್ಲಿದ್ದ ತಂದೆಯಿಂದಲೇ ಸುತ್ತಿಗೆಯಿಂದ ಹಲ್ಲೆಗೆ ಒಳಗಾಗಿ ತೀವ್ರ ಗಾಯಗೊಂಡು ಸಾವು ಬದುಕಿನೊಂದಿಗೆ ಹೋರಾಡು ತ್ತಿದ್ದ ಹಿರಿಯ ಮಗಳು ಕುಸುಮ (14) ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ರಾತ್ರಿ ಮೃತಪಟ್ಟಿದ್ದಾಳೆ.

ನ.17ರಂದು ರಾತ್ರಿ ಮೈಸೂರು ತಾಲೂಕಿನ ಉದ್ದೂರು ಗ್ರಾಮದ ತಮ್ಮ ಮನೆಯಲ್ಲಿ ಕುಡಿದ ಮತ್ತಿನಲ್ಲಿದ್ದ ಡಿ.ಸ್ವಾಮಿ ತನ್ನ ಮಕ್ಕಳಾದ ಕುಸುಮ (14) ಹಾಗೂ ಧನ್ಯಶ್ರೀ (4) ಮೇಲೆ ಸುತ್ತಿಗೆಯಿಂದ ತೀವ್ರವಾಗಿ ಹಲ್ಲೆ ನಡೆಸಿದ್ದ. ಈಗ ಪೊಲೀಸರಿಂದ ಬಂಧಿತನಾಗಿದ್ದಾನೆ. ಘಟನೆ ನಂತರ ತೀವ್ರ ಗಾಯಗೊಂಡಿದ್ದ ಇಬ್ಬರು ಮಕ್ಕಳನ್ನೂ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ತೀವ್ರ ನಿಗಾ ಘಟಕದಲ್ಲಿರಿಸಿ ವೈದ್ಯರು ಕಳೆದ 7 ದಿನಗಳಿಂದ ಚಿಕಿತ್ಸೆ ನೀಡುತ್ತಿದ್ದರು. ಆದರೆ, ಹಿರಿಯ ಮಗಳು ಕುಸುಮ(14) ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾಳೆ. ಕಿರಿಯ ಪುತ್ರಿ ಧನ್ಯಶ್ರೀಯನ್ನು ತೀವ್ರ ನಿಗಾಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಆಕೆ ಇನ್ನೂ ಯಾರನ್ನು ಗುರುತಿಸುವ ಸ್ಥಿತಿಯಲ್ಲಿ ಇಲ್ಲ ಎನ್ನಲಾಗಿದೆ.

ಅಪಾತ್ರರ ಕೈಗೆ ಅಧಿಕಾರ ಕೊಡಬಾರದೆಂದು

ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ: ಸಾ.ರಾ.ಮಹೇಶ್

ಕೆ.ಆರ್.ನಗರ, ನ.24– ಕಳೆದ 14 ವರ್ಷದಿಂದ ತಾಲೂಕಿನ ಜನತೆ ಶಾಂತಿ ಮತ್ತು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದು, ತಾಲೂಕು ಆಡಳಿತವನ್ನು ಅಪಾತ್ರರ ಕೈಗೆ ಕೊಡಬಾರದೆಂಬ ಉದ್ದೇಶದಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ನ್ಯಾಯಾಲಯದ ವಕೀಲರ ಸಭಾಂಗಣದಲ್ಲಿ ವಕೀಲರ ಸಂಘಕ್ಕೆ ಪೀಠೋಪಕರಣ ವಿತರಿಸಿ ಮಾತನಾಡಿದ ಶಾಸಕರು, ನನ್ನ ಅಧಿಕಾರವಧಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳು ಸೇರಿದಂತೆ ಯಾರಿಗೂ ತೊಂದರೆ ನೀಡಿಲ್ಲ. ಒಬ್ಬರ ಮೇಲೊಬ್ಬರನ್ನು ಎತ್ತಿ ಕಟ್ಟುವ ಕೆಲಸ ಮಾಡದೇ ತಾಲೂಕು ಸಾಮರಸ್ಯದಿಂದ ಬದುಕುವಂತೆ ನೋಡಿಕೊಂಡಿದ್ದೇನೆ ಎಂದರು.

ವಕೀಲರ ಸಂಘದ ಮಾಜಿ ಅಧ್ಯಕ್ಷರಾದ ಚಂದ್ರಶೇಖರ್ ಮತ್ತು ಗಾಂಧಿಯವರ ಮನವಿ ಮೇರೆಗೆ ಗುಣಮಟ್ಟದ ಪೀಠೋಪಕರಣಗಳನ್ನು ಸಂಘಕ್ಕೆ ನೀಡುವ ಜೊತೆಗೆ ಮಹಿಳಾ ವಕೀಲರಿಗೆ ಪ್ರತ್ಯೇಕ ಕೊಠಡಿ ಹಾಗೂ ನ್ಯಾಯಾಲಯದ ನೂತನ ಮೇಲಂತಸ್ತಿನ ಕೊಠಡಿ ಸೇರಿದಂತೆ ನ್ಯಾಯಾಲಯಕ್ಕೆ ಅಗತ್ಯವಿರುವ ಎಲ್ಲಾ ಸವಲತ್ತು ನೀಡಲಾಗಿದೆ ಎಂದರು. ವಕೀಲರ ಮನವಿಗೆ ಸ್ಪಂದಿಸಿದ ಶಾಸಕರು ವಕೀಲರಿಗೆ ಪ್ರತ್ಯೇಕ ವಕೀಲ ಭವನ, ಪಟ್ಟಣದ ವಕೀಲರಿಗೆ ನಿವೇಶನ ನೀಡುವ ಆಶ್ವಾಸನೆ ನೀಡಿದರು.



ಅಲ್ಲದೇ ಈಗಾಗಲೇ ವೈದ್ಯರು ಸೇರಿದಂತೆ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಕೋವಿಡ್ ವೇಳೆ ಉತ್ತಮ ಸೇವೆಗಾಗಿ ಉಡುಗೊರೆ ನೀಡಿ ಸನ್ಮಾನಿಸಲಾಗಿದೆ. ಅದೇ ರೀತಿ ವಕೀಲರು, ಶಿಕ್ಷಕರು ಸೇರಿದಂತೆ ಇತರರಿಗೂ ಉಡುಗೊರೆ ನೀಡಿ ಸನ್ಮಾನಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ದಿಲೀಪ್ ಕುಮಾರ್, ಪ್ರಧಾನ ಕಾರ್ಯದರ್ಶಿ ನೂತನ್, ಮಾಜಿ ಅಧ್ಯಕ್ಷರಾದ ಚಂದ್ರಶೇಖರ್, ತಿಮ್ಮೇಗೌಡ, ಸಾ.ರಾ.ಸ್ನೇಹ ಬಳಗದ ಅಧ್ಯಕ್ಷ ವಿಜಯ್‌ಕುಮಾರ್, ವಕೀಲ ತಿಮ್ಮಪ್ಪ ಮಾತನಾಡಿದರು. ವೇದಿಕೆಯಲ್ಲಿ ವಕೀಲರ ಸಂಘದ ಮಾಜಿ ಅಧ್ಯಕ್ಷ ಗಾಂಧಿ, ವಕೀಲರಾದ ಗಂಗಾಧರ್, ಹರೀಶ್, ನಾಗರಾಜ್, ಶರತ್, ರುದ್ರಮೂರ್ತಿ, ಡಿ.ಆರ್. ರಮೇಶ್, ರವಿಶಂಕರ್, ಪುರಸಭಾ ಸದಸ್ಯ ಕೆ.ಎಲ್. ಜಗದೀಶ್ ಸೇರಿದಂತೆ ವಕೀಲರು, ಮುಖಂಡರು ಹಾಜರಿದ್ದರು.

6 ಶಾಸಕಾಂಗ ಮತ್ತು ಕಾರ್ಯಾಂಗ ಹದಗೆಟ್ಟಿದ್ದು, ನ್ಯಾಯಾಂಗ ಮತ್ತು ಪತ್ರಿಕಾರಂಗ ಪ್ರಾಮಾಣಿಕವಾಗಿ ಸಮಾಜವನ್ನು ಸರಿದಾರಿಗೆ ತರುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಆದರೆ ನ್ಯಾಯವಾದಿಗಳು ಹಾಗೂ ಮಾಧ್ಯಮದವರು ಬೆರಳೆಣಿಕೆಯಷ್ಟು ಮಂದಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬುದನ್ನು ಮರೆಯುವಂತಿಲ್ಲ.

- ಸಾ.ರಾ.ಮಹೇಶ್, ಶಾಸಕ.

ಪ್ರತಿಪಕ್ಷಗಳ ಸವಾಲು ಸ್ವೀಕರಿಸಲು ಕಾರ್ಯಕಾರಿಣಿ ಸಭೆ ಸಹಕಾರಿ

ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್



ಬೈಲಕುಪ್ಪೆ, ನ.24– ರಾಜಕಾರಣದ ಒಂದು ಶಕ್ತಿಯಾಗಿ ಕೆಲಸ ಮಾಡುತ್ತಿರುವ ನಾವು, ನಮ್ಮ ಮುಂದೆ ಬರುವ ಪ್ರತಿಪಕ್ಷಗಳ ಸವಾಲುಗಳನ್ನು ಯಾವ ರೀತಿ ಸ್ವೀಕರಿಸುತ್ತೇವೆ ಎನ್ನುವ ಬಗ್ಗೆ ನಿಖರ, ಸ್ಪಷ್ಟ ನಿಲುವು ಹೊಂದಲು ಈ ಕಾರ್ಯಕಾರಿಣಿ ಸಹಕಾರಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ತಾಲೂಕು ಬಿಜೆಪಿ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕಾರಿಣಿಯಲ್ಲಿ ಮುಂದಿನ ದಿನಗಳಲ್ಲಿ ಯಾವ ರೀತಿ ಪಕ್ಷ ಸಂಘಟಿಸಬಹುದು ಹಾಗೂ ಮುಂಬರುವ ಚುನಾವಣೆ ಎದುರಿಸುವುದು ಹೇಗೆ, ನಾವು ಮಾಡಿರುವ ತಪ್ಪುಗಳು ಮುಂದೆ ನಾವು ಮಾಡಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಬೇಕು. ಆ ಮೂಲಕ ಪಕ್ಷ ಪ್ರಬಲವಾಗುವಂತೆ ಯೋಜನೆ ರೂಪಿಸಿಕೊಳ್ಳಬೇಕು ಎಂದರು.

ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಲಾಭದಾಯಕವಾಗಲಿದೆ ನಮ್ಮ ಸರ್ಕಾರ ಮೋಸ ಮಾಡದೇ, ಎಲ್ಲರಿಗೂ ನ್ಯಾಯ ಒದಗಿಸುತ್ತದೆ. ಆದರೆ ಕಾಂಗ್ರೆಸ್ ಸರ್ಕಾರ ಪ್ರಚಾರ ಬಯಸುತ್ತದೆ ಎಂದರು.

ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಗೌಡ ಮಾತನಾಡಿ, ಬಿಜೆಪಿಯಲ್ಲಿ ವಂಶಪಾರಂಪರ್ಯ ಪದ್ಧತಿ ಇಲ್ಲ. ನಾವು ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತೇವೆ. ಜನರಿಗೆ ತೊಂದರೆಯಾದರೆ ನಾವು ಸರ್ಕಾರದ ವಿರುದ್ಧ ಹೋರಾಡಲು ಮುಂಚೂಣಿಯಲ್ಲಿರುತ್ತೇವೆ. ಬಿಜೆಪಿಯನ್ನು ಜನರು ಬೇರೆ ಪಕ್ಷಕ್ಕಿಂತ ಭಿನ್ನವಾಗಿ ನೋಡುತ್ತಾರೆ. ಜನಸಂಘ ಕಾಲದಿಂದಲೂ ಬಿಜೆಪಿ ಪಕ್ಷ ಜನಾನುರಾಗಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ನಮ್ಮ ಕಾರ್ಯಕರ್ತರು ಚುನಾವಣೆ ವೇಳೆ ಒಟ್ಟಾಗುವುದಿಲ್ಲ. ಚುನಾವಣೆ ಇಲ್ಲದ ವೇಳೆಯೂ ಪಕ್ಷ ಸಂಘಟಿಸುತ್ತಾರೆ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಅವಶ್ಯಕತೆ ಇದ್ದು, ಮುಂಬರುವ ಚುನಾವಣೆಯಲ್ಲಿ ಪಿರಿಯಾಪಟ್ಟಣ ತಾಲೂಕಿನಲ್ಲಿ ಬಿಜೆಪಿ ಶಾಸಕರನ್ನು ಆಯ್ಕೆ ಮಾಡುವುದು ನಮ್ಮ ಮುಂದಿನ ಗುರಿ. ತಾಲೂಕಿನ 34 ಗ್ರಾಪಂಗಳಿಗೂ ಭೇಟಿ ನೀಡಿ, ಬಿಜೆಪಿ ಸರ್ಕಾರದ ಯೋಜನೆಗಳನ್ನು ತಿಳಿಸುತ್ತಾ, ಜನರ ಬಳಿ ಮತ ಪಡೆದು ತಾಲೂಕಿನಲ್ಲಿ ಬಿಜೆಪಿಯ ವಿಜಯೋತ್ಸವ ಆಚರಿಸುತ್ತೇವೆ ಎಂದರು.

ಈ ವೇಳೆ ಮಾಜಿ ಸಚಿವ ವಿಜಯಶಂಕರ್, ಮಾಜಿ ಶಾಸಕ ಹೆಚ್.ಸಿ.ಬಸವರಾಜು, ತಾಲೂಕು ಬಿಜೆಪಿ ಮಹಿಳಾ ಮೋರ್ಚಾ ಗ್ರಾಮಾಂತರ ಕಾರ್ಯದರ್ಶಿ ನಳಿನಿ ಸೇರಿದಂತೆ ಕಾರ್ಯಕರ್ತರು, ಪದಾಧಿಕಾರಿಗಳಿದ್ದರು.